ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆ

# ಶಿಕ್ಷಣ ವಾರ್ತೆ

ಎಲ್ಲರೂ ಕಲಿಯೋಣ

ಸರ್ವಶಿಕ್ಷಣ ಅಭಿಯಾನ

ಎಲ್ಲರೂ ಬೆಳೆಯೋಣ

ಸಂಪುಟ - 7 ಸಂಚಿಕೆ -9 ಫೆಬ್ರವರಿ - 2008 ಆಂತರಿಕ ಪ್ರಸಾರ



## ಧಾರವಾಡ ಜಿಲ್ಲಾ ಶೈಕ್ಷಣಿಕ ವರದಿ .........

# ಚಿತ್ರಸುದ್ದಿ



ದಿನಾಂಕ 06.02.2008 ರಂದು ಕೇಂದ್ರ ಸರ್ಕಾರದ ವತಿಯಿಂದ ಲೈಂಗಿಕ ಶಿಕ್ಷಣ ಪಠ್ಯಪುಸ್ತಕದಲ್ಲಿ ಅವಶ್ಯಕವೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಅಭಿಪ್ರಾಯದ ಸಂಗ್ರಹಣೆಗಾಗಿ ರಾಜ್ಯ ಸಭಾ ಆಯೋಗವು ಬಾಲಕಿಯರ, ಪ.ಪೂ. ಕಲೇಜು ಬಸವನಗುಡಿ, ಬೆಂಗಳೂರು ಇಲ್ಲಿಗೆ ಭೇಟಿ ನೀಡಿತ್ತು. ರಾಜ್ಯ ಸಭಾ ಆಯೋಗದ ಅಧ್ಯಕ್ಷರಾದ ವೆಂಕಯ್ಯನಾಯ್ಡುರವರು ನಮ್ಮ ಘನ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಾದ ವಿಜಯಭಾಸ್ಕರರವರು ಮತ್ತು ಆಯುಕ್ತರನ್ನೊಳಗೊಂಡ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೊಂದಿಗೆ ಮತ್ತು ಪೋಷಕರೊಂದಿಗೆ ಮುಕ್ತ ಸಮಾಲೋಚನೆ ನಡೆಸಿದರು

– ಆರ್. ಸೀತಾಲಕ್ಷ್ಮಿ, ಉಪಪ್ರಾಂಶುಪಾಲರು



ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕು ಅಮೀನಗಡ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಮಕ್ಕಳ ಗ್ರಾಮ ಸಭೆಯಲ್ಲಿ ಮಕ್ಕಳು ಕೇಳಿದ ಶೈಕ್ಷಣಿಕ ಪ್ರಶ್ನೆಗಳಿಗೆ ಬಿ.ಆರ್.ಪಿ.(ಪ್ರೌಢ) ಎನ್.ಎಚ್. ಹೊಸಮನಿ ಪರಿಹಾರ ಸೂಚಿಸುತ್ತಿರುವರು.ಅಧ್ಯಕ್ಷತೆಯನ್ನು ಗ್ರಾ.ಪಂ. ಅಧ್ಯಕ್ಷ ಜಗದೀಶ ಬಿಸಲದನ್ನಿ ವಹಿಸಿದ್ದರು. ವೇದಿಕೆಯ ಮೇಲೆ ವೈದ್ಯಾಧಿಕಾರಿ ಸಿ.ಎಸ್. ಜವಳಿ, ಸಿ.ಇ.ಎಚ್.ಟಿ. ಅಮರಾವತಿ ಸಿ.ಆರ್.ಪಿ. ಬಿ.ಎನ್. ನಾಗನಗೌಡ ಎಸ್.ಡಿ.ಎಂ.ಸಿ. ಅಧ್ಯಕ್ಷರು, ಸದಸ್ಯರು ಗ್ರಾ.ಪಂ. ಸದಸ್ಯರು ಗಣ್ಯರು ಉಪಸ್ಥಿತರಿದ್ದರು.

– ಎನ್.ಎಚ್. ಹೊಸಮನಿ
ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು (ಪ್ರೌಢ)



ಆರ್.ವಿ. ಬಾಲಕಿಯರ ಪ್ರೌಢಶಾಲೆ,ಬಸವನಗುಡಿ, ಬೆಂಗಳೂರು ಇಲ್ಲಿ 24 ಜುಲೈ 2007ರಂದು ಗ್ರಾಹಕ ಸಂಘದ ಉದ್ಘಾಟನೆಯಾಯಿತು. ಈ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗಿ ಷಡಕ್ಷರ ಸ್ವಾಮಿ ಡೆಪ್ಯೂಟಿ ಡೈರೆಕ್ಟರ್, ಆಹಾರ ಮತ್ತು ನಾಗರಿಕ ಸರಬರಾಜು ದ. ವಲಯ ಹಾಗೂ ರವೀಂದ್ರನಾಥ ಗುರು ಗ್ರಾಹಕ ಸಂಘದ ಕಾರ್ಯದರ್ಶಿಯವರು ಕಾರ್ಯಕ್ರಮದ ಗೌರವ ಅತಿಥಿಗಳಾಗಿ ಆಗಮಿಸಿದ್ದು, ವಿದ್ಯಾರ್ಥಿಗಳಿಗೆ "ಗ್ರಾಹಕ ತಿಳುವಳಿಕೆಯ ಅವಶ್ಯಕತೆ"ಯ ಬಗ್ಗೆ ಅನೇಕ ಮೌಲ್ಯಯುತ ಮಾಹಿತಿಗಳನ್ನು ತಿಳಿಸಿಕೊಟ್ಟರು. ಮಕ್ಕಳು ಗಣ್ಯರೊಡನೆ ಸಂವಾದ ನಡೆಸಿ ತಮ್ಮ ಸಂದೇಹವನ್ನು ನಿವಾರಿಸಿಕೊಂಡರು. ಈ ಸಂಘಕ್ಕೆ 210 ವಿದ್ಯಾರ್ಥಿಗಳು ಉತ್ಸುಕರಾಗಿ ಸದಸ್ಯರಾಗಿದ್ದಾರೆ.

– ಆರ್. ಎಸ್. ಪದ್ಮಾ,
ಮುಖ್ಯೋಪಾಧ್ಯಾಯಿನಿ



ಬೆಂಗಳೂರು ನಗರದ ಬಸವನಗುಡಿ ನ್ಯಾಷನಲ್ ಪ್ರೌಢಶಾಲೆಯಲ್ಲಿ ದಿನಾಂಕ 01.08.2007 ಬುಧವಾರದಂದು ಶಾಲೆಯಲ್ಲಿ 'ಗ್ರಾಹಕ ಸಂಘ'ದ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಗ್ರಾಹಕ ಪಾಲನಾ ಸಂಸ್ಥೆಯ ಅಧ್ಯಕ್ಷರಾದ ರವೀಂದ್ರನಾಥ ಗುರುರವರು ಗ್ರಾಹಕ ಸಂಘವನ್ನು ಉದ್ಘಾಟನೆ ಮಾಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ಶಾಲೆಯ ವಿದ್ಯಾರ್ಥಿಗಳೂ ಸಹ ಗ್ರಾಹಕರೇ ಆಗಿದ್ದಾರೆ. ಅವರಲ್ಲಿ ಜಾಗೃತಿಯನ್ನು ಮೂಡಿಸಬೇಕು, ವ್ಯಾಪಾರದಲ್ಲಿ ನಡೆಯುವ ಮೋಸದ ಬಗ್ಗೆ, ಕಳಪೆ ವಸ್ತುಗಳ ಬಗ್ಗೆ, ಐಎಸ್‌ಐ ಆಗ್‌ಮಾರ್ಕ್‌ಗಳ ಬಗ್ಗೆ ಗಮನ ಸೆಳೆದು ಜಾಗೃತರನ್ನಾಗಿ ಮಾಡುವುದು ಹಾಗೂ ಗ್ರಾಹಕ ಕಾನೂನುಗಳ ಬಗ್ಗೆ ಮಾಹಿತಿ ನೀಡುವುದು ಈ ಗ್ರಾಹಕ ಸಂಘದ ಉದ್ದೇಶವಾಗಿದೆ.

– ನರಸಿಂಹಯ್ಯನವರು,
ಮುಖ್ಯೋಪಾಧ್ಯಾಯರು




**ಪ್ರಧಾನ ಸಂಪಾದಕರು**

**ಜಿ.ಕುಮಾರ ನಾಯಕ,** ಆಯುಕ್ತರು, ಸಾ.ಶಿ.ಇ.

**ಕಾರ್ಯನಿರ್ವಾಹಕ ಸಂಪಾದಕರು**

**ವಂದಿತಾ ಶರ್ಮ** ರಾಜ್ಯಯೋಜನಾ ನಿರ್ದೇಶಕರು, ಸ.ಶಿ.ಅ.

**ಎ.ಕೆ.ಮೋನಪ್ಪ,** ಅಪರ ಆಯುಕ್ತರು, ಧಾರವಾಡ.

**ಜಿ.ಎಲ್.ಚಂದ್ರಶೇಖರಯ್ಯ,** ಅಪರ ಆಯುಕ್ತರು, ಗುಲ್ಬರ್ಗಾ.

**ಸದಸ್ಯರು**

**ಡಿ.ಎಸ್.ರಾಜಣ್ಣ,** ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾಮಂಡಳಿ

**ಗಂಗಪ್ಪಗೌಡ,** ನಿರ್ದೇಶಕರು ಪ್ರಾಥಮಿಕ ಶಿಕ್ಷಣ

**ಚಿದ್ರೆ ಶಂಕರಯ್ಯಸ್ವಾಮಿ,** ನಿರ್ದೇಶಕರು, ಪ್ರೌಢಶಿಕ್ಷಣ

**ಮೀರ್ ಒಬೇದುಲ್ಲಾ,** ನಿರ್ದೇಶಕರು, ಈಶಾನ್ಯವಲಯ

**ಹಫೀಜುಲ್ಲಾ ಷರೀಫ್,** ನಿರ್ದೇಶಕರು, ಅಪರ ಆಯುಕ್ತರ ಕಚೇರಿ ಧಾರವಾಡ

**ಈಶ್ವರಭಟ್,** ನಿರ್ದೇಶಕರು, ಸ.ಶಿ.ಅ.

**ಎಮ್.ನಜಾಫುಲ್ಲಾ ಬೇಗ್,** ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.

**ಎಸ್.ಎನ್.ಪ್ರತಿಮಾ,** ನಿರ್ದೇಶಕರು, ಅಲ್ಪಸಂಖ್ಯಾತ ಭಾಷೆಗಳು.

**ಬಿ. ನಂಜುಂಡೇಶ್ವರ,** ಸಹನಿರ್ದೇಶಕರು, ಆಡಳಿತ, ಸಾ.ಶಿ.ಇ.

**ಶಶಿಧರ್.ಕೆ.ಎಸ್.** ಮುಖ್ಯಲೆಕ್ಕಾಧಿಕಾರಿ, ಸ.ಶಿ.ಅ.

**ನಿತ್ಯಾನಂದಾರಾಧ್ಯ,** ಸ.ಕಾ.ಅ., ಸ.ಶಿ.ಅ.

**ಅಧ್ಯಕ್ಷರು,** ಕ.ರಾ.ಪ್ರಾ.ಶಾ.ಶಿ. ಸಂಘ

**ಅಧ್ಯಕ್ಷರು,** ಕ.ರಾ.ಪ್ರೌ.ಶಾ.ಸ.ಶಿ. ಸಂಘ

**ಅಧ್ಯಕ್ಷರು,** ಕ.ರಾ.ಮಾ.ಶಿ.ಸಂಘ

**ಅಧ್ಯಕ್ಷರು,** ಕ.ರಾ.ಪ್ರೌ.ಶಾ.ಮು.: ಮ.ಪೂ.ಕಾ.ಪ್ರಾಂ. ಸಂಘ

**ಸಲಹಾ ಸಮಿತಿ**

**ಡಾ|| ಎಸ್. ಶ್ರೀಕಂಠಸ್ವಾಮಿ,** ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು.

**ಡಾ|| ನಿರಂಜನಾರಾಧ್ಯ,** ಸಂಶೋಧನಾಧಿಕಾರಿಗಳು, ಎನ್.ಎಲ್.ಎಸ್.ಐ.ಯು.,ಬೆಂಗಳೂರು

**ಪ್ರೊ|| ಗಣೇಶ್‌ಭಟ್,** ಎಂ.ಇ.ಎಸ್. ಮಹಾವಿದ್ಯಾಲಯ, ಬೆಂಗಳೂರು.

**ಡಾ|| ಸಿ. ಜಿ. ವೆಂಕಟೇಶ್‌ಮೂರ್ತಿ,** ಆರ್.ಐ.ಇ.,ಮೈಸೂರು

**ಪ್ರೊ|| ಎ.ವಿ. ಗೋವಿಂದರಾವ್,** (ನಿವೃತ್ತ ಪ್ರಾಂಶುಪಾಲರು), ಮೈಸೂರು.

**ಹೆಚ್. ಕುಮಾರಸ್ವಾಮಿ,** ಡಯಟ್, ಮೈಸೂರು.

**ಸಹಸಂಪಾದಕರು : ಜಿ.ವಿನುತ**

**ಕಲಾವಿದ : ಜಿ.ಕೆ. ಶಿವಣ್ಣ**

**ತಾಂತ್ರಿಕ ಬಳಗ : ಸಿ. ಬೋರಯ್ಯ, ಸರಸ್ವತಿ**


**ಆತ್ಮೀಯ ಶಿಕ್ಷಕರೇ,**

"ದೀಪವು ತಾನು ಉರಿಯುತ್ತಿದ್ದರೆ ಮಾತ್ರ ಇನ್ನೊಂದು ದೀಪವನ್ನು ಬೆಳಗಲು ಸಾಧ್ಯ" ಎಂಬ ರವೀಂದ್ರನಾಥ ಠಾಕೂರರ ಉಕ್ತಿ ನಮ್ಮ ಇಲಾಖೆಗೆ ವಿಶೇಷವಾಗಿ ಅನ್ವಯಿಸುತ್ತದೆ. ಇಲಾಖೆಯಲ್ಲಿ ಅಧಿಕಾರಿಗಳು, ಶಿಕ್ಷಕರು ನಿರಂತರ ಕಲಿಕೆಯ ಮನೋಭಾವ ಹೊಂದಿರಬೇಕು. ಅನೇಕರು ನಿಯತಕಾಲಿಕೆಗಳನ್ನು ಮಾತ್ರ ಓದುವ ಅಭ್ಯಾಸ ಹೊಂದಿರುತ್ತಾರೆ. ಶಿಕ್ಷಕರು ಶಾಲಾ ಗ್ರಂಥಾಲಯದಲ್ಲಿ ಲಭ್ಯವಿರುವ ಸಾಹಿತ್ಯವನ್ನಾದರೂ ಓದುವ ಅಭ್ಯಾಸ ಮಾಡಿಕೊಳ್ಳಬೇಕು. ಒಂದು ವರ್ಷದಲ್ಲಿ ನಾವೆಷ್ಟು ಪುಸ್ತಕ ಓದಿದ್ದೇವೆಂದು ನಮ್ಮನ್ನು ನಾವು ಪ್ರಶ್ನಿಸಿಕೊಂಡಾಗ ಕೆಲವರ ಉತ್ತರ ಮಾತ್ರ ಧನಾತ್ಮಕವಾಗಿರುತ್ತದೆ. ಮಕ್ಕಳು ಉತ್ಸಾಹ ತುಂಬಿದ, ಬೆರಗುಗಂಗಳ, ಸದಾ ಪುಟಿಯುವ ಚೈತನ್ಯದ ಚಿಲುಮೆಗಳಾಗಿರುತ್ತಾರೆ. ಅವರ ಉತ್ಸಾಹವನ್ನು ತಣಿಸಲು ನಾವು ಓದಬೇಕು. ಮಕ್ಕಳು ಹೇಗೆ ಕಲಿಯುತ್ತಾರೆ? ಮಕ್ಕಳ ಮನೋವಿಜ್ಞಾನ, ವಿವಿಧ ಹಂತದ ಕಲಿಕೆಯಲ್ಲಿನ ಮಕ್ಕಳ ಬೋಧನಾ ವಿಧಾನಗಳು ಇನ್ನೂ ಮುಂತಾದ ವಿಚಾರಗಳ ಬಗ್ಗೆ ಮೆಲುಕು ಹಾಕಲು ನಾವು ಓದಬೇಕು. ಅಷ್ಟೇ ಅಲ್ಲದೆ ಮಕ್ಕಳನ್ನೂ ಓದಲು ಪ್ರೋತ್ಸಾಹಿಸಬೇಕು. ಹಾಗಾದಾಗ ಮಕ್ಕಳು ಓದಿ ಗ್ರಹಿಸುವಲ್ಲಿನ ಅನೇಕ ಸಮಸ್ಯೆಗಳು ನಿವಾರಣೆಯಾಗುತ್ತವೆಂಬುದು ನನ್ನ ಭಾವನೆ.

ಇಲಾಖೆಯು ಪ್ರತಿ ವರ್ಷದಂತೆ ಈ ವರ್ಷವೂ ಮಕ್ಕಳ ವಿಶೇಷ ಗಣತಿ ಕಾರ್ಯವನ್ನು ಮುಗಿಸಿ ಚಿಣ್ಣರ ಅಂಗಳ ಕಾರ್ಯಕ್ರಮಕ್ಕೆ ತಯಾರಿ ನಡೆಸುತ್ತಿದೆ. ದಿನಾಂಕ 16.04.2008 ರಿಂದ 15.06.2008ರವರೆಗೆ 60 ದಿನಗಳ ಕಾಲ ಕಾರ್ಯಕ್ರಮ ನಡೆಸಲಾಗುವುದು. ಶಾಲೆಯಿಂದ ಹೊರಗುಳಿದ ಮಕ್ಕಳ ಜೊತೆಗೆ ಶಾಲೆಗೆ ಹೋಗುತ್ತಿದ್ದು, ಕಲಿಕೆಯಲ್ಲಿ ಹಿಂದುಳಿದ ಅಂದರೆ, ನಿಧಾನ ಕಲಿಕೆ ಮಕ್ಕಳನ್ನು ಈ ಸಾಲಿನ ಬೇಸಿಗೆ ಚಿಣ್ಣರ ಅಂಗಳದಲ್ಲಿ ಸೇರಿಸಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ವಸತಿಯುತ ಮತ್ತು ವಸತಿರಹಿತ ಚಿಣ್ಣರ ಅಂಗಳಗಳನ್ನು ತೆರೆಯಲಾಗುತ್ತದೆ. 16.06.2008ರಂದು ಮುಖ್ಯವಾಹಿನಿಗೆ ದಾಖಲೆ ಮಾಡಲು ಸೂಚಿಸಿದೆ. ಚಿಣ್ಣರ ಅಂಗಳದಿಂದ ಬಂದ ಮಕ್ಕಳು ನಿರಂತರವಾಗಿ ಶಾಲೆಗೆ ಬರುತ್ತಿರುವ ಬಗ್ಗೆ ನಿಗಾ ವಹಿಸುವುದು ಶಾಲಾ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ.ಯವರ ಜವಾಬ್ದಾರಿಯಾಗಿರುತ್ತದೆ.

ಪರೀಕ್ಷಾ ಸಮಯ ಹತ್ತಿರವಾಗುತ್ತಿದೆ ಮಕ್ಕಳು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಹಾಗೂ ಅಧ್ಯಯನದ ಉತ್ತಮ ಅಭ್ಯಾಸಗಳನ್ನು ಬೆಳೆಸಿಕೊಳ್ಳಲು ತಾವು ಮಾರ್ಗದರ್ಶನ ನೀಡುವ ಅವಶ್ಯಕತೆಯಿದೆ. ಎಸ್.ಎಸ್.ಎಲ್.ಸಿ. ಮಕ್ಕಳಿಗಾಗಿ ವಿಶೇಷ ಬಾನುಲಿ ಪಾಠಗಳು, ಮಾರ್ಗದರ್ಶನ ಬಿತ್ತರವಾಗುತ್ತಿವೆ. ಶಿಕ್ಷಕರ ಶ್ರಮವನ್ನು ಮಕ್ಕಳ ಅಭ್ಯಾಸದ ಶ್ರಮವನ್ನು ಫಲಿತಾಂಶದಿಂದ ತಿಳಿಯಬಹುದಲ್ಲವೆ? ತಮಗೆ ಮತ್ತು ಮಕ್ಕಳಿಗೆ ಯಶಸ್ಸು ದೊರೆಯಲೆಂದು ಆಶಿಸುತ್ತೇನೆ.

ಆಯುಕ್ತರು



# ರಾಜ್ಯ ಯೋಜನಾ ನಿರ್ದೇಶಕರ ನುಡಿ

– ವಂದಿತಾಶರ್ಮ, ಭಾ.ಆ.ಸೇ.

**14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಒದಗಿಸುವುದು ಸಂವಿಧಾನಾತ್ಮಕವಾಗಿ ನಮ್ಮೆಲ್ಲರ ಪ್ರಮುಖ ಬದ್ಧತೆ–ಯಾಗಿದೆ.**

ಪ್ರಾಥಮಿಕ ಶಿಕ್ಷಣದ ಗುಣಾತ್ಮಕ ಸುಧಾರಣೆಗಾಗಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವು ಹಲವಾರು ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸುತ್ತಿದೆ. ಪ್ರಮುಖವಾಗಿ 14 ವಯೋಮಿತಿಯಲ್ಲಿರುವ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲು ಮಾಡುವುದು, ದಾಖಲಾದ ಮಕ್ಕಳೆಲ್ಲಾ ಶಾಲೆಯಲ್ಲಿ ಉಳಿಯುವಂತೆ ಮಾಡುವುದು, ಮತ್ತು ಶಾಲೆಯಲ್ಲಿ ಉಳಿದ ಮಕ್ಕಳು ಜೀವನ ಉಪಯುಕ್ತ, ಗುಣಾತ್ಮಕ ಶಿಕ್ಷಣವನ್ನು ಪಡೆಯುವಂತೆ ಮಾಡುವುದು ಸರ್ವ ಶಿಕ್ಷಣ ಅಭಿಯಾನದ ಪ್ರಮುಖ ಗುರಿಯಾಗಿದೆ. ಈ ಮಹತ್ಕಾರ್ಯದಲ್ಲಿ ಪೋಷಕರು, ಸಮುದಾಯ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಅತ್ಯಗತ್ಯ.

ಮಕ್ಕಳ ಸಾರ್ವತ್ರಿಕ ಕಲಿಕೆಯನ್ನು ಉತ್ತಮಪಡಿಸುವ ದಿಶೆಯಲ್ಲಿ ಶಿಕ್ಷಕರ ಬೋಧನಾ ಸಾಮರ್ಥ್ಯವನ್ನು ಬಲಪಡಿಸುವುದು ಅಗತ್ಯ. ಈ ಹಿನ್ನೆಲೆಯಲ್ಲಿ ವಿವಿಧ ರೀತಿಯ ಅಗತ್ಯಾಧಾರಿತ ಸೇವಾನಿರತ ಶಿಕ್ಷಕರ ತರಬೇತಿ / ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳಲ್ಲಿ ಶಿಕ್ಷಕರು ಸಕ್ರಿಯವಾಗಿ ಭಾಗವಹಿಸಿ, ತಮ್ಮ ತರಗತಿಯ ಬೋಧನೆ ಕಲಿಕೆಯ ಪ್ರಕ್ರಿಯೆಯಲ್ಲಿ ಆವಿಷ್ಕೃತ ವಿಧಾನ, ಚಟುವಟಿಕೆ ಮತ್ತು ಆಚರಣೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಮಕ್ಕಳ ಫಲಪ್ರದ ಕಲಿಕೆಯ ಸಾಧನೆಗೆ ಕಾಳಜಿವಹಿಸುವುದು ಅನಿವಾರ್ಯವಾಗಿದೆ.

ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಗುರಿ ಸಾಧನೆಗಾಗಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಶೋತ್ತರಗಳಿಗೆ ಅನುಗುಣವಾಗಿ ಇಲಾಖೆಯ ಕಾರ್ಯಕ್ರಮಗಳ ಸಮನ್ವಯದೊಂದಿಗೆ, ಶಾಲೆಗಳಿಗೆ ಅಗತ್ಯವಾದ ಭೌತಿಕ ಸೌಲಭ್ಯಗಳು, ಶಿಕ್ಷಕರ ತರಬೇತಿ, ಬೋಧನೆ– ಕಲಿಕೆ ಸಾಮಗ್ರಿಗಳ ಪೂರೈಕೆ, ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗಾಗಿ ಸಮನ್ವಯ ಶಿಕ್ಷಣ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರಲು ವಿಶೇಷ ಕಾರ್ಯತಂತ್ರಗಳು, ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ವಿನೂತನ ಕಾರ್ಯಚಟುವಟಿಕೆಗಳ ಮೂಲಕ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುತ್ತಿದೆ.

ವಿಶೇಷವಾಗಿ ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಸಮುದಾಯದ ಸಂಘಟನೆ ಮತ್ತು ಸಮುದಾಯದ ಜಾಗೃತಿ ಮೂಡಿಸುವುದು ಅತ್ಯಗತ್ಯ. ಈ ಹಿನ್ನೆಲೆಯಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಡಯಟ್ ಮತ್ತು ಬಿ.ಆರ್.ಸಿ.ಗಳ ಮೂಲಕ ಎಸ್.ಡಿ.ಎಂ.ಸಿ. ಹಾಗೂ ಸಮುದಾಯದ ಮುಖಂಡರ ತರಬೇತಿಗಳನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮದ ಯಶಸ್ವಿಗೆ ಶಿಕ್ಷಕರು, ಸಿ.ಆರ್.ಸಿ, ಬಿ.ಆರ್.ಸಿ. ಮತ್ತು ಡಯಟ್ ಸಂಪನ್ಮೂಲ ವ್ಯಕ್ತಿಗಳು ಈ ಕಾರ್ಯಾಗಾರಗಳಲ್ಲಿ ಸಮುದಾಯದ ಮುಖಂಡರು / ಎಸ್.ಡಿ.ಎಂ.ಸಿ. ಸದಸ್ಯರುಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಲು ಅಗತ್ಯವಾದ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ. ಸಮುದಾಯದ ಸಹಭಾಗಿತ್ವದೊಂದಿಗೆ ಪ್ರಾಥಮಿಕ ಶಾಲೆಗಳ ಗುಣಾತ್ಮಕ ಸುಧಾರಣೆಗೆ ಎಲ್ಲಾ ಭಾಗೀದಾರ ಇಲಾಖೆಗಳ ನೆರವಿನೊಂದಿಗೆ ನಮ್ಮೆಲ್ಲರ ಸಾಂಘಿಕ ಪ್ರಯತ್ನ ಅಗತ್ಯ. ಈ ದಿಶೆಯಲ್ಲಿ ನಿಮ್ಮೆಲ್ಲರ ಸಂಪೂರ್ಣ ಸಹಕಾರ ಹಾಗೂ ಪ್ರಾಮಾಣಿಕ ಪ್ರಯತ್ನವನ್ನು ನಿರೀಕ್ಷಿಸುತ್ತೇವೆ.



ರಾಜ್ಯ ಯೋಜನಾ ನಿರ್ದೇಶಕರು

# ನಿಧಾನ ಕಲಿಕೆಯ ಮಕ್ಕಳಿಗೆ ಪರಿಹಾರ ಬೋಧನೆ

## ಒಂದು ಚಿಂತನೆ



– ಡಾ|| ವಿಜಯಾ ಜೋಷಿ
ಮಕ್ಕಳ ಮನಶ್ಶಾಸ್ತ್ರಜ್ಞೆ, ಸ್ಯಾನ್‌ಹೋಸೆ, ಕ್ಯಾಲಿಫೋರ್ನಿಯಾ.

'ಎಲ್ಲರಿಗೂ ಶಿಕ್ಷಣ' ನೀಡುವ ನಿಟ್ಟಿನಲ್ಲಿ ಶಾಲಾ ಶಿಕ್ಷಣ ವಿಶ್ವಮಾನ್ಯವಾದ ಒಂದು ಸುಭದ್ರ ವ್ಯವಸ್ಥೆ. ಸಮಾನತೆ, ಸಹಕಾರ, ಸಹಬಾಳ್ವೆಯನ್ನು ರೂಢಿಸುವ ಶಾಲಾ ಶಿಕ್ಷಣದಲ್ಲಿ ಶಿಕ್ಷಕನದು ಚುಕ್ಕಾಣಿ ಹಿಡಿಯುವ ಜವಾಬ್ದಾರಿ. ಈ ವ್ಯವಸ್ಥೆಯ ಒಂದು ವೈಶಿಷ್ಟ್ಯವೆಂದರೆ, ಈ ಪ್ರವಾಹದಲ್ಲಿ ಎಲ್ಲರೂ ಒಂದೇ ದಡವನ್ನು ಒಟ್ಟಿಗೇ ಸೇರದಿರುವುದು. ಕೆಲವರು ಅಲ್ಲಲ್ಲೇ ನಿಂತರೆ, ಕೆಲವರು ಮಾತ್ರ ಗಮ್ಯಸ್ಥಾನ ತಲುಪುತ್ತಾರೆ. ಪೋಷಕರ ಬಡತನ, ಅನಕ್ಷರತೆ, ಸೌಲಭ್ಯಗಳಿಲ್ಲದಿರುವುದು, ಶಿಕ್ಷಣದ ಬಗ್ಗೆ ಕಾಳಜಿ ಇಲ್ಲದಿರುವುದು, ಅವರ ಔದ್ಯೋಗಿಕ, ಕೌಟುಂಬಿಕ, ಸಾಮಾಜಿಕ ಸಮಸ್ಯೆಗಳು, ಸರ್ಕಾರ ನೀಡುವ ಶೈಕ್ಷಣಿಕ ಸವಲತ್ತುಗಳ ಪರಿಚಯವಿಲ್ಲದಿರುವುದು, ವಿದ್ಯೆಯ ಅಗತ್ಯವನ್ನು ಅರಿಯದೇ ಇರುವುದು–ಇವೆಲ್ಲ ಮಕ್ಕಳ ಶಿಕ್ಷಣದ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ಮಕ್ಕಳನ್ನು ಶಾಲೆಗೆ ಕಳಿಸದೇ ಇರುವುದು, ಅರ್ಧದಲ್ಲಿಯೇ ಶಿಕ್ಷಣವನ್ನು ನಿಲ್ಲಿಸುವುದು ಒಂದು ವಿಧವಾದರೆ, ಶಾಲೆಗೆ ಮಕ್ಕಳು ಬಂದರೂ, ಕ್ರಿಯಾತ್ಮಕವಾಗಿ ಕಲಿಕೆಯಲ್ಲಿ ಪಾಲ್ಗೊಳ್ಳದೇ, ನಿರೀಕ್ಷಿತ ಕಲಿಕಾ ಸಾಮರ್ಥ್ಯ ಪಡೆಯದೇ ಇರುವುದು ಮತ್ತೊಂದು ವಿಧ. ಕೆಲವು ಮಕ್ಕಳು ಅತಿ ಚುರುಕಾಗಿ ಕಲಿಯುತ್ತಾರೆ (ಎ). ಇನ್ನು ಕೆಲವು ಮಕ್ಕಳು ಹೇಗೋ ಅನುಸರಿಸಿಕೊಂಡು, 'ಎ' ಗುಂಪಿನ ಪಟಕ್ಕೆ ಬರುತ್ತಾರೆ (ಬಿ). ಇನ್ನೂ ಕೆಲವು ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುತ್ತಾರೆ.(ಸಿ). 'ಸಿ' ಗುಂಪಿನ ಮಕ್ಕಳಿಗೆ ವಿಶೇಷ ಗಮನ ನೀಡದ ಹೊರತು, ಅವರು ಕಲಿಯಲು ಸಾಧ್ಯವಿಲ್ಲ. ಅವರಿಗೂ ಶಿಕ್ಷಣವನ್ನು ನೀಡಿ, ಅವರ ಭವಿಷ್ಯದ ಬದುಕನ್ನು ರೂಪಿಸುವ ಹೊಣೆ ನಮ್ಮದಾಗಿದೆ. ಅವರನ್ನು 'ನಿಧಾನ ಕಲಿಕೆಯವರು' (slow learners) ಎಂಬುದಾಗಿ ಗುರುತಿಸಬಹುದು. ಮೇಲೆ ಹೇಳಿದ ಕಾರಣಗಳಲ್ಲದೆ, ಮಕ್ಕಳ ವೈಯಕ್ತಿಕ ಕಾರಣಗಳೂ ಅವರ ನಿಧಾನ ಕಲಿಕೆಗೆ ಕಾರಣವಾಗಬಹುದು. ದೈಹಿಕ ನ್ಯೂನತೆಗಳು, ಕೀಳರಿಮೆ, ಮಾನಸಿಕ ಅಸ್ವಸ್ಥತೆ, ಸಹಜ ನಿಧಾನ ಪ್ರವೃತ್ತಿ–ಇವು ಕಲಿಕೆಯ ಓಟದಲ್ಲಿ ಮಗು ಇತರ ಮಕ್ಕಳ ವೇಗವನ್ನು ತಲುಪಲಾರದಂತೆ ಮಾಡುತ್ತವೆ.

ಅಷ್ಟೇ ಅಲ್ಲ, ತರಗತಿಯಲ್ಲಿ ಈ ಮಕ್ಕಳು ಸಮಸ್ಯಾತ್ಮಕವಾಗುತ್ತಾರೆ.

1) ಬೋಧನೆಯತ್ತ ಗಮನಕೊಡದಿರುವುದು
2) ಅಕ್ಕಪಕ್ಕದವರನ್ನು ಕೀಟಲೆ ಮಾಡುವುದು
3) ಕಿಟಕಿಯಿಂದಾಚೆ ಎಲ್ಲೋ ನೋಡುತ್ತಿರುವುದು
4) ಕಾಲುಕುಣಿಸುವುದು,ಡೆಸ್ಕ್‌ಬಡಿಯುವುದು, ಮೈಮುರಿಯುವುದು, ಗೀಚುವುದು ಮುಂತಾದ ದುರಭ್ಯಾಸಗಳಿಗೆ ಈಡಾಗುವುದು (Mannerisms)
5) ಮನಸ್ಸು ಬಹಳ ಬೇಗ ದುರ್ಮಾರ್ಗದತ್ತ ಹೊರಳುತ್ತದೆ.
6) ಅಪರಾಧ ಪ್ರವೃತ್ತಿ ಬೆಳೆಯುತ್ತದೆ – ನಕಲು ಮಾಡುವುದು, ಸುಳ್ಳು ಹೇಳುವುದು, ಸಣ್ಣಪುಟ್ಟ ಕಳ್ಳತನ, ಇತರರನ್ನು ಹಿಂಸಿಸುವುದು, ಪ್ರತಿಭಟಿಸುವುದು ಇಷ್ಟವಾಗುತ್ತದೆ. ಕಲಿಕೆಗಿಂತ ಅಪರಾಧ ಮಾರ್ಗ ಅವರಿಗೆ ಸಾಗಲು ಸುಲಭ, ಅನುಕೂಲ (Convenient to learn)
7) ಕೋಪ, ದ್ವೇಷ ಬಹಳ ಬೇಗ ಆವರಿಸುತ್ತದೆ.
8) ಎಲ್ಲದರಲ್ಲೂ ನಿರಾಸಕ್ತಿ, ಆತ್ಮಹತ್ಯಾ ಪ್ರವೃತ್ತಿ, ಅಪರಾಧೀ ಮನೋಭಾವ (Guilt)ವನ್ನು ವಿನಾಕಾರಣ ಬೆಳೆಸಿಕೊಳ್ಳುತ್ತಾರೆ.
9) ಮಾನಸಿಕ ಒತ್ತಡದಿಂದ ಬಳಲುವುದು (Frustration), ಮಾತಿನಲ್ಲಿ ತೊದಲುವುದು, ಆಗಾಗ್ಗೆ ಫಿಟ್ಸ್ ಬರುವುದು, ಇಲ್ಲದ ಕಾಯಿಲೆಗಳನ್ನು ವ್ಯಕ್ತಪಡಿಸುವುದು ಉದಾ: ತಲೆನೋವು, ಹೊಟ್ಟೆನೋವು, ಎದೆನೋವು, ಉರಿ ಇತ್ಯಾದಿ.

ಈ ಮಕ್ಕಳು ಓದುವುದು ಹೊರತು ಇತರ ಚಟುವಟಿಕೆಗಳಲ್ಲಿ ಮುಂದಾಗಿರುತ್ತಾರೆ. ಸಂಗೀತ, ಚಿತ್ರಕಲೆ, ಆಟಗಳು, ತರಗತಿಯ ನಾಯಕಸ್ಥಾನ, ವರ್ಣದ ಬ್ಲಾಕ್‌ಗಳನ್ನು ಪೂರ್ಣಚಿತ್ರವಾಗಿ ಜೋಡಿಸುವಂತಹ ಆಟಗಳು (Special Reasoning), ಇವುಗಳಲ್ಲಿ ನಿಸ್ಸೀಮರಾಗಿರುತ್ತಾರೆ.

ನಿಧಾನ ಕಲಿಕೆಯ ಮಕ್ಕಳಿಗೆ ಹಸಿವು ಹೆಚ್ಚು ಎಂಬುದನ್ನು ಮನಶ್ಶಾಸ್ತ್ರಜ್ಞರು ಪತ್ತೆ ಹಚ್ಚಿದ್ದಾರೆ. ಈ ದೃಷ್ಟಿಯಲ್ಲಿ ಮಧ್ಯಾಹ್ನ ಉಪಾಹಾರ ಯೋಜನೆ ಅವರ ಮಾನಸಿಕ ಒತ್ತಡವನ್ನು ಕಡಿಮೆಮಾಡುವಂತಹ ಒಂದು ಸಾರ್ಥಕ ಕಾರ್ಯಕ್ರಮ.

**ನಿಧಾನ ಕಲಿಕೆಗೆ ಪರಿಹಾರ ಬೋಧನೆ ಮಾತ್ರವಲ್ಲ....**

* ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಅಸಡ್ಡೆಯಿಂದ ಕಾಣದೇ ಕಲಿಕೆಗೆ ಪ್ರೋತ್ಸಾಹಿಸಿ.
* ಶಿಕ್ಷಕರ ಸಹನೆ, ಪ್ರೀತಿ, ಶ್ರದ್ಧೆಗಳಿಗೆ ಈ ಮಕ್ಕಳು ಸವಾಲು ಎಂಬುದನ್ನು ಗಮನಿಸಿ.
* ಮಗುವಿನ ಪ್ರತಿಭೆ, ಚಟುವಟಿಕೆಗಳಿಗೆ ವೇದಿಕೆ, ಅವಕಾಶ ನೀಡಿ.
* ಪ್ರತಿ ಮಗುವಿನ ಕಲಿಕಾಮಟ್ಟವನ್ನು ಚಾರ್ಟು ಮಾಡಿ.
* ಅಗತ್ಯಬಿದ್ದಲ್ಲಿ ಮಗುವಿನ ಪೋಷಕರು, ಹಿರಿಯರು, ಮನಶ್ಶಾಸ್ತ್ರಜ್ಞರು, ವೈದ್ಯರುಗಳನ್ನು ಸಂಪರ್ಕಿಸಲು ತಡಮಾಡಬೇಡಿ.
* ಮಗು ಪ್ರಯೋಗ ಪಶುವಲ್ಲ. ಆತನೊಂದಿಗೆ ನೀವು ಮಿತ್ರರಂತೆ ವರ್ತಿಸಿ.
* ಇತ್ತೀಚಿನ ಹಿಂದಿ ಚಲನಚಿತ್ರ 'ತಾರೆ ಜಮೀನ್‌ಪರ್' ಈ ಎಲ್ಲ ಅಂಶಗಳನ್ನು ಒಳಗೊಂಡ ಒಂದು ಅತ್ಯುತ್ತಮ ಚಿತ್ರ. ಈ ಚಲನಚಿತ್ರ ನೀಡುವ ಸಂದೇಶವನ್ನು ಸ್ವೀಕರಿಸಿ, ನಿಮ್ಮ ವೃತ್ತಿಯಲ್ಲಿ ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ.

ಪ್ರತಿ ಮಗುವಿನ ಭವಿಷ್ಯ ಅರಳುವಂತೆ ಮಾಡುವುದು ಶಿಕ್ಷಕರ ಕರ್ತವ್ಯ. ಕಲಿಕೆಯಲ್ಲಿ ಹಿಂದುಳಿದ ಮಗುವಿನ ಭವಿಷ್ಯವನ್ನು ಗುರುತಿಸಿ ರೂಪಿಸುವುದರಿಂದ ಶಿಕ್ಷಕ ವೃತ್ತಿಯ ಘನತೆ ಹೆಚ್ಚುತ್ತದೆ.

ಇಂಗ್ಲಿಷ್‌ನಿಂದ ಕನ್ನಡಕ್ಕೆ : **ಕೆ.ಜಿ.ಕಲಾವತಿ**



# ಅಲೆಮಾರಿ ಜನಾಂಗದ ಆಶಾಕಿರಣ ಟೆಂಟ್ ಶಾಲೆ

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ರಾಮಗಿರಿ ಕ್ಲಸ್ಟರ್ ಮಟ್ಟದಲ್ಲಿ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯ ವಾಹಿನಿಗೆ ತರಲು ಇಲಾಖೆಯು ಪ್ರಾರಂಭಿಸಿದ ವಿನೂತನ ಟೆಂಟ್ ಶಾಲೆಯನ್ನು ತೆರೆಯಲಾಗಿದೆ.

ಹಿನ್ನೆಲೆ : ಹೊಟ್ಟೆ ಪಾಡಿಗಾಗಿ ಊರೂರು ಅಲೆಯುತ್ತಾ ಸಂಚರಿಸುವ ವಲಸೆ ಕುಟುಂಬಗಳಿಗೆ ನೆಲೆ ಎಂಬುದೇ ಇಲ್ಲ. ಇಂತಹ ಕುಟುಂಬಗಳ ತಂದೆ–ತಾಯಿಗಳಿಗೆ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಬಗ್ಗೆ ಸ್ವಲ್ಪ ಕೂಡಾ ಕಾಳಜಿ ಇಲ್ಲ. ಇವರಿಗೆ ದಿನನಿತ್ಯ ತಮ್ಮ ಹೊಟ್ಟೆಯದೇ ಚಿಂತೆ. ಈ ರೀತಿ ಶಿಕ್ಷಣ ವಂಚಿತ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸುವ ಯೋಜನೆಯನ್ನು ಸರ್ವ ಶಿಕ್ಷಣ ಅಭಿಯಾನ ರೂಪಿಸಿದೆ. ದೂರದ ಬಾಗಲಕೋಟೆ, ಕೊಪ್ಪಳ, ಗಂಗಾವತಿಯಿಂದ ಕೂಲಿಗಾಗಿ ವಲಸೆ ಬಂದಿರುವ ನೂರಾರು ಕುಟುಂಬಗಳು ಚಿತ್ರದುರ್ಗ ಜಿಲ್ಲೆಯ ವಿವಿಧ ಊರುಗಳಲ್ಲಿ ಗಣಿಗಾರಿಕೆ ನಡೆಯುವ ಸ್ಥಳಗಳಲ್ಲಿ, ಕೃಷಿ ಕಾರ್ಯಗಳು ನಡೆಯುವ ಸ್ಥಳಗಳಲ್ಲಿ ನೆಲೆಸಿರುತ್ತಾರೆ. ಕೂಲಿ ಮಾಡುವ ಉದ್ದೇಶದಿಂದ ಸುಮಾರು ಇಪ್ಪತ್ತು ಕುಟುಂಬಗಳು ಗುಳೇ ಬಂದು ತೆಂಗಿನ ಗರಿ ಮತ್ತು ಪ್ಲಾಸ್ಟಿಕ್ ಹಾಳೆಗಳಿಂದ ಚಿಕ್ಕಚಿಕ್ಕ ಗುಡಿಸಲುಗಳನ್ನು ತಾಲ್ಲೂಕಿನ ಮುದ್ದಾಪುರ ಮತ್ತು ನವಣೆಕೆರೆ ಮಧ್ಯದಲ್ಲಿ ನಿರ್ಮಿಸಿಕೊಂಡಿದ್ದಾರೆ. ದೊಡ್ಡವರು ಕೂಲಿ ಕೆಲಸಕ್ಕೆ ಹೋದಾಗ ಸುಮಾರು 20 ಚಿಕ್ಕಮಕ್ಕಳು ಬಿಸಿಲಿನಲ್ಲಿ ಆಟವಾಡುತ್ತ ಕಾಲಹರಣ ಮಾಡುತ್ತಿದ್ದರು. ಈ ಅಲೆಮಾರಿ ಮಕ್ಕಳ ಭವಿಷ್ಯಕ್ಕೆ ಆಶಾಕಿರಣ ಮೂಡಿಸಲು ಸ್ಥಳೀಯ ಜನರ ಸಹಕಾರದಿಂದ ಬಯಲಿನಲ್ಲಿ ತೆಂಗಿನ ಗರಿಗಳಿಂದ ಟೆಂಟ್‌ಶಾಲೆಯನ್ನು ತೆರೆಯಲಾಗಿದೆ. ಅಲೆಮಾರಿ ಜನಾಂಗದ ಮಾತೃಭಾಷೆಯ ಬಗ್ಗೆ ಹೆಚ್ಚು ಜ್ಞಾನವಿರುವ ಲಂಬಾಣಿ ತಾಂಡದಲ್ಲಿ ಸೇವೆ ಸಲ್ಲಿಸಿದ ಶ್ರೀ ಎಸ್. ರಾಮಚಂದ್ರಪ್ಪ, ಸ.ಶಿ.ರನ್ನು ಟೆಂಟ್ ಶಾಲೆಯ ಶಿಕ್ಷಕರಾಗಿ ನಿಯೋಜಿಸಲಾಗಿದೆ.

ಹಾಗೂ ಈ ಅಲೆಮಾರಿ ಮಕ್ಕಳಿಗೆ ಎಸ್.ಎಸ್.ಎ. ವತಿಯಿಂದ ಉಚಿತ ಪಠ್ಯಪುಸ್ತಕ, ಲೇಖನ ಸಾಮಗ್ರಿಗಳು, ಸಮವಸ್ತ್ರಗಳನ್ನು ನೀಡಲಾಗಿದೆ. ಮಧ್ಯಾಹ್ನದ ವೇಳೆಯಲ್ಲಿ ಬಿಸಿಯೂಟದ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಸಂದರ್ಭದಲ್ಲಿ ಕ್ರಿಯಾಶೀಲ ಸಂಪನ್ಮೂಲ ವ್ಯಕ್ತಿಯ ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತ ತಾಲ್ಲೂಕಿನ ಎಸ್.ಎಸ್.ಎ. ಅಧಿಕಾರಿಗಳನ್ನು ಅಕ್ಷರ ದಾಸೋಹ ಕಾರ್ಯಕ್ರಮವನ್ನು ರಾಮಗಿರಿ ಕ್ಲಸ್ಟರ್ ಸದಾ ಸ್ಮರಿಸುತ್ತದೆ.

ಈ ಅಲೆಮಾರಿ ಜನಾಂಗದ ಕೂಲಿಕಾರರಾದ ಚಿಕ್ಕ ಮಕ್ಕಳ ತಂದೆ–ತಾಯಂದಿರು, "ನಾವಂತೂ ವಿದ್ಯೆ ಕಲಿಯಲಿಲ್ಲ. ನಮ್ಮ ಮಕ್ಕಳಿಗೆ ವಿದ್ಯೆ ಕಲಿಸಲು ಸಾಧ್ಯವಾಗಿಲ್ಲ. ನಮ್ಮ ಮಕ್ಕಳನ್ನು ಗುರ್ತಿಸಿ ನಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡಲು ವ್ಯವಸ್ಥೆ ಮಾಡಿರುವ ಸರ್ವ ಶಿಕ್ಷಣ ಅಭಿಯಾನಕ್ಕೆ ನಮ್ಮ ನಮಸ್ಕಾರಗಳು" ಎಂದು ಹೃದಯ ತುಂಬಿ ಸ್ಮರಿಸುತ್ತಾರೆ.

---

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಯುಕ್ತರ ಕಛೇರಿ,**

**ನೃಪತುಂಗ ರಸ್ತೆ, ಬೆಂಗಳೂರು–560 001**

ಸಂಖ್ಯೆ: ಸಿ4(6) ರಜೆ 24/2001–02 ದಿನಾಂಕ : 23.02.2008

**ಅಧಿಕೃತ ಜ್ಞಾಪನ**

**ವಿಷಯ : 2––8–09ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಸೆಮಿಸ್ಟರ್ ಅವಧಿಗಳು ಮತ್ತು ರಜಾ ಅವಧಿಗಳನ್ನು ನಿಗಧಿಪಡಿಸುವ ಬಗ್ಗೆ**

ಉಲ್ಲೇಖ: ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ : ಸಿಕ(6): ಸಿ4(6) ರಜೆ 24/2001–02 ದಿನಾಂಕ 23.02.2007

ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ 2008–09ನೇ ಸಾಲಿನ ಶೈಕ್ಷಣಿಕ ವರ್ಷದ ಸೆಮಿಸ್ಟರ್ ಅವಧಿಗಳು, ಮಧ್ಯಂತರ ರಜೆ, ಹಾಗೂ ಬೇಸಿಗೆ ರಜೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿ ಆದೇಶಿಸಿದೆ.

**ಸೆಮಿಸ್ಟರ್ ಅವಧಿಗಳು**

ಮೊದಲನೇ ಸೆಮಿಸ್ಟರ್: 30.05.2008 ರಿಂದ ದಿ.07.10.2008, ಎರಡನೇ ಸೆಮಿಸ್ಟರ್, ದಿ. 30.10.2008 ರಿಂದ ದಿ. 10.04.2009

**ರಜಾ ಅವಧಿಗಳು : ಮಧ್ಯಂತರ ರಜೆ, ದಿ.08.10.2008 ರಿಂದ ದಿ.29.10.2008,**

**ಬೇಸಿಗೆ ರಜೆ: ದಿ. 11.04.2009 ರಿಂದ ದಿ. 29.05.2009**

**ಸಹಿ/–**

**(ಜಿ. ಕುಮಾರ ನಾಯಕ)**


ಆಯುಕ್ತರು



## ಯೋಗಾಸನಗಳು

ಸಿ.ರಾಮಸ್ವಾಮಿ, ಎಂ.ಎ.ಬಿ.ಪಿ.ಎಡ್.ಯೋಗನಿರ್ದೇಶಕರು
ಶ್ರೀ ವಾಣಿಬಾಲಕಿಯರ ಪ್ರೌಢಶಾಲೆ, ರಾಜಾಜಿನಗರ,
ಬೆಂಗಳೂರು-10, ಮೊ: 9448245699

**ಪ್ರಸಾರಿತ ಪಾದೋತ್ತಾನಾಸನ**



ಅಭ್ಯಾಸಕ್ರಮ

1. ಸಮಸ್ಥಿತಿಯಲ್ಲಿ ನಿಲ್ಲಬೇಕು. ನಂತರ ಪೂರಕಮಾಡಿ ಜಿಗಿದು ಅಥವಾ ನಿಧಾನವಾಗಿ ಎರಡು ಕಾಲುಗಳನ್ನು ಎತ್ತರಕ್ಕನುಗುಣವಾಗಿ ವಿಶಾಲವಾಗಿ ತೆರೆದಿಡಬೇಕು.

2.ಪೂರಕದೊಡನೆ ಎರಡೂ ಕೈಗಳನ್ನು ಎದೆಯ ಮುಂಭಾಗದಲ್ಲಿ ಹಸ್ತಗಳು ಭೂಮಿಗೆ ಅಭಿಮುಖವಾಗಿರುವಂತೆ ನಿಲ್ಲಿಸಬೇಕು. ಮುಂದೆ ನೋಡುತ್ತಿರಬೇಕು.

3.ಪೂರಕದೊಡನೆ ಸೊಂಟವನ್ನು ಬಿಗಿಗೊಳಿಸಿ ನಂತರ ರೇಚಕದೊಡನೆ ಸೊಂಟವನ್ನು ನಿಧಾನವಾಗಿ ಮುಂದೆ ಬಾಗಿಸುತ್ತ ಹಸ್ತಗಳೆರಡನ್ನು ಪಾದಗಳ ನೇರದಲ್ಲಿ ನೆಲಕ್ಕೆ ಒತ್ತಿ ಇಡಬೇಕು ಮುಂದೆ ನೋಡಬೇಕು.

4.ರೇಚಕದೊಡನೆ ಸೊಂಟವನ್ನು ಸಂಪೂರ್ಣ ಸಡಿಲಗೊಳಿಸಿ ಮೊಳಕೈಗಳನ್ನು ಮಡಿಸುತ್ತ ಸಾಧ್ಯವಾದರೆ ಕಾಲುಗಳನ್ನು ಇನ್ನೂ ವಿಶಾಲವಾಗಿಡುತ್ತ ತಲೆಯನ್ನು ಮುಂದೆ ಬಾಗಿಸಿ ನೆಡುನೆತ್ತಿಯನ್ನು ಎರಡೂ ಹಸ್ತಗಳ ಮಧ್ಯೆ ನೆಲದ ಮೇಲೆ ಒರಗಿಸಿಡಬೇಕು. ಕ್ಷಣಕಾಲ ಮಿತವಾದ ಉಸಿರಾಟದೊಂದಿಗೆ ನೆಲೆಸಿದ್ದು ನಿಧಾನವಾಗಿ ಮೇಲಿನ ಕ್ರಮದಂತೆ ಹಿಂದಿರುಗಿ ಸಮಸ್ಥಿತಿಗೆ ಬರಬೇಕು.

**ಪರಿಣಾಮ :** ತೊಡೆಯ ಹಿಂಭಾಗದ ಸ್ನಾಯುಗಳು ಹಿಗ್ಗಿ ಕಿಬ್ಬೊಟ್ಟೆಯು ಕುಗ್ಗಿ ಕೊಬ್ಬನ್ನು ಕರಗಿಸುತ್ತದೆ. ತಲೆಯ ಭಾಗಕ್ಕೆ ಹೆಚ್ಚು ರಕ್ತವನ್ನು ಒದಗಿಸಿ ಮುಖದ ಕಾಂತಿಯನ್ನು ಹೆಚ್ಚಿಸುತ್ತದೆ.

**ಏಕಪಾದ ನಾವಾಸನ :**



1.ಸಮಸ್ಥಿತಿಯಲ್ಲಿ ಕೂರಬೇಕು. ಪೂರಕದೊಡನೆ ಎರಡೂ ತೋಳುಗಳನ್ನು ಭುಜದ ನೇರದಲ್ಲಿ ನಿಲ್ಲಿಸಬೇಕು.

2.ಪೂರಕದೊಡನೆ ಸೊಂಟದಿಂದ ಮೇಲ್ಭಾಗದ ದೇಹವನ್ನು ಸುಮಾರು 60 ಡಿಗ್ರಿಯಷ್ಟು ಹಿಂದಕ್ಕೆ ಬಾಗಿಸಬೇಕು. ಮಿತವಾದ ಉಸಿರಾಟದೊಂದಿಗೆ ನೆಲೆಸಬೇಕು.

3. ಹೊಟ್ಟೆಯನ್ನು ಬಿಗಿಗೊಳಿಸಿ ಪೂರಕದೊಡನೆ ಎಡಗಾಲನ್ನು 60 ಡಿಗ್ರಿಯಷ್ಟು ಅಥವ ಸಾಧ್ಯವಾದಷ್ಟು ಮೇಲೆತ್ತಿ ನಿಲ್ಲಿಸಬೇಕು. ಕ್ಷಣ ಕಾಲ ನೆಲೆಸಿದ್ದು ನಿಧಾನವಾಗಿ ಕಾಲನ್ನು ಕೆಳಗಿಳಿಸಬೇಕು.

4.ನಂತರ ಪೂರಕದೊಡನೆ ಬಲಗಾಲನ್ನು ಮೇಲೆತ್ತಿ ಕ್ಷಣಕಾಲ ನೆಲೆಸಿದ್ದು ನಂತರ ಕ್ರಮವಾಗಿ ಹಿಂದಿರುಗಿ ವಿಶ್ರಮಿಸಿಕೊಳ್ಳಬೇಕು.

ಪರಿಣಾಮ : ಹೊಟ್ಟೆ, ಎದೆ, ಕಿಬ್ಬೊಟ್ಟೆಗಳು ಚೆನ್ನಾಗಿ ಪಳಗಿ ಕೊಬ್ಬನ್ನು ಕರಗಿಸಿ ಹೊಟ್ಟೆಯನ್ನು ತೆಳ್ಳಗಿಡುತ್ತದೆ. ಹೊಟ್ಟೆಯ ತೊಂದರೆಗಳನ್ನು ಹೋಗಲಾಡಿಸುತ್ತದೆ. ಸೊಂಟದ ಶಕ್ತಿಯನ್ನು ಹೆಚ್ಚಿಸುತ್ತದೆ.

**ಏಕಪಾದ ಶಲಭಾಸನ :**

ಸ್ಥಿತಿ: ಹೊಟ್ಟೆಯನ್ನು ನೆಲಕ್ಕೆ ಹಾಕಿ ಮಲಗಬೇಕು ಪಾದಗಳನ್ನು ಜೋಡಿಸಿ ಗದ್ದವನ್ನು ನೆಲಕ್ಕಿಟ್ಟು ತೋಳುಗಳು ಅಕ್ಕ ಪಕ್ಕದಲ್ಲಿ ನೆಲೆಸಿರಬೇಕು.



1.ಪೂರಕದೊಡನೆ ಭುಜ, ತೋಳುಹಾಗೂ ತುದಿಗಾಲುಗಳ ಸಹಾಯದಿಂದ ಹೊಟ್ಟೆಯನ್ನು ನೆಲದಿಂದ ಸಾಧ್ಯವಾದಷ್ಟು ಮೇಲಕ್ಕೆತ್ತಬೇಕು.

2. ಮಿತವಾದ ಉಸಿರಾಟದೊಂದಿಗೆ ಎರಡೂ ತೋಳುಗಳನ್ನು ಹೊಟ್ಟೆಯ ಒಳಭಾಗದಲ್ಲಿ ನೇರಗೊಳಿಸಿ ಹಸ್ತವು ಮೇಲ್ಮುಖವಾಗಿ ರುವಂತಿಡಬೇಕು. ನಂತರ ಹೊಟ್ಟೆಯನ್ನು ತೋಳುಗಳ ಮೇಲೆ ವರಗಿಸಬೇಕು.

3.ಪೂರಕದೊಡನೆ ನಿಮ್ಮ ಎಡಗಾಲನ್ನು ಮಡಿಸದೆ ನೇರಮಾಡಿ ಸಾಧ್ಯವಾದಷ್ಟು ಮೇಲಕ್ಕೆತ್ತಿ ನಿಲ್ಲಿಸಬೇಕು. ನಂತರ ವಿಶ್ರಾಂತಿ.

4.ಪೂರಕದೊಡನೆ ಬಲಗಾಲನ್ನು ಮೇಲೆತ್ತಿ ನಿಲ್ಲಿಸಬೇಕು.

**ಪರಿಣಾಮ :** ಹೊಟ್ಟೆ ಕಿಬ್ಬೊಟ್ಟೆ, ಜನನೇಂದ್ರಿಯ, ಮೂತ್ರಕೋಶ ಕಿಡ್ನಿಯಲ್ಲಿರಬಹುದಾದ ರೋಗಗಳು ಕ್ರಮೇಣ ಮಾಯವಾಗುತ್ತವೆ. ಬೆನ್ನು, ಸೊಂಟ ಪಳಗಿ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತದೆ.

**ಅಷ್ಟಾಂಗ ಯೋಗದ ಎರಡನೆ ಮೆಟ್ಟಿಲು ನಿಯಮ. ಇದರಲ್ಲಿ ಐದು ಸೂತ್ರಗಳಿವೆ. ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನ, ಪ್ರಪಂಚದ ಯಾವುದೇ ವ್ಯಕ್ತಿ ಅನುಸರಿಸಬೇಕಾದ ವೈಯಕ್ತಿಕ ಶಿಸ್ತು ಇದರಲ್ಲಡಗಿದೆ.**

## ಸ್ವಾಧ್ಯಾಯ

ಸ್ವಾಧ್ಯಾಯ ಎಂದರೆ ಸ್ವ ಅಧ್ಯಾಯ ಎಂದು ಅರ್ಥ, ತನ್ನನ್ನು ತಾನು ಅರ್ಥಮಾಡಿಕೊಳ್ಳುವುದು ಅಥವಾ ಮನಸ್ಸನ್ನು ಗಮನಿಸುವುದು, ಆಲೋಚನೆಗಳನ್ನು ವಿಶ್ಲೇಷಿಸುವುದು ಎಂಬುದು ಮೂಲಾರ್ಥ. ಶ್ರವಣ, ಮನನ, ನಿಧಿಧ್ಯಾಸಗಳು ಸ್ವಾಧ್ಯಾಯದ ಅಭ್ಯಾಸಕ್ಕೆ ಅಗತ್ಯ ಸಾಧನಗಳು. ಗುರುಮುಖೇಣ ಕೇಳಿದ ವಿಷಯವನ್ನು ಮನಸ್ಸಿನಲ್ಲಿಯೇ ಸತತವಾಗಿ ನೆನೆಯುತ್ತಾ ವಿಷಯ ಗಟ್ಟಿಗೊಂಡಂತೆ ಅದು ನಿಧಿಧ್ಯಾಸವಾಗಿ ವ್ಯಕ್ತಿ ಮನಸ್ಸಿನ ಮೇಲೆ ಹಿಡಿತ ಸಾಧಿಸಲು ಸ್ವಾಧ್ಯಾಯ ಉಪಯುಕ್ತ ವಿಚಾರ.

# "300 ವರ್ಷಗಳ ಹಿಂದಿನ ಕಬ್ಬಿಣ ತಯಾರಿಕೆ ಉದ್ದಿಮೆ ಪತ್ತೆ"



ಧಾರವಾಡ ತಾಲ್ಲೂಕು ತೇಗೂರು ಗ್ರಾಮದ ಈಶಾನ್ಯ ದಿಕ್ಕಿನಲ್ಲಿ ದೊಡ್ಡದಾದ ಬೂದಿಯ ರಾಶಿ ಇದ್ದು ಇದನ್ನು ಪರಿಶೀಲಿಸಿದಾಗ ಇಲ್ಲಿ ಕಲ್ಲಿದ್ದಲು, ಸುಟ್ಟಕಲ್ಲುಗಳು ಕಬ್ಬಿಣದ ಚೂರುಗಳು ಬಿದ್ದಿವೆ, ಇದರ ಪಕ್ಕದಲ್ಲಿಯೇ ಕರೆಮ್ಮದೇವಿ ದೇವಸ್ಥಾನವಿದ್ದು ಈ ದೇವರನ್ನು ಕುಲುಮೆ ಕರೆಮ್ಮ ಎಂದು ಕರೆಯುತ್ತಾರೆ. ಇದು ಸಂಪೂರ್ಣವಾಗಿ ಮಣ್ಣು ಮತ್ತು ಬೂದಿಯ ರಾಶಿಯಿಂದ ಮುಚ್ಚಿದೆ. ಇಲ್ಲಿಯ ಹಿರಿಯರ ಹೇಳಿಕೆ ಪ್ರಕಾರ ಇಲ್ಲಿಯ ಪರಿಸರದಲ್ಲಿ ಸಿಗುವ ಕಲ್ಲನ್ನು ದೊಡ್ಡದಾದ ಕುಲುಮೆಯಲ್ಲಿ ಹಾಕಿ ಅದಕ್ಕೆ ಕಲ್ಲಿದ್ದಲು ಬೆರೆಸಿ ಮತ್ತೆ ಅದರಲ್ಲಿ ಕೆಲವು ಗಿಡ ಮೂಲಿಕೆ ರಸ ಬೆರೆಸಿ ಉರಿಯುತ್ತಿರುವ ದೊಡ್ಡದಾದ ಕುಲುಮೆಯಲ್ಲಿ ಕಾಯಿಸಿ ಕಬ್ಬಿಣ ತಯಾರಿಸುತ್ತಿದ್ದರು ಈ ಕಬ್ಬಿಣವನ್ನು ವ್ಯವಸಾಯದ ಸಾಧನ ಸಲಕರಣೆ ತಯಾರಿಸಲು ಹಾಗೂ ಆಯುಧಗಳ ತಯಾರಿಕೆಗೆ ಬಳಸುತ್ತಿದ್ದರೆಂದು ತಿಳಿದುಬಂದಿದೆ. ಅಲ್ಲದೆ ಈ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಕೋಟೆ ಇರುವ ಕುರುಹು ಇದೆ. ಇದರ ಸುತ್ತಲೂ ನೀರು ನಿಲ್ಲುವ ಲಾಗಳಿ ಕಂಡು ಬರುತ್ತಿದೆ ಮತ್ತು ಇದೇ ಸ್ಥಳದಲ್ಲಿ ಒಂದು ಶಾಸನ ದೊರೆತಿದ್ದು ಇದರ ಹೆಚ್ಚು ಭಾಗ ಸವೆದು ಹೋಗಿದೆ.

ಈ ಗ್ರಾಮಕ್ಕೆ ಸಮೀಪ ಇರುವ ಹಾಳಸಿದ್ದಾಪುರ ಗ್ರಾಮದಲ್ಲಿ ಚಾಲುಕ್ಯ ಶೈಲಿ ಹೋಲುವ 5 ಲಿಂಗಗಳಿಂದ ಕೂಡಿದ ಪಂಚಲಿಂಗೇಶ್ವರ ದೇವಸ್ಥಾನವಿದೆ ಈ ದೇವಸ್ಥಾನದಿಂದ ಸ್ವಲ್ಪ ದೂರದಲ್ಲಿಯೇ ದೊಡ್ಡದಾದ ಬಸವಣ್ಣನ ಮೂರ್ತಿ ಇದ್ದು, ಅದರಲ್ಲಿ ನಿಧಿ ಇರಬಹುದೆಂದು ಆ ಮೂರ್ತಿಯನ್ನು ಒಡೆದು ಹಾಕಿರುವುದು ಮತ್ತು ಗುಡಿಯ ಸುತ್ತ ಮುತ್ತ ಅಗೆದಿರುವುದು ಕಂಡು ಬರುತ್ತದೆ. ಈ ತೇಗೂರ ಗ್ರಾಮದ ಸುತ್ತಲಿನ ಪ್ರದೇಶದಲ್ಲಿ ಕಬ್ಬಿಣ ತಯಾರಿಕೆ ಮಾಡಿ ವಾಸವಿರುವ ಕಿಟ್ಟ ಅಲ್ಲಲ್ಲಿ ಬಿದ್ದಿರುವುದು ಕಂಡು ಬರುತ್ತದೆ. ಭಾರತಕ್ಕೆ ಬ್ರಿಟಿಷರ ಆಗಮನವಾದ ನಂತರ ಅವರು ಬೃಹತ್ತಾದ ಕಬ್ಬಿಣ ತಯಾರಿಕೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದ್ದರಿಂದ ಈ ಸಣ್ಣ ಸಣ್ಣ ಉದ್ದಿಮೆಗಳು ನಾಶವಾಗಿರುವುದು ಕಂಡು ಬರುತ್ತದೆ.

–ಎಸ್.ಬಿ. ದೇಶನೂರ

ಸಂಶೋಧನೆ ಎಂದರೆ ವಿದ್ವಾಂಸರು ಮಾತ್ರ ಮಾಡುತ್ತಾರೆ ಎಂಬ ನಂಬಿಕೆ ಇದೆ. ಆದರೆ ಶಾಲಾ ಶಿಕ್ಷಕರು ಮಕ್ಕಳೊಂದಿಗೆ ಸೇರಿ ಸಂಶೋಧನೆಯನ್ನು ಮಾಡಬಹುದು. ತಮ್ಮ ಸುತ್ತ ಮುತ್ತಲ ಪರಿಸರವನ್ನು ಸೂಕ್ಷ್ಮವಾಗಿ ವೀಕ್ಷಿಸಿ, ವಿಶ್ಲೇಷಿಸಿ, ವರ್ಗೀಕರಿಸಿ, ತೀರ್ಮಾನಕ್ಕೆ ಬರುವುದೇ ಸಂಶೋಧನೆ ಆಗಿದೆ. ಅಂಥದೊಂದು ಉದಾಹರಣೆ ಇಲ್ಲಿದೆ.

ತೇಗೂರು ಶಾಲೆಯಲ್ಲಿ ಪ್ರಾಥಮಿಕ ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಸ್.ಬಿ. ದೇಶನೂರ ಶಿಕ್ಷಕರು, ಇತಿಹಾಸ ವಿಷಯದಲ್ಲಿ ಸ್ನಾತ–ಕೋತ್ತರ ಪದವೀಧರರಾಗಿದ್ದಾರೆ. ತಮ್ಮ ಶಾಲೆಯವಿದ್ಯಾರ್ಥಿಗಳೊಂದಿಗೆ ಇಂಥ ಅನ್ವೇಷಣ ಕಾರ್ಯದಲ್ಲಿ ತೊಡಗಿ ಮಕ್ಕಳಲ್ಲಿ ಕುತೂಹಲ ಮತ್ತು ಅನ್ವೇಷಕ ಪ್ರವೃತ್ತಿಯನ್ನು ಬೆಳೆಸಲು ಪ್ರಯತ್ನಿಸುತ್ತಿರುವ ಇವರ ಶ್ರಮ ಶ್ಲಾಘನೀಯ

– ಸಂ.



ಗಿರಿಜಾ.ಬಿ.ಹೆಚ್
ಕಾರ್ಯಕ್ರಮಾಧಿಕಾರಿ ಸ.ಶಿ.ಅ

# 'ಇದು ಎಲ್ಲರ ಅಭಿಯಾನ'

ಹೆಣ್ಣುಮಗು ಹುಟ್ಟಿದ ದಿನದಿಂದ ಎರಡನೇ ದರ್ಜೆ ಸ್ಥಾನವನ್ನು ನೀಡುವ ಈ ಸಮಾಜವು ಶಿಕ್ಷಣ ಆಕೆಯ ಹಕ್ಕು ಎಂದು ತಿಳಿಯುವ ವಿಚಾರದಿಂದ ತನ್ನನ್ನು ತಾನು ದೂರವಿಟ್ಟಿದೆ. ಶಾಲಾ ವಯಸ್ಸಿಗೆ ಬಂದಂತಹ ಹೆಣ್ಣುಮಕ್ಕಳನ್ನು ಶಾಲೆಗೆ ಸೇರಿಸಲಾಗುತ್ತದೆಯಾದರೂ ಹಳ್ಳಿಗಾಡಿನ ಬಡತನದ ಕುಟುಂಬಗಳು ಈ ಹೆಣ್ಣುಮಕ್ಕಳನ್ನು ಬಹಳ ಬೇಗ ಮನೆಯಲ್ಲಿನ ಇತರೆ ಕೆಲಸಕ್ಕೆ ಹಚ್ಚಿಬಿಡುತ್ತವೆ. ಬಹುತೇಕ ಸಂದರ್ಭಗಳಲ್ಲಿ ಮನೆಯಲ್ಲಿನ ಕೆಲಸ ಹಾಗೂ ಕಷ್ಟ ಕಾರ್ಪಣ್ಯಗಳಿಗೆ ಹೆಣ್ಣುಮಕ್ಕಳು ಶಾಲೆಯನ್ನು ಬಿಟ್ಟು ಅಪ್ಪ ಅಮ್ಮನಿಗೆ ನೆರವಾಗಲು ಕುಟುಂಬಕ್ಕೆ ಮರಳಬೇಕಾಗುತ್ತದೆ.

ಶಿಕ್ಷಣ ಕೈಗೆ ಎಟುಕದ ಫಲವಾಗಿದೆ ಮುದ್ದು ಹೆಣ್ಣುಮಕ್ಕಳಿಗೆ. ಚಿಕ್ಕವಯಸ್ಸಿನ ಆ ಕಣ್ಣುಗಳಲ್ಲಿ ಜೀವನದಲ್ಲಿ ಏನಾದರೂ ಮಾಡಿ ಸಾಧಿಸುವ ಹಂಬಲ. ಮಕ್ಕಳಲ್ಲಿನ ಪ್ರತಿಭೆ ಯಾವುದೇ ಪ್ರಾಂತೀಯ ಹಾಗೂ ಜನಾಂಗೀಯ ಕಟ್ಟಳೆಗಳನ್ನು ಮೀರಿದೆ. ವಿಪರ್ಯಾಸ ಕಾಣುವುದು ಒದಗಿಬರುವ ಅವಕಾಶಗಳಲ್ಲಿ ಮಾತ್ರ. ಅವಕಾಶವನ್ನು ನೀಡಿದಲ್ಲಿ ಶಾಲೆಗೆ ಹೋಗಿಲ್ಲದ, ಶಾಲೆಯನ್ನು ಅರ್ಧದಲ್ಲೆ ಬಿಟ್ಟಿರುವಂತಹ ಹಳ್ಳಿಗಾಡಿನ ಬಡಕುಟುಂಬದ ಹೆಣ್ಣುಮಕ್ಕಳ ಪ್ರತಿಭೆಯನ್ನು ನೋಡುತ್ತಿದ್ದರೆ ಎಂತಹವರಿಗೂ ಅಚ್ಚರಿ ಮೂಡುತ್ತದೆ. ಸಿಕ್ಕಂತಹ ಅವಕಾಶವನ್ನು ಬಳಸಿಕೊಂಡು ಜೀವನದಲ್ಲಿ ಬಂದದ್ದನ್ನೆಲ್ಲಾ ಎದುರಿಸಿ ಮುನ್ನಡೆಯುವ ಇವರಲ್ಲಿನ ವಿಶ್ವಾಸಕ್ಕೆ ಎಲ್ಲರೂ ತಲೆ ಬಾಗಲೇಬೇಕು. ಇವರಿಗೆ ಏಕೆ ಶಿಕ್ಷಣಕ್ಕೆ ಅವಕಾಶವನ್ನು ನೀಡಬಾರದು ?

ಇದೇ ಉದ್ದೇಶದಿಂದ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಶಾಲೆಗಳನ್ನು ಆಯ್ದ ತಾಲ್ಲೂಕುಗಳಲ್ಲಿ ಸರ್ಕಾರದಿಂದ ಪ್ರಾರಂಭಿಸಲಾಗಿದೆ. ಶಿಕ್ಷಣದಿಂದ ವಂಚಿತರಾಗಿರುವ ಹಿಂದುಳಿದ, ಬಡಕುಟುಂಬ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಹೆಣ್ಣುಮಕ್ಕಳಿಗೆ ಇಲ್ಲಿ ಉಚಿತ ಹಿರಿಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಲಾಗುತ್ತದೆ. ಹಾಸ್ಟೆಲ್ ಸೌಲಭ್ಯವನ್ನು ನೀಡಲಾಗಿದೆ. ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಶಾಲೆಗಳು ಹೆಣ್ಣುಮಕ್ಕಳ ಬಾಳಿನಲ್ಲಿ ಶಿಕ್ಷಣವನ್ನು ಪಡೆಯುವ ಹಂಬಲವನ್ನು ಸಾಕಾರಗೊಳಿಸುವ ಆಶಾಕಿರಣವಾಗಿದೆ. ಹೆಣ್ಣುಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪ್ರಾಮುಖ್ಯತೆಯನ್ನು ಈ ಶಾಲೆಗಳಲ್ಲಿ ನೀಡಲಾಗುತ್ತದೆ. ಇಂತಹ ಅನೇಕ ಚಟುವಟಿಕೆಗಳನ್ನು ಕೆಜಿಬಿವಿ ಶಾಲೆಗಳಲ್ಲಿ ನಿರಂತರವಾಗಿ ಕೈಗೊಳ್ಳಲಾಗುತ್ತಿದೆ. ಯಾವುದೇ ಕಾರ್ಯಕ್ರಮ ಹಾಗೂ ಸ್ಪರ್ಧೆಗಳಲ್ಲಿ ಕೆಜಿಬಿವಿ ಶಾಲೆಯ ಮಕ್ಕಳದ್ದೇ ಮೇಲುಗೈ. ಯಾರು ತಾನೆ ಹೇಳಲು ಸಾಧ್ಯ ಇವರು ಈ ಹಿಂದೆ ಶಿಕ್ಷಣದಿಂದ ವಂಚಿತರಾಗಿದ್ದವರೆಂದು? ಮಕ್ಕಳಲ್ಲಿನ ಆತ್ಮಾಭಿಮಾನವನ್ನು ಉತ್ತೇಜಿಸಲು ಪಠ್ಯಕ್ರಮ ಹಾಗೂ ಪಾಠಗಳಿಂದ ಮಾತ್ರ ಸಾಧ್ಯವಾಗುವುದಿಲ್ಲ ಎಂಬುದು ಶಿಕ್ಷಕರಾಗಿ ನಮಗೆಲ್ಲಾ ತಿಳಿದಿರುವ ವಿಚಾರ.

ಈ ಮಕ್ಕಳಿಗೆ ದೊಡ್ಡ ವೇದಿಕೆ ನೀಡಬೇಕೆಂಬುದು ನಮ್ಮದೊಂದು ಆಸೆ. ಅವರ ಜೀವನದಲ್ಲಿ ಅದೊಂದು ಮರೆಯಲಾರದ ಕ್ಷಣವಾಗಿರಬೇಕು. ರಾಜ್ಯದಲ್ಲಿ ನಡೆಯುವ ಗಣ–ರಾಜ್ಯ ಸಮಾರಂಭದಲ್ಲಿ ಘನತೆವೆತ್ತ ರಾಜ್ಯಪಾಲರ ಸಮ್ಮುಖದಲ್ಲಿ ನೃತ್ಯ ರೂಪಕದ ಪ್ರದರ್ಶನವನ್ನು ನೀಡಿ ಎಲ್ಲ ಗಣ್ಯರ ಪ್ರಶಂಸೆಗೆ ಪಾತ್ರರಾಗುವುದು ಎಂತಹವರಿಗೂ ಮೈನವಿರೇಳಿಸುವ ಅನುಭವವೇ ಸರಿ. ಇಂತಹ ಒಂದು ಅವಕಾಶವನ್ನು ಪಡೆದುಕೊಂಡವರು ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ 7 ಕೆಜಿಬಿವಿ ಶಾಲೆಗಳ ಹೆಣ್ಣುಮಕ್ಕಳು.

ನೃತ್ಯ ಪ್ರದರ್ಶನವೇನು ಸುಲಭದ ವಿಚಾರವಾಗಿರಲಿಲ್ಲ. ಇದಕ್ಕೆ ಅನೇಕ ಏರ್ಪಾಡುಗಳನ್ನು ಮಾಡಬೇಕಾಯಿತು. 425 ವಿದ್ಯಾರ್ಥಿಗಳನ್ನು ನೃತ್ಯ ಕಾರ್ಯಕ್ರಮಕ್ಕಾಗಿ ಆಯ್ಕೆ ಮಾಡಲಾಯಿತು. ನಂತರ ಇವರಿಗೆ ತರಬೇತಿ ನೀಡುವುದು ಹಾಗೂ ವಾಸ್ತವ್ಯದ ವ್ಯವಸ್ಥೆ ಮಾಡುವುದು ದೊಡ್ಡ ಸವಾಲಾಗಿತ್ತು. ಇಷ್ಟು ಮಂದಿಯನ್ನು 15 ದಿನಗಳವರೆಗೆ ಒಂದು ಛತ್ರದಲ್ಲಿ ತಂಗುವ ವ್ಯವಸ್ಥೆಯನ್ನು ಮಾಡಿ ನೃತ್ಯ ತರಬೇತುದಾರರಿಂದ ನೃತ್ಯಾಭ್ಯಾಸವನ್ನು ನೀಡಲಾಯಿತು. ಬೆಂಗಳೂರಿನಲ್ಲಿ ನಡೆದ 3 ದಿನಗಳ ರಿಹರ್ಸಲ್‌ಗೆ ಇವರನ್ನು ಕರೆತರಲಾಯಿತು. ಜನವರಿ 26, 2008 ರಂದು ಇವರ ನೃತ್ಯ ಪ್ರದರ್ಶನವನ್ನು ಕಂಡ ನಮ್ಮೆಲ್ಲರಿಗೂ ಮನದಾಳದಲ್ಲಿ ಆದಂತಹ ಆನಂದ ವ್ಯಕ್ತಪಡಿಸಲು ಸಾಧ್ಯವಿಲ್ಲ. 'ಇದು ಎಲ್ಲರ ಅಭಿಯಾನ' ಎಂಬ ನೃತ್ಯ ಪ್ರದರ್ಶನಕ್ಕಾಗಿ ಮಕ್ಕಳಿಗೆ ಎರಡನೇ ಬಹುಮಾನ ದೊರಕಿತು. ಇದು ಇನ್ನಷ್ಟು ಉತ್ತೇಜನವನ್ನು ಹಾಗೂ ಆತ್ಮ ಸ್ಥೈರ್ಯವನ್ನು ಮಕ್ಕಳಿಗೆ ತುಂಬಿದಂತಾಯಿತು. ಮಕ್ಕಳ ಮುಖ ಅರಳಿ ಏನನ್ನೋ ಸಾಧಿಸಿದಂತಹ ಅನುಭವ ಎದ್ದು ಕಾಣುತ್ತಿತ್ತು.

ಮಕ್ಕಳು ತಾಲೀಮು ನಡೆಸಲು ಪಟ್ಟ ಕಷ್ಟ ಇಂದಿಗೂ ಕಣ್ಣುಕಟ್ಟಿದಂತಿದೆ. ಈ ಕಾರ್ಯಕ್ರಮದಲ್ಲಿ ತಾವು ಯಶಸ್ವಿಯಾಗ ಬೇಕೆಂಬುದೇ ಅವರಲ್ಲಿದ್ದಂತಹ ಆಕಾಂಕ್ಷೆ ಎಂಬುದು ನೋಡಿದವರೆಲ್ಲರಿಗೂ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಈ ಶಾಲೆಗಳ ಶಿಕ್ಷಕಿಯರು ಹಾಗೂ ಜಿಲ್ಲೆಗಳ ಅಧಿಕಾರಿ ವರ್ಗದವರು ಈ ಮಕ್ಕಳ ಉತ್ಸಾಹ ಹಾಗೂ ಆತ್ಮಾಭಿಮಾನಕ್ಕೆ ಪ್ರೋತ್ಸಾಹ ನೀಡಿದರು. ಎಲ್ಲರೂ ಕೈಜೋಡಿಸಿ ಮಕ್ಕಳ ಸೇವೆಗೆಂದು ದುಡಿದಲ್ಲಿ ಮಾತ್ರ ಪ್ರೇರಿತ ವರ್ಗದ ಗುಂಪೊಂದನ್ನು ಸಮಾಜದಲ್ಲಿ ಕಟ್ಟಲು ಸಾಧ್ಯ–ಅಲ್ಲವೇ !

ಪೆರೇಡ್ ಮೈದಾನದಲ್ಲಿ ಹರುಷದ ಹೊನಲು ತುಂಬಿತ್ತು ಅಧಿಕಾರಿಗಳು ಶಿಕ್ಷಕರು ಎಲ್ಲರೂ ಬಹಳ ಸಂತೋಷದಿಂದ ಮಕ್ಕಳಿಗೆ ಶುಭಹಾರೈಸುತ್ತಿದ್ದರು. ಆಗಲೇ ಮನದಾಳದಲ್ಲಿ ಬೇರೂರಿ ನಿಲ್ಲುವಂತಹ ಮತ್ತೊಂದು ಕ್ಷಣ ನನಗಾಗಿ ಕಾದಿತ್ತು. ಮಕ್ಕಳ ಕಣ್ಣುಗಳಲ್ಲಿ ತುಂಬಿದ್ದ ಹೊಂಗನಸು, ನೋವಿನ ರೂಪದಲ್ಲಿ ವ್ಯಕ್ತವಾಗಿದ್ದು ಹೀಗೆ – "ದಯಮಾಡಿ ಕೆಜಿಬಿವಿ ಶಾಲೆಗಳನ್ನು 10ನೇ ತರಗತಿಯವರೆಗೆ ಮುಂದುವರೆಸಿ ಮೇಡಂ. ನಮಗೆ ಮುಂದೆ ಓದಲು ತುಂಬ ಆಸೆ ಇದೆ".



# ಮಕ್ಕಳು ಕಲಿಯುವುದು ಹೇಗೆ ?

ಜಾನ್ ಬ್ಲಾಕೀ
ಅನುವಾದ : **ಸಹನಾ ಉಡುಪಾ**

ಕಲಿಕೆಯ ಸಿದ್ಧಾಂತಗಳಲ್ಲಿ ಅತ್ಯಂತ ಮಾನ್ಯತೆ ಪಡೆದಿರುವುದು ಜೀನ್ ಪಿಯಾಜೆ (Jean Piaget) ನ ಸಿದ್ಧಾಂತ. ಮಕ್ಕಳು ಹೇಗೆ ಕಲಿಯುತ್ತಾರೆ ಎಂಬುದರ ಬಗ್ಗೆ ಪಿಯಾಜೆ ನೂರಾರು ಪ್ರಯೋಗ, ವಿಚಾರಣೆಗಳನ್ನು ನಡೆಸಿದರು. ಆತ ಹೇಳುವಂತೆ ಕಲಿಕೆ ಎರಡು ಪ್ರಕ್ರಿಯೆಗಳನ್ನು ಹೊಂದಿದೆ. ಅರಗಿಸಿಕೊಳ್ಳುವುದು, (assimilation) ಮತ್ತು ಹೊಂದಾಣಿಕೆ ಮಾಡಿಕೊಳ್ಳುವುದು (accommodation). ಅರಗಿಸಿಕೊಳ್ಳುವುದೆಂದರೆ, ಏನು ಮಾಡಿದರೆ ಯಾವುದನ್ನು ಕಲಿಯಲು ಆಗುವುದೋ ಅದು. ಹೊಂದಾಣಿಕೆ ಮಾಡಿಕೊಳ್ಳುವುದೆಂದರೆ ಕಲಿಯುವವರು ತಮ್ಮಲ್ಲಿ ತಾವು ಏನು ಮಾಡಿದರೆ ಕಲಿಯಲು ಸಾಧ್ಯವಾಗುವುದೋ ಅದು.

ಒಂದು ಸರಳವಾದ ಉದಾಹರಣೆಯಿಂದ ಇದನ್ನು ಅರ್ಥ ಮಾಡಿಕೊಳ್ಳೋಣ. ಬಾಗಿಲೊಂದನ್ನು ತೆಗೆಯಲು ಮಗುವೊಂದು ಬಾಗಿಲಿನ ತಿರುಪನ್ನು ತಿರುಗಿಸಲು ತಿಳಿದು, ಬಾಗಿಲನ್ನು ತಳ್ಳಬೇಕೋ, ಎಳೆಯಬೇಕೋ ಎಂದು ಅರಿತು, ಬಾಗಿಲಿನ ಭಾರವನ್ನು ಕಂಡುಕೊಳ್ಳಬೇಕಾದೀತು. ಇದು ಅರಗಿಸಿಕೊಳ್ಳುವುದು. ಇದರ ಜೊತೆ, ಆ ಮಗು ಸರಿಯಾದ ಕ್ರಿಯೆಯನ್ನು ಮಾಡಬೇಕು, ತಿರುಪಣಿಯನ್ನು ಸರಿಯಾದ ದಿಕ್ಕಿಗೆ ತಿರುಗಿಸಬೇಕು. ಸೂಕ್ತವಾದ ಶಕ್ತಿಯಿಂದ ಬಾಗಿಲನ್ನು ಎಳೆಯಬೇಕು ಅಥವಾ ತಳ್ಳಬೇಕು ಮತ್ತು ಈ ಎಲ್ಲವನ್ನೂ ಬಾಗಿಲು ತೆಗೆಯುವ ಅನುಭವದಲ್ಲಿ ಅಳವಡಿಸಿಕೊಳ್ಳಬೇಕು. ಈ ಎಲ್ಲ ಪ್ರಕ್ರಿಯೆಗಳಿಂದ ಮಕ್ಕಳು ಬೆಳೆಸಿಕೊಳ್ಳುವ ಒಂದು ನಿರ್ದಿಷ್ಟ ಸ್ವಭಾವವವನ್ನು ಪಿಯಾಜೆ 'ಸ್ಕೀಮಾ' (ಸಂಯೋಜನೆ) ಎಂದು ಕರೆದರು–ಯಾವುದನ್ನು ಪುನರಾವರ್ತಿಸಬಹುದೋ, (repeated) ಹಾಗೂ ಸಾಮಾನ್ಯೀಕರಿಸಬಹುದಾದದ್ದೋ (generalized). ಆದರೆ, ಎಲ್ಲ ಬಾಗಿಲುಗಳೂ ಒಂದೇ ರೀತಿ ಇರುವುದಿಲ್ಲ. ಅವುಗಳಿಗೆ ಬೇರೆ ಬೇರೆ ರೀತಿಯ ತಿರುಪುಗಳು, ಕೈಪಿಡಿಗಳಿರುತ್ತವೆ. ಕೆಲವುಗಳಿಗೆ ಚಿಲಕಗಳಿರುತ್ತವೆ, ಕೆಲವನ್ನು ಹೊರಗೆ ತೆಗೆದರೆ, ಇನ್ನು ಕೆಲವನ್ನು ಒಳಗೆ ತೆಗೆಯಬೇಕಾಗುತ್ತದೆ. ಕೆಲವು ಬಲು ಭಾರ ಮತ್ತು ಕೆಲವು ಹಗುರ. ಹೀಗೆ ಪ್ರತಿಯೊಂದರ ಪರಿಚಯವಿಲ್ಲದ ಅಂಶಗಳನ್ನು ಅರ್ಥ ಮಾಡಿಕೊಂಡು ಅಳವಡಿಸಿಕೊಳ್ಳುವ ಅವಶ್ಯಕತೆಯಿರುತ್ತದೆ. ಮೊದಲು ಅರಿವಿಗೆ ಬಂದಿದ್ದ ಸಂಯೋಜನೆ (ಸ್ಕೀಮಾ)ಯನ್ನು ಈಗ ಮಾರ್ಪಾಡು ಮಾಡಲೇಬೇಕು.

ಹೊಸ ಅನುಭವಗಳು ಎದುರಾದಾಗಲೆಲ್ಲ ಮಾರ್ಪಾಡುಗಳ ಅವಶ್ಯಕತೆ ಇದ್ದೇ ಇದೆ. ಬಾಗಿಲುಗಳ ಬಗ್ಗೆ ತಮಗೆಲ್ಲಾ ತಿಳಿದಿದೆ ಎಂದುಕೊಳ್ಳುವ ವಯಸ್ಕರೂ ಸಹ, ಬಾಗಿಲಿನ ಬಳಿ ಸಾಗಿದಂತೆ ವಿದ್ಯುತ್‌ಕಾಂತೀಯ ಶಕ್ತಿಯಿಂದ ಸ್ವಯಂಚಾಲಿತವಾಗಿ ತೆರೆದುಕೊಳ್ಳುವ ಬಾಗಿಲಿಗೆ ಮೊದಲ ಬಾರಿ ಎದುರಾದಾಗ ಆ ಬಗ್ಗೆ ತಿಳಿದುಕೊಂಡುತಮ್ಮ ಚರ್ಯೆಯಲ್ಲಿ ಅಳವಡಿಸಿಕೊಳ್ಳಲೇಬೇಕಾಗುತ್ತದೆ. ಇಂತಹ ಹೊಸ ಬಾಗಿಲೆದುರು ಅವರಿಗೂ ಸಹ ಕೆಲಕ್ಷಣ ಗಲಿಬಿಲಿಯಾಗುತ್ತದೆ.

ಹೊಸದನ್ನು ಅರ್ಥಮಾಡಿಕೊಳ್ಳುವ ಮತ್ತದನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆ ಹಟ್ಟಿನಿಂದಲೇ ಆರಂಭವಾಗಿ, ಆರಂಭಿಕ ಬಾಲ್ಯದಲ್ಲಿ ತೀವ್ರವಾಗಿ, ಜೀವನಪರ್ಯಂತ ಹೇಗೆ ಸಾಗಿದರೂ, ಕೆಲವರಲ್ಲಿ ವಯಸ್ಸಾದಂತೆ, ಅರಗಿಸಿಕೊಳ್ಳುವ ಹೊಂದಿಕೆ ಮಾಡಿಕೊಳ್ಳುವ ಶಕ್ತಿ ಕುಂದುತ್ತದೆ. ಹಲವಾರು ಜನರೊಡನೆ ಸಂಪರ್ಕ ವ್ಯವಹಾರ ಮಾಡಿದಂತೆಲ್ಲ ಈ ಸಂಯೋಜನೆಗಳ ಸಂ–ಖ್ಯೆ ಹೆಚ್ಚು, ವಿಶಾಲವೂ ಆಗುತ್ತದೆ. ಆರಂಭಿಕ ಹಂತಗಳಲ್ಲಿ ಕಲಿಕೆ ಸ್ಪರ್ಶಜ್ಞಾನದ ಕ್ಷೇತ್ರದಲ್ಲಿ ಹೆಚ್ಚು. ಮಕ್ಕಳು ಎಲ್ಲವನ್ನೂ ನೋಡಿ, ಕೇಳಿ, ಮುಟ್ಟಿ, ವಾಸನೆ ನೋಡಿ ಅಥವಾ ರುಚಿನೋಡಿಯೇ ಅವು ಏನು ಎಂದು ಅರಿಯುತ್ತಾರೆ. ಅವರಿಗೆ ಅದೇನೆಂದು ಹೇಳಿದರೆ ಕಲಿಯಲಾಗದು, ಅವರು ಈ ಹಂತದಲ್ಲಿ ಅಸಂಗತ ಅಥವಾ ಊಹಾ ವಿಚಾರಗಳನ್ನು ಕಲ್ಪಿಸಿಕೊಳ್ಳಲಾರರು.

ತಮ್ಮದೇ ಚಲನೆ, ಚಟುವಟಿಕೆಯಿಂದಲೂ ಅವರು ಕಲಿಯುತ್ತಾರೆ. ತಾವು ಕಂಡದ್ದನ್ನೆಲ್ಲಾ ಮುಟ್ಟಲಾಗದೆಂಬುದನ್ನು ಅವರು ಕಂಡುಕೊಳ್ಳುತ್ತಾರೆ. ತಾವೇನು ಮುಟ್ಟಬೇಕೆಂದಿರುವರೋ ಅದನ್ನು ಎಟುಕಿಸಿಕೊಳ್ಳಲು ಅವರು ತೆವಳಬೇಕು, ಇಲ್ಲವೇ ಮುಂದಕ್ಕೆ ಚಾಚಿಕೊಳ್ಳಬೇಕು. ಇಷ್ಟಾದ ಮೇಲೆ ಮಾತ್ರವೇ ಅವರಿಗೆ ಯಾವುದು ಎಷ್ಟು ದೂರದಲ್ಲಿದೆ ಎಂಬುದೂ, ಆಮೇಲೆ, 'ದೂರ' ಎಂದರೇನೆಂಬುದೂ ತಿಳಿಯುತ್ತದೆ. ಮಕ್ಕಳು ಬೆಳೆದಂತೆ ಅಮೂರ್ತ ವಿಚಾರಗಳನ್ನೂ ಅರ್ಥಮಾಡಿಕೊಂಡು ಅದನ್ನು ತಿಳಿದುಕೊಳ್ಳುವರು (ಆ ಊರು ಇಲ್ಲಿಂದ ಐದು ಕಿಲೋಮೀಟರ್ ದೂರದಲ್ಲಿದೆ) ಮತ್ತದನ್ನು ಅರಗಿಸಿಕೊಳ್ಳುವರು. ಗಣಿತದ ಪ್ರಮೇಯದ ಪ್ರಕ್ರಿಯೆ, 17ನೇ ಶತಮಾನದ ರಾಜಕೀಯ ವಿಚಾರಗಳು, ದೇವರ ಅಸ್ತಿತ್ವ ಕುರಿತು ನಡೆಯುವ ಚರ್ಚೆ, ಇದೆಲ್ಲದರ ಪ್ರಕ್ರಿಯೆಯೂ ಸಾಮಾನ್ಯವಾಗಿ ಒಂದೇ ರೀತಿಯದ್ದು.

ಈ ಹಂತದ ಕಲಿಕೆಗೆ ತಲುಪುವಷ್ಟರಲ್ಲಿ, ವ್ಯಕ್ತಿಯಲ್ಲಿ ಸಾಕಷ್ಟು ಸಂಕೀರ್ಣವಾದ ಬದಲಾವಣೆಗಳಾಗಿರುತ್ತದೆ. ಪ್ರತಿ ಹೊಸ ಅನುಭವ ಎಷ್ಟೇ ಚಿಕ್ಕದಾಗಿದ್ದರೂ ಅದನ್ನು ಅರ್ಥಮಾಡಿಕೊಳ್ಳಬೇಕು ಎಂದು ಅಳವಡಿಸಿಕೊಳ್ಳುವಾಗ ವ್ಯಕ್ತಿಯ ಸಂಪೂರ್ಣವಾದ ಸಂಯೋಜನಾ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆಯಾಗಿ ಅವುಗಳಿಂದ ವ್ಯಕ್ತಿತ್ವದ ನಿರ್ಮಾಣವಾಗುತ್ತದೆ.

ಸ್ಕೀಮಾಟಾ ಕುರಿತು ಇರುವ ಎರಡು ವಿಚಾರಗಳನ್ನು ಇಲ್ಲಿ ಹೇಳಬೇಕು. ಮೊದಲನೆಯದಾಗಿ, ಅದನ್ನು ಅಭ್ಯಾಸ (exercising) ಮಾಡುತ್ತಿರಬೇಕು. ವಯಸ್ಕರಾದಾಗ ಪ್ರತಿಯೊಬ್ಬರಿಗೂ ಇದು ತಿಳಿದಿರುತ್ತದೆ. 'ನಾನು ಸಾಕಷ್ಟು ಟೆನಿಸ್ ಆಡುತ್ತಿದ್ದೆ. ಆದರೀಗ ಒಂದೇಒಂದು ಸಲ ಬಾಲ್ ಹೊಡೆಯಲೂ ಕಷ್ಟ'. 'ಸಾಕಷ್ಟು ಕಾಲದಿಂದ ನಾನು ಲ್ಯಾಟಿನ್ ಓದಿಯೇ ಇಲ್ಲ. ಈಗ ಒಂದೇಒಂದು ಪದ ಕೂಡಾ ಅರ್ಥವಾಗಲ್ಲ'. ಹೀಗೆ ಹಿಂದೆ ಕಲಿತು ಈಗ ಮರೆತಿರುವ ವಿಚಾರಗಳ ಬಗ್ಗೆ ಹೇಳುವುದನ್ನು ನಾವು ಆಗಾಗ್ಗೆ ಕೇಳಿರುತ್ತೇವೆ. ಆದರೆ ಇವೆಲ್ಲಾ ಸಾಮಾನ್ಯವಾಗಿ ಅಷ್ಟೇ ಪ್ರಮುಖವಲ್ಲದ ಮತ್ತು ಅವುಗಳನ್ನು ನಿರ್ವಹಿಸಲು ಯೌವನ ಕಾಲದ ಶಿಸ್ತು, ಆಸಕ್ತಿ ಬೇಕಾಗಿದ್ದ ವಿಚಾರಗಳಾಗಿರುತ್ತವೆ.



ಇವು ಅಷ್ಟೊಂದು ಪ್ರಮುಖ ವಿಚಾರಗಳಾಗಿದ್ದರೆ ಯಾರೂ ಅವುಗಳನ್ನು ಮರೆಯುತ್ತಿರಲಿಲ್ಲ. ಆದರೆ, ಪುಟ್ಟ ಮಕ್ಕಳಿಗೆ ಪ್ರತಿಯೊಂದೂ ಮುಖ್ಯವಾದುದೇ. ತಾವಿರುವ ಜಗತ್ತಿನ ಬಗ್ಗೆ ಅವರು ಕಲಿಯುತ್ತಿರುತ್ತಾರೆ, ತಾವೇನು ಕಲಿತಿದ್ದೇವೋ ಅವು ಸತ್ಯ, ನಿತ್ಯ ಮತ್ತವು ಮೇಲಿಂದ ಮೇಲೆ ಪುನರಾವರ್ತಿಸುತ್ತಿರುತ್ತವೆ ಎಂಬುದು ಅವರಿಗೆ ವೇದ್ಯವಾಗಿ, ವಸ್ತುಗಳು ನಿರಂತರ ಬದಲಾವಣೆಯಾಗುತ್ತಿರುತ್ತವೆ ಎಂಬುದನ್ನು ತಿಳಿಯಲು ಅವರಿಗೆ ಅವಕಾಶವಾಗಬೇಕು.

ಸ್ಕೀಮಾಟಾದ ಇನ್ನೊಂದು ಅಂಶ, ಮತ್ತೆ ಮತ್ತೆ ಮಾಡುವ ಅಭ್ಯಾಸದಲ್ಲಿ ಸುಖ ಸಂತೋಷವಿರಬೇಕು. ಪಿಯಾಜೆ ಈ ಬಗ್ಗೆ ಸಾಕಷ್ಟು ಮಾಹಿತಿ ಮತ್ತು ಸಾಕ್ಷ್ಯವನ್ನು ಸಂಗ್ರಹಿಸಿ, ಕೆಲವು ನಿರ್ದಿಷ್ಟ ಮತ್ತು ಒಂದೇ ರೀತಿ ಆಗುವ ಕ್ರಿಯೆಗಳನ್ನು ಗಮನಿಸಿ ಖಚಿತಗೊಳಿಸಿದ್ದಾರೆ. ಎರಡು ವರ್ಷದ ಮಗು ಯಾವುದಾದರೂ ಎರಡು ವಸ್ತುಗಳನ್ನು ಜೋಡಿಸುವ ಕೆಲಸದಲ್ಲಿ ತೊಡಗಿಕೊಂಡಿರುವುದನ್ನು ಗಮನಿಸಿದ್ದರೆ, ಆ ಮಗು ಜೋಡಿಸುವ ಕೆಲಸ ಮುಗಿಸಿದ ಮೇಲೆ ಆನಂದಿಸುವ, ಸಂತಸದಿಂದ ನಗುವ ದೃಶ್ಯ ನೋಡಿರಬಹುದು. ಆದರೆ, ಇಂತಹ ಕೆಲಸಗಳನ್ನು ಕಲಿಕೆ ಎಂದು ಎಷ್ಟೋ ಪೋಷಕರು ಭಾವಿಸುವುದಿಲ್ಲ. ಮಕ್ಕಳಿಗೆ ಅದೊಂದು ಆಟವಷ್ಟೇ. ಬೆಳೆದು ಶಾಲೆಗೆ ಹೋದಂತೆ ಇದನ್ನೇ ಕೆಲಸ ಎಂದು ಬೇರೆಯೇ ರೀತಿಯಲ್ಲಿ ಹೇಳುವುದಾಗುತ್ತದೆ.

ಆಟವೆಂದು ಕರೆದುದನ್ನು ಮುಂದೆ ಕೆಲಸವೆಂದು ಬೇರೆ–ಯಾಗಿಯೇ ಗುರುತಿಸುವುದಕ್ಕೆ ನಾವೀಗ ಗಮನಕೊಡಬೇಕಾಗಿದೆ. ಬಹುಶಃ ಮಾನವನ ಉಗಮದ ಕಾಲದಿಂದಲೂ ಮಕ್ಕಳು ಸಾಕಷ್ಟು ಆಟಗಳನ್ನಾಡಿರಲೇಬೇಕು. ಆದರೆ, 1826ರಲ್ಲಿ ಫ್ರೋಬೆಲ್ 'ಮಾನವನ ಶಿಕ್ಷಣ' (The Education of Man) ಪ್ರಕಟವಾದಾಗ ಕಲಿಕೆಯಲ್ಲಿ ಆಟದ ಪ್ರಾಮುಖ್ಯತೆಯ ಅರಿವಾಯಿತು. ಶಿಕ್ಷಣ ತಜ್ಞರೆಲ್ಲರೂ ಕಲಿಕೆಯ ಪ್ರಕ್ರಿಯೆಯಲ್ಲಿ ಆಟದ ಪ್ರಾಮುಖ್ಯತೆ, ಮೌಲ್ಯದ ಬಗ್ಗೆ ಗುರುತಿಸಿ ಹೇಳಿದರೂ, ಬಹುತೇಕ ಪೋಷಕರಿಗೆ ಈ ಬಗ್ಗೆ ತಿಳಿವಿರಲಿಲ್ಲ. ತಮ್ಮ ಮಕ್ಕಳು ಆಡುವುದನ್ನು ಪೋಷಕರು ಗಮನವಿಟ್ಟು ವ್ಯವಸ್ಥಿತವಾಗಿ ನೋಡಿದ್ದೇ ಆದಲ್ಲಿ, ಅದು ಕೇವಲ ಹೆಚ್ಚಿರುವ ಶಕ್ತಿಯ ವ್ಯಂುಂ, ಉಪಂುೋಗ, ಬಳಕೆಎನ್ನುವುದಕ್ಕಿಂತಾ ಹೆಚ್ಚಿನದೇನನ್ನೋಹೊಂದಿರುವುದನ್ನು ಗಮನಿಸಬಹುದು. ಆ ಆಟಗಳು ಬಹಳ ಗಂಭೀರವಾಗಿಂುೂ, ಗಮನವಿಟ್ಟು ನಡೆಯುವುದೂ ಹಾಗೂ ಮಗುವಿಗೆ ಅಂತಹುದು ಬಹು ಮುಖ್ಯವಾದುದೆಂದೂ ಅರಿವಾಗುತ್ತದೆ.

ನಾವು ಗಮನಿಸುವಾಗ ಮಗುವೇನು ಮಾಡುತ್ತಿರುತ್ತದೆ? ಸಾಕಷ್ಟು ಕಾಲ ಮಕ್ಕಳು ತಮಗೆ ಬೇಕಾದ ವಸ್ತುಗಳನ್ನು ಹೊಂದಿಸಿಕೊಳ್ಳುವುದರಲ್ಲೇ ಕಳೆಯುತ್ತಾರೆ. ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ನೀರು, ಮರಳು ಸುರಿಯುವುದು, ಜರಡಿಯಲ್ಲಿ ಹಾಕುವುದು, ನೀರಿನಲ್ಲಿ ಬಟ್ಟೆ, ಸ್ಪಂಜು ಒತ್ತಿ ಹಿಡಿದು ತೆಗೆಯುತ್ತಾರೆ. ನೀರ ಮೇಲೆ ಹೊಡೆದು ಚಿಮ್ಮಿಸುವುದು, ಕಲ್ಲು, ಕೋಲು, ರಬ್ಬರ್ ನೀರಿಗೆ ಹಾಕಿ ಒದ್ದೆಯಾಗುವುದೋ ಎಂದು ನೋಡುತ್ತಾರೆ. ಹೀಗೇ ಏನೇನೋ, ಬೆರಳುಗಳ ನಡುವೆ ಮರಳನ್ನೋ ಮಣ್ಣನ್ನೋ ಸುರಿದು ಹರಿಯಬಿಡುತ್ತಿರುತ್ತಾರೆ. ಗುಪ್ಪೆ ಮಾಡಿ ಅದರಲ್ಲಿ ಕಪ್ಪೆ ಗೂಡು ಮಾಡಿರುತ್ತಾರೆ. ಮರದ ತುಂಡುಗಳನ್ನು ಒಂದರ ಮೇಲೊಂದಿಟ್ಟು ಕಟ್ಟಿ ಮತ್ತೆ ಹೊಡೆದು ಬೀಳಿಸುತ್ತಿರುತ್ತಾರೆ. ಭಾರವಾದ ವಸ್ತುಗಳನ್ನು

ಎಳೆದು ಎತ್ತಿ ಕಷ್ಟಪಡುತ್ತಾರೆ. ಹಗುರಾದ ವಸ್ತುಗಳನ್ನು ಮೇಲೆಸೆದು ಅವು ಗಾಳಿಯಲ್ಲಿ ತೇಲುವುದೋ ಅಥವಾ ನೆಲದ ಮೇಲೆ ಬೀಳುವುದೋ ನೋಡುತ್ತಿರುತ್ತಾರೆ.

ಇವೇ ಮೊದಲಾದ ನೂರಾರು ಆಟಗಳ ಪ್ರಕ್ರಿಯೆಗಳಿಂದ ಮಕ್ಕಳು ಹಲವಾರು ವಿಚಾರಗಳನ್ನು ಕಂಡುಕೊಂಡು ಭಾರ, ಆಕಾರ, ವಸ್ತುಗಳ ಮೃದುತ್ವ, ಒರಟುತನ, ಗಟ್ಟಿ, ಪಾರದರ್ಶಕ, ಅಪಾರದರ್ಶಕ, ದ್ರವ ಸ್ವರೂಪವೇ ಮೊದಲಾದುವುಗಳನ್ನು ಕಲಿಯಲಾರಂಭಿಸುತ್ತಾರೆ. ಈ ಎಲ್ಲ ವಸ್ತುಗಳನ್ನು ಮುಟ್ಟಿ, ತಟ್ಟಿ, ತೀಡಿ, ಎಳೆದು ನೋಡುವಾಗ ಆಯಾ ವಸ್ತುಗಳಲ್ಲಿ ತಾವು ತಿಳಿಯಬಹುದಾದ ವಿಚಾರಗಳ ಸಾಧ್ಯಾಸಾಧ್ಯತೆಗಳನ್ನು ಕಂಡುಕೊಳ್ಳುತ್ತಾರೆ. ಕೆಲವು ವಸ್ತುಗಳನ್ನು ಅವರು ಮುಟ್ಟಬಹುದು, ಇನ್ನು ಕೆಲವನ್ನು ಮುಟ್ಟಲಾಗದು. ಹಸಿಮಣ್ಣನ್ನು ಹಿಡಿಯಬಹುದು, ಆದರೆ ಒಣ ಮರಳು ಸೋರಿ ಹೋಗುತ್ತದೆ. ಜೇಡಿ ಮಣ್ಣನ್ನು ತೆಗೆದುಕೊಳ್ಳಬಹುದು, ನೀರು ಕೈಯಲ್ಲಿ ನಿಲ್ಲುವುದಿಲ್ಲ. ತಾವು ಮಾಡಿದುದನ್ನು ಹೊಡೆದುರುಳಿಸಬಹುದು. ಚಿಕ್ಕ ಕಡ್ಡಿಯನ್ನು ಮುರಿಯಬಹುದು, ಮರದತುಂಡು ದಿಮ್ಮಿಯನ್ನಲ್ಲ.

ಇಂತಹ ಆಟಗಳಿಂದ, ಅಪ್ರಯತ್ನವಾಗಿ ಭೌತಿಕ ಜಗತ್ತಿನ ಬಗ್ಗೆ ಮಕ್ಕಳು ತಿಳಿಯುತ್ತಾರೆ ಮತ್ತು ತಮ್ಮ ಆಂತರಿಕ ಭಾವನೆಗಳಿಗೆ ಜಗತ್ತು ಹೇಗೆ ಸಂಬಂಧಿಸಿದೆ ಎಂಬುದನ್ನು ಕಂಡುಕೊಳ್ಳುತ್ತಾರೆ. ಭೌತಿಕ ಜಗತ್ತನ್ನು ತನ್ನೊಡನೆ ಕಂಡುಕೊಳ್ಳುವ ಸಾಮರ್ಥ್ಯದ ಪ್ರಕ್ರಿಯೆಯಿಲ್ಲದ ಯಾರಾದರೂ ಬೆಳೆದದ್ದೇ ಆದಲ್ಲಿ ಅವರು ಹೆಚ್ಚುಕಾಲ ಬಾಳಲಾರರು. ವಸ್ತುಗಳ ಸ್ಥಿತಿಗತಿ ಏನು, ವಿವಿಧ ಸಂದರ್ಭಗಳಲ್ಲಿ ಅವು ಹೇಗೆ ವರ್ತಿಸುತ್ತವೆ ಎಂಬ ಅರಿವು (ಹಿಂದುಳಿದ ಅಥವಾ ಮುಂದುವರಿದ ಸಮಾಜಗಳೆರಡರಲ್ಲೂ) ಅತ್ಯಾವಶ್ಯಕ.

ವಯಸ್ಕರನ್ನು ಮಕ್ಕಳೂ ಅರ್ಥಮಾಡಿಕೊಳ್ಳುವುದು ಬಹು ಮುಖ್ಯ. ಮಕ್ಕಳ ಬಹುಪಾಲು ದೈನಂದಿನ ಆಗುಹೋಗುಗಳನ್ನು ನಿಯಂತ್ರಿಸುವ ವಯಸ್ಕರೇ ಮಕ್ಕಳ ಸುತ್ತಲಿರುವುದು. ಮಕ್ಕಳು ನೋಡುವ, ಕೇಳುವ ಮತ್ತು ಅರ್ಥಮಾಡಿಕೊಳ್ಳುವ ಪ್ರತಿಯೊಂದಕ್ಕೂ ಸಹಾಯ ಮಾಡುವ, ವಿವರಿಸಿ ಹೇಳುವುದರಲ್ಲೇ ಅವರು ನಿರತರಾಗಿರುತ್ತಾರೆ.

ಮಕ್ಕಳು ಆಟದ ಮೂಲಕವೇ ಅರಿವನ್ನು, ಜ್ಞಾನವನ್ನು ಪಡೆಯುವುದು. ವಯಸ್ಕರನ್ನು ಮಕ್ಕಳು ಅನುಕರಿಸುತ್ತಾರೆ. ಅಪ್ಪ, ಅಮ್ಮನ ಆಟವಾಡುತ್ತಾರೆ. ಜೊತೆಗಿರುವ ಬೊಂಬೆಗಳನ್ನು ಮಕ್ಕಳನ್ನಾಗಿ ಮಾಡಿಕೊಂಡು ತಿನ್ನಿಸುವ, ಮಲಗಿಸುವ, ಬಟ್ಟೆ ತೊಡಿಸುವ, ಕಲಿಸುವ, ಶಿಕ್ಷಿಸುವ, ಆಟಗಳನ್ನಾಡುತ್ತಾರೆ. ತಮ್ಮ ಕಲ್ಪನೆಗಳ ಅಥವಾ ನಾಟಕೀಯ ನಡೆನುಡಿಯಲ್ಲಿ ಅಪ್ಪ ಅಮ್ಮ ಎಂದರೇನೆಂದು ಮಕ್ಕಳು ತಿಳಿದು ಆ ಮೂಲಕ ಅವರ ಸ್ವಭಾವಗಳನ್ನೂ ತಿಳಿದುಕೊಳ್ಳುತ್ತಾರೆ.

ಮಕ್ಕಳ ಜೀವನದಲ್ಲಿ ಬರುವ ಪ್ರತಿಯೊಬ್ಬ ವಯಸ್ಕರೂ ಅನುಕರಣೆಗೆ ಗುರಿಯಾಗುತ್ತಾರೆ. ಅದು ಕೇವಲ ಅಪ್ಪ ಅಮ್ಮ ಮಾತ್ರವಲ್ಲ ಹಾಲು ಮಾರುವವರು, ಅಂಗಡಿಯವರು, ಲಾರಿ ಡ್ರೈವರ್‌ಗಳು, ವೈದ್ಯರು, ಅಂಚೆಯವರು ಹೀಗೆ ಪ್ರತಿಯೊಬ್ಬರೂ. ಇದು ಮನುಷ್ಯರು ಮಾತ್ರವೇ ಅಲ್ಲ; ಮಕ್ಕಳು ನಾಯಿಯಾಗುವರು, ಕುದುರೆ ಅಥವಾ ಕಾಡಿನಲ್ಲೋ ಮೃಗಾಲಯದಲ್ಲೋ ನೋಡಿದ ಹುಲಿಯೂ ಆಗಬಹುದು. ಅವರ ನಾಟಕಗಳು ಇನ್ನೂ ಕೆಲವಕ್ಕೆ ಸಹಾಯವಾಗುತ್ತದೆ. ಮಕ್ಕಳಿಗೆ ಅವರ ಪಾತ್ರದ ಅರಿವಾಗುತ್ತದೆ. ಅದೇ ಅವಧಿಯಲ್ಲಿ ತನ್ನ ಪಾತ್ರದಿಂದ ಹೊರಬಂದು, ವಿವಿಧ ಸಾಧ್ಯತೆಗಳನ್ನು ಪರೀಕ್ಷಿಸಲೂ ಅವರಿಂದಾಗುತ್ತದೆ.

ಮಕ್ಕಳ ಜೀವನದಲ್ಲಾಗುವ ಏರುಪೇರುಗಳೂ ಸಹ ಅವರ ಆಟದಲ್ಲಿ ಬರುತ್ತದೆ. ಅವರಿಗಾದ ಆಘಾತ, ಅಪಘಾತ, ಯಾರಾದರೂ ಹತ್ತಿರದವರ ಸಾವು, ಯಾರಿಂದಾದರೂ ದೂರಾಗಿರುವಂತಹ ನೋವಿನ ಪ್ರಸಂಗಗಳನ್ನು ಮತ್ತೆ ಮತ್ತೆ ಪುನರಾವರ್ತಿಸಿ, ಅವನ್ನು ಜೀರ್ಣಿಸಿಕೊಂಡು 'ಬದುಕುವ' ಶಕ್ತಿ ಪಡೆದುಕೊಳ್ಳುತ್ತಾರೆ. ಕೆಲವು ಬಾರಿ ಮಕ್ಕಳು ಹಳೆಯ ಪ್ರಸಂಗಗಳನ್ನು ಅನೇಕ ಬಾರಿ ಪುನರಾವರ್ತಿಸುವುದಲ್ಲದೆ ಹೊಸ ಹೊಸ ಸಂಗತಿಗಳನ್ನು ಸೇರಿಸುತ್ತಲಿರುತ್ತಾರೆ. ಮೊದಮೊದಲು ಅಭಿನಯದಲ್ಲಿ ಯಾವುದನ್ನು ಮರೆಮಾಚಿದ್ದರೋ ಅವು ಪುನರಾವರ್ತನೆಯಲ್ಲಿ ಪ್ರಕಟವಾಗಿ, ಇಡೀ ಪ್ರಸಂಗ ಸ್ಪಷ್ಟವಾಗಿ ಅದರ ಮೇಲೆ ಹಿಡಿತ ಬರುವತನಕ ನಡೆದಿರುತ್ತದೆ. ಇಂತಹ ನಿರ್ದಿಷ್ಟ ಸ್ವಭಾವ, ಪ್ರಸಂಗಗಳ ಅಭಿನಯಗಳು ಸ್ಪಷ್ಟವಾಗಿ ಕಾಣುವುದು ಶಿಶು ಸಹಾಯ ಕೇಂದ್ರಗಳಲ್ಲಿ (Child Guidance Clinic). ತೀವ್ರವಾಗಿ ತೊಂದರೆ, ಕಷ್ಟಕ್ಕೀಡಾದ ಮಗು ಒಂದಷ್ಟು ಕಾಲ ತನಗಾದ ತೊಂದರೆಯನ್ನು ಪುನರಾವರ್ತಿಸಿ ಆಡೀ ಆಡೀ ಸಮಾಧಾನ ತಂದುಕೊಳ್ಳುತ್ತದೆ.

ಮಕ್ಕಳಿಗೆ ಒಂದು ವರ್ಷ ಪೂರೈಸುವುದರೊಳಗೆ ಭಾಷಾ ಬೆಳವಣಿಗೆ ಆರಂಭಗೊಳ್ಳುತ್ತದೆ. ಯುವ ಪೋಷಕರಿಗಂತೂ ಇದೊಂದು ರೋಮಾಂಚಕ ಕ್ಷಣ. ಮಗು ಅಂತೂ ಇಂತೂ ಅಪ್ಪ ಅಮ್ಮನೊಡನೆ ಮಾತಿನ ಸಂಪರ್ಕ ಬೆಳೆಸಲಾರಂಭಿಸುತ್ತದೆ. ಇಷ್ಟು ದಿನ ತಾನೇನು ಅಂದುಕೊಳ್ಳುತ್ತಿದೆ, ಯೋಚಿಸುತ್ತಿದ್ದೆ ಎಂಬುದನ್ನೆಲ್ಲಾ ಮಗು ಈಗ ಹೇಳಬಲ್ಲದು. ಮಗುವಿಗೀಗ ಅವರು ಎಲ್ಲ ಪ್ರೋತ್ಸಾಹ ನೀಡುತ್ತಾರೆ. ಮಗುವಿನೊಡನೆ ಅವರು ಮಾತನಾಡುತ್ತಾರೆ, ಮಗುವಿನ ಮಾತನ್ನು ಆಲಿಸುತ್ತಾರೆ. ಅವರೇನೂ ಮಗುವಿಗೆ ವ್ಯವಸ್ಥಿತವಾದ ತರಬೇತಿ, ಶಿಕ್ಷಣ ನೀಡುವುದಿಲ್ಲ. ಆದರೂ ಮಕ್ಕಳು ಶಾಲೆಗೆ ಸೇರುವ ಮೊದಲೇ ತಮ್ಮ ಇಡೀ ಜೀವನದಲ್ಲಿ ಮಾಡಬಹುದಾದ ಅತ್ಯಂತ ಕ್ಲಿಷ್ಟವಾದ ಕಲಿಕೆಯನ್ನು ಮಾಡಿರುತ್ತಾರೆ. ಆ ಹೊತ್ತಿಗೆ ಮಕ್ಕಳಿಗೆ ಎರಡರಿಂದ ಮೂರು ಸಾವಿರ ಪದಗಳು ತಿಳಿದಿರುತ್ತದೆ. ಅಷ್ಟೇ ಅಲ್ಲ, ಸುಲಲಿತವಾಗಿ ಮಾತನಾಡಿ ತನಗೆ ತೋರಿದ್ದನ್ನು ಹೇಳಲೂ ಶಕ್ತರಾಗುತ್ತಾರೆ. ಇದೆಲ್ಲಾ ಆದದ್ದು ಹೇಗೆ ?

ಇಷ್ಟಾದರೂ ಹಲವಾರು ಕಾರಣಗಳಿವೆ. ಕಲಿಯಲು ಪೋಷಕರ ಪ್ರಚೋದನೆ, ಪ್ರೇರಣೆ, ಜೊತೆಗೂಡಿ ಕಂಡುಕೊಂಡದ್ದು, ಕೇಳಿದ ನೂರಾರು ಪ್ರಶ್ನೆಗಳಿಗೆ ಉತ್ತರಿಸಿದ್ದು, ಮಗುವಿಗಾಗಿ ಗಟ್ಟಿಯಾಗಿ ಓದಿ ಹೇಳಿದ್ದು, ತಪ್ಪಾದಾಗ ತಿದ್ದಿದ್ದುದೇ ಮೊದಲಾದುವು. ಪೋಷಕರು ಹೀಗೆ ಮಾಡಿಲ್ಲದಿದ್ದರೆ ಅದರ ಪರಿಣಾಮ ತೀರಾ ಕೆಟ್ಟದ್ದಾಗಿರುತ್ತದೆ.

ಆಟದ ಪ್ರಭಾವವೂ ಸಹ ಇದರಲ್ಲಿ ಮಹತ್ವದ್ದಾಗಿದೆ. ಎಷ್ಟೋ ಪದಗಳ ಅರ್ಥವನ್ನು ಆಟಗಳಿಂದ ಕಲಿಯಬಹುದು. ಮಕ್ಕಳನ್ನು



ಅವರ ಎರಡು ಮೂರು ವರ್ಷದಿಂದ ಪ್ರಾಥಮಿಕ ಶಾಲೆಯ ಒಂದೆರಡನೆಯ ತರಗತಿಯ ತನಕ ಆಟಗಳನ್ನಾಡುವಾಗ ಗಮನಿಸಿದರೆ, ಮಗುವಿನಲ್ಲಿ ಭಾಷೆ ಅದೆಷ್ಟು ವಶವಾಗಿರುತ್ತದೆ ಎಂಬುದು ಕಂಡು ಬರುತ್ತದೆ.

ಯಾವುದಾದರೂ ಒಂದು ಪದದ ಅರ್ಥ ಸಾಮಾನ್ಯವಾಗಿ ಬೇರೆಯವರು ಹೇಳುವುದಷ್ಟಕ್ಕೇ ಸೀಮಿತವಾಗಿರುವುದಿಲ್ಲ. ಮತ್ತದು ಒಮ್ಮೆ ಕಲಿತರೆ ಹಾಗೇ ಉಳಿದುಹೋಗುವುದಿಲ್ಲ. ಉದಾಹರಣೆಗೆ, 'ಅಪ್ಪ' ಎಂದರೆ, ಮನೆಯಲ್ಲಿ ತಮ್ಮೊಡನೆ ವಾಸಮಾಡುವ ಗಂಡಸು, ಬೆಳಗಿನ ಹೊತ್ತು ಹೊರಹೋಗಿ ಸಂಜೆ ಬರುವವರು. ಏನಾದರೂ ಕೆಟ್ಟುಹೋದರೆ ಸರಿಪಡಿಸುವವರು, ಒಮ್ಮೊಮ್ಮೆ ಸಿಟ್ಟುಮಾಡಿಕೊಂಡು ಗಟ್ಟಿದನಿಯಲ್ಲಿ ಬೈದು ಹೊಡೆದರೂ ಹೊಡೆಯುವವರು, (ಕುಡಿದು ಬಂದರೂ ಬಂದಾರು), ಹೀಗೆ ಏನೇನೋ. ಮಕ್ಕಳು ತಮ್ಮಾಟದಲ್ಲಿ ಇವೇ ಮೊದಲಾದ ಪಾತ್ರಗಳನ್ನು ಅನುಕರಿಸಿ, ನಟಿಸಿ ಅದರೊಡನೆ ಹೊಂದುವ ಪದಗಳನ್ನು ಪ್ರಯೋಗಿಸುತ್ತಾರೆ.

ವಸ್ತುಗಳ ಜೊತೆ ಕೂಡಾ ಮಕ್ಕಳು ಇದೇ ರೀತಿಯ ಪ್ರಕ್ರಿಯೆಯಲ್ಲಿ ತೊಡಗುತ್ತಾರೆ. ನೀರು ಎಂಬ ಪದವನ್ನವರು ಶೀಘ್ರವಾಗಿ ಕಲಿಯುತ್ತಾರೆ. ಆದರೆ ನೀರು ಎಂದು ಯಾವುದಕ್ಕೆ ಹೇಳುತ್ತೇವೋ ಅದರ ವಿವಿಧ ರೂಪಗಳ ಬಗ್ಗೆ ಆಟದಿಂದಲೇ ಮಕ್ಕಳಿಗರಿವು ಆಗುವುದು. ನೀರಿನಿಂದ ಏನು ಮಾಡಬಹುದು, ಏನು ಮಾಡಲಾಗದು ಮತ್ತು ಅದಕ್ಕೆ ಸೂಚಿಸುವ ಪದಗಳು (ಹರಿಯುವುದು, ಹೆಪ್ಪುಗಟ್ಟಿರುವುದು, ಮುಕ್ಕಳಿಸುವುದು, ಚೆಲ್ಲುವುದು ಇವೇ ಮೊದಲಾದವು) ಈ ಎಲ್ಲವೂ ಆಟಗಳಿಂದಲೇ ತಿಳಿಯುವುದು.

ಮಕ್ಕಳು ಶಾಲಾ ವಯಸ್ಸಿಗೆ ಬರುವ ತನಕ ಈ ಎಲ್ಲವೂ ಹೆಚ್ಚೂ ಕಡಿಮೆ ಹೀಗೇ ಸಾಗುವುದು. ಶಾಲೆಯೆಂದರೆ ಕಲಿಕೆಯ ಜೀವನದಲ್ಲಿ ಮತ್ತೊಂದು ಹೊಸ ಮಜಲು ಅಲ್ಲಿ ಹೊಸ ವಿಚಾರ, ಸಂಗತಿಗಳನ್ನು ಕಲಿಯಲು ಮಕ್ಕಳು ಎದುರು ನೋಡುತ್ತಾರೆ ಎಂಬುದೇನೋ ನಿಜ. ಆದರೆ ಮನೆಯಿಂದ ದೂರವಾಗಿ, ಯಾರೋ ಹೊಸಬರಿರುವ ಗುಂಪಿನಲ್ಲಿ ಸೇರುವ ಆಘಾತ, ಮತ್ತು ಅನೇಕ ಮಕ್ಕಳಿಗೆ ಈ ಹೊಸ ವಾತಾವರಣ ಅಪೇಕ್ಷಿಸುವ ರೀತಿಯಲ್ಲಿ ನಡೆದುಕೊಳ್ಳಲು ಅನೇಕ ವಿಚಾರಗಳನ್ನು ಅರ್ಥಮಾಡಿಕೊಂಡು ಅಳವಡಿಸಿಕೊಳ್ಳಲು ಅವರದೇ ಆದ ಸಮಯ, ವಿಧಾನ ಬೇಕಾಗುತ್ತದೆ.

ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದದ್ದು, ಕಲಿಯುವಿಕೆಯ ಪ್ರಕ್ರಿಯೆ ನಿಧಾನವಾಗಿ, ಹಂತಹಂತವಾಗಿ ಸಾಗುತ್ತದೆ ಎಂಬುದು. ತಿಳಿಯುವುದಕ್ಕೆ, ಕಲಿಯುವುದಕ್ಕೆ ಆಟ ಬಹಳ ಮುಖ್ಯವಾದ ಸಾಧನವಾಗಿ ಮುಂದುವರಿಯುತ್ತದೆ. ಈ ಹಂತಗಳಲ್ಲಿ ಆಟವನ್ನೇನಾದರೂ ಕೈಬಿಟ್ಟರೆ ಅದರ ಜೊತೆಯಲ್ಲೇ ಕಲಿಯುವ ಸುಖ, ಸಂತೋಷ, ಆನಂದವೂ ಮರೆಯಾಗಿ, ಅದರ ಜಾಗದಲ್ಲಿ ಏಕತಾನತೆ, ಬೇಸರ ಬಂದು ಆವರಿಸಿಕೊಳ್ಳುತ್ತದೆ. ವಾಸ್ತವವಾಗಿ ಆಟವೆಂಬುದು ಜೀವನವಿಡೀ ನಮ್ಮೆಲ್ಲ ಕೆಲಸಗಳಲ್ಲಿ ಬಹಳ ಮುಖ್ಯವಾದುದಾಗಿದೆ.


ತೋಟ, ಹೊಲವನ್ನು ಮಾಡುತ್ತಿರುವ ವ್ಯಕ್ತಿಯೊಬ್ಬರನ್ನು ಗಮನಿಸಿ, ಆತ ಅದನ್ನು ಬದುಕಿಗಾಗಿ ಮಾಡುತ್ತಿರಬಹುದು ಅಥವಾ ಹವ್ಯಾಸಕ್ಕಿರಬಹುದು. ಅವರ ಕೆಲಸದಲ್ಲಿ ಆಟ ಎಂದು ಹೇಳಬಹುದಾದ ಅಂಶವನ್ನು ನಿಮ್ಮಿಂದ ಗುರುತಿಸಲಾಗುವುದೆ ? ಆ ಅಂಶಗಳಿಲ್ಲದಿದ್ದರೆ, ಕೆಲಸ ಬಹಳ ಬೇಸರವಾದ ನಿರುತ್ಸಾಹದಿಂದ ಕೂಡಿದ ಏಕತಾನತೆಯ ಕ್ರಿಯೆಯಾಗಿ, ಆ ಕೆಲಸದಲ್ಲಿ ಸುಖವಿಲ್ಲದೆ ಕೇವಲ ನಾಲ್ಕು ಕಾಸು ಸಂಪಾದಿಸಲು ಮಾಡಿದಂತಾಗುತ್ತದೆ.

ಇಲ್ಲಿಯವರಿಗಿನ ನಮ್ಮ ಚರ್ಚೆಯಲ್ಲಿ, (ಹಿಂದೆ ಕಲಿಯುವ ಹಂತಗಳಲ್ಲಿ) ಶಿಕ್ಷಕರು ಇರಲೇ ಇಲ್ಲವೇನೋ ಮಕ್ಕಳು ಕಲಿಯಲು ಬುದ್ಧಿವಂತ ಪೋಷಕರು ಮತ್ತು ಒಂದಷ್ಟು ಸಾಮಗ್ರಿಗಳಿದ್ದರೆ ಸಾಕೇನೋ ಎಂಬಂತಿದೆ. ಬುದ್ಧಿವಂತ ಪೋಷಕರ ಸಹಕಾರ ಇದ್ದಲ್ಲಿ ಶಿಕ್ಷಕರ ಕೆಲಸ ಬಹಳ ಸುಲಭವೂ ಮತ್ತು ಅದ–ರಿಂದ ಹೆಚ್ಚಿನ ಸಾಧನೆಯೂ ಆಗುತ್ತದೆಂಬುದು ಸತ್ಯ. ಜೊತೆಗೆ ಕೆಲವು ಪೂರಕ ಸಾಮಗ್ರಿಗಳಿದ್ದರಂತೂ ವಯಸ್ಕರ ಯಾವುದೇ ಸಹಾಯವಿಲ್ಲದೆ ಮಕ್ಕಳು ಸಾಕಷ್ಟು ಕಲಿಯುತ್ತಾರೆ. ಮೂರು ವರ್ಷದ ಮಗುವೊಂದನ್ನು ಸಮುದ್ರ ತೀರಕ್ಕೆ ಕರೆದೊಯ್ಯಿರಿ ಸಾಕು. ನೀರು, ಕಲ್ಲುಗಳೊಡನೆ ಏನು ಮಾಡಬೇಕೆಂದು ನೀವೇನೂ ಮಗುವಿಗೆ ಹೇಳಿಕೊಡಬೇಕಾಗಿಲ್ಲ.

ಬಾಲ್ಯದಲ್ಲಿ ಆರಂಭಿಕ ಕಲಿಯುವಿಕೆಯ ಬಗ್ಗೆ ನಾನು ಉದ್ದೇಶ ಪೂರ್ವಕವಾಗಿಯೇ ಹೆಚ್ಚು ಒತ್ತು ನೀಡಿದ್ದೇನೆ. ಯಾಕೆಂದರೆ, ಈ ಅರಿವಿಲ್ಲದಿದ್ದರೆ ನವೀನ ಪ್ರಾಥಮಿಕ ಶಾಲೆಗಳಲ್ಲಿ ಏನಾಗುತ್ತಿದೆ ಎಂಬುದು ತಿಳಿಯುವುದೇ ಇಲ್ಲ. ಈ ರೀತಿಯ ಉದ್ದೇಶಪೂರ್ವಕ ಒತ್ತು ನೋಡಿ ಯಾರಾದರೂ, ಶಿಕ್ಷಕರಿಗಿಲ್ಲಿ ಸ್ಥಾನವಿಲ್ಲ. ಅವರಿಗಾವ ಪ್ರಾಮುಖ್ಯತೆಯಿಲ್ಲ ಎಂದು ಭಾವಿಸಬಾರದಷ್ಟೆ ! ಸಂಶೋಧನೆಗಳಿಂದ ಮತ್ತು ಅನುಭವಗಳಿಂದ ಗಳಿಸಿದ ಅರಿವು, ತಿಳಿವಳಿಕೆ, ಜ್ಞಾನ ಶಿಕ್ಷಕರ ತಾಳ್ಮೆ, ಹಾಸ್ಯಪ್ರಜ್ಞೆ, ಶಕ್ತಿ, ಸಾಮರ್ಥ್ಯ ಮತ್ತು ಶಿಕ್ಷಣ ನೀಡುವ ಸಾಮರ್ಥ್ಯ ಈ ಎಲ್ಲದರ ಮೇಲೆ ಹೆಚ್ಚು ಹೆಚ್ಚು ಬೇಡಿಕೆಗಳನ್ನೊಡ್ಡುತ್ತಿರುತ್ತದೆ.

# ಆಪ್ತ ಸಮಾಲೋಚನೆ

ಶಾಲಾ ಮಕ್ಕಳಿಗೆ ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಆಪ್ತ ಸಮಾಲೋಚನೆಯ ಅಗತ್ಯವಿರುತ್ತದೆ. ಇಲ್ಲವಾದಲ್ಲಿ ವಿದ್ಯಾರ್ಥಿಗಳು ಅಧ್ಯಯನದಿಂದ ವಿಮುಖರಾಗುವ ಸಾಧ್ಯತೆಗಳೇ ಹೆಚ್ಚು.ಅದರಲ್ಲೂ ಇಂದಿನ ದೃಶ್ಯಮಾಧ್ಯಮಗಳ ಹಾವಳಿಯಿಂದ ಮಕ್ಕಳು ಬಲು ಬೇಗ ಹಾದಿ ತಪ್ಪುತ್ತಾರೆ. ಇಂತಹ ಮಕ್ಕಳಿಗೆ ಸೂಕ್ತ ಸಮಯದಲ್ಲಿ ಸೂಕ್ತ ಮಾರ್ಗದರ್ಶನ ನೀಡುವಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗುತ್ತದೆ. ಅಂಥದೊಂದು ಘಟನೆ ಇಲ್ಲಿದೆ. ಶೀಲ ಬೆಂಗಳೂರು ನಗರದ ಸರ್ಕಾರಿ ಪ್ರೌಢಶಾಲೆಯೊಂದರಲ್ಲಿ 8ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ. ಒಂದು ದಿನ ಇವಳು ಹಣೆಯ ಮೇಲೆ ಮೂರು ಬ್ಯಾಂಡೇಜ್ ಹಾಕಿ ಜೊತೆಗೆ ಬಲಗೈ ವಾಚ್ ಧರಿಸುವ ಜಾಗದಲ್ಲಿ ಅಗಲವಾದ ಬ್ಯಾಂಡೇಜನ್ನು ಹಾಕಿಕೊಂಡು ಶಾಲೆಗೆ ಬಂದಳು. ಮೊದಲ ಅವಧಿಯಲ್ಲಿ ತರಗತಿ ಶಿಕ್ಷಕರು ಬಂದು ಅವಳನ್ನು ಕಾರಣ ಕೇಳಿದರು. ಅವಳು ತನಗೆ ಆಕ್ಸಿಡೆಂಟ್ ಆಗಿ ಗಾಯವಾಗಿದೆ ಎಂದಾಗ ಪಕ್ಕದಲ್ಲಿದ್ದ ಗೆಳತಿಯರು ಇದೆಲ್ಲ ಸುಳ್ಳು ಮಿಸ್ ಎಂದರು. ಬ್ಯಾಂಡೇಜ್ ತೆಗೆಸಿ ನೋಡಿದರೆ ಅಲ್ಲಿ ಗಾಯವೇ ಇಲ್ಲ ! ಮಧ್ಯಾಹ್ನ ನನ್ನ ಗಣಿತದ ಅವಧಿಯಲ್ಲಿ ಆ ತರಗತಿಗೆ ಹೋದೆ. ಈ ವಿಷಯ ತಿಳಿದ ನನಗೆ ಅನುಮಾನ ಬಂದು ಕೈಯಲ್ಲಿನ ದೊಡ್ಡ ಬ್ಯಾಂಡೇಜ್ ಬಿಚ್ಚಲು ಹೇಳಿದಾಗ, ಅವಳು ತುಂಬಾ ನೋವಿರುವಂತೆ ನಟಿಸುತ್ತಾ ಅದನ್ನು ಬಿಚ್ಚಲು ಶುರುಮಾಡಿದಳು. ಆದರೆ ಅಲ್ಲಿಯೂ ಏನೂ ಗಾಯಗಳಿಲ್ಲ!! ಈ ಬಗ್ಗೆ ಅವಳನ್ನು, ಅವಳ ಗೆಳತಿಯನ್ನು ಕರೆಸಿ ವಿಚಾರಿಸಿದಾಗ, ಶೀಲಾಳನ್ನು ಒಬ್ಬ ಕಾಲೇಜು ಹುಡುಗಿ ಪರಿಚಯ ಮಾಡಿಕೊಂಡು ಅವಳು ತನ್ನ ಗೆಳೆಯನಿಗೆ ಪರಿಚಯ ಮಾಡಿಸಿದ್ದಾಳೆ. ಶೀಲ ಅವನನ್ನು ಪ್ರೀತಿಸುತ್ತಿದ್ದಾಳೆ. ಅದೇ ಕಾರಣಕ್ಕಾಗಿ ಅವನೊಡನೆ ಮಾತನಾಡುತ್ತಾ ಪಾರ್ಕ್‌ನಲ್ಲಿ ಕುಳಿತ ಕಾರಣದಿಂದ 3 ದಿನ ತರಗತಿಗೂ ಗೈರು ಹಾಜರಾಗಿದ್ದಾಳೆ ಎಂಬ ವಿಷಯ ಹೊರಬಂತು, ಈ ಬಗ್ಗೆ ಅವಳಿಗೆ ಸೂಕ್ತ ಮಾರ್ಗದರ್ಶನ ನೀಡಿದೆವು. ಅವಳ ಮನೆಯವರನ್ನು ಕರೆಸಿದಾಗ ಅವಳ ಅಜ್ಜಿ, ತಾಯಿ, ಚಿಕ್ಕಮ್ಮ ಎಲ್ಲರೂ ಓಡೋಡಿ ಬಂದರು. ವಿಷಯ ತಿಳಿದು ಅವರು ದುಃಖಿತರಾದರು. ಅವಳಿಗೆ ಬುದ್ಧಿ ಹೇಳಿದರು. (ತಿಳಿವಳಿಕೆಯುಳ್ಳವರಾದ್ದರಿಂದ ಶೀಲಳಿಗೆ ಹೊಡೆಯುವ ಕೆಲಸ ಮಾಡಲಿಲ್ಲ) ಪ್ರತೀದಿನ ಅವಳನ್ನು ಶಾಲೆಗೆ ಕರೆತಂದು ಬಿಡುವುದು ಸಂಜೆ ಶಾಲೆ ಬಿಡುವ ವೇಳೆಗೆ ಶಾಲೆಗೆ ಬಂದು ಅವಳನ್ನು ಕರೆದುಕೊಂಡು ಹೋಗುವುದು ಮಾಡುತ್ತಿದ್ದರು. ಆದರೆ ಶೀಲಳ ಮನಸ್ಸು ಮಾತ್ರ ಬದಲಾಗಲಿಲ್ಲ. ಅವಳಿಗೆ ಪ್ರೀತಿಸುವ ಖಯಾಲು ಹಿಡಿಸಿದ್ದಳು ಆ ಕಾಲೇಜು ಹುಡುಗಿ. ಇವಳು ಶಾಲೆ ಬಿಟ್ಟು ಹೊರಗೆ ಹೋಗುವ ಅವಕಾಶ ಇಲ್ಲದ್ದರಿಂದ ಶಾಲೆಯಲ್ಲೇ ಇರುವ 10ನೇ ತರಗತಿಯ ಹುಡುಗನಿಗೆ ಪ್ರೇಮಪತ್ರ ಬರೆಯಲು ಶುರುಮಾಡಿದಳು. ಅದನ್ನು ಓದಿದ ಹುಡುಗ ಆಗಿಂದಾಗ್ಗೆ ಅವಳ ಮನೆಯ ಮುಂದೆ ನಿಲ್ಲುವುದು, ಓಡಾಡುವುದು ಪ್ರಾರಂಭಿಸಿದ್ದ ಶೀಲಳ ಶಿಕ್ಷಕರಾದ ನಮಗೆ ಈ ವಿಷಯ ಗಮನಕ್ಕೆ ಬಂತು. ಹುಡುಗನನ್ನು ಕರೆಸಿ ವಿಚಾರ ನಡೆಸಿದೆವು. ಶೀಲ ಓದಿನಲ್ಲಿ ಹಿಂದೆ ಬೀಳುತ್ತಿರುವುದು ಊಟ ಮಾಡದಿರುವುದು, ಏನೋ ಕಳೆದುಕೊಂಡಂತಿರುವುದು ಕಂಡುಬಂತು. ಈ ಬಗ್ಗೆ ಮತ್ತೊಮ್ಮೆ ಅವರ ಪೋಷಕರೊಂದಿಗೆ ಚರ್ಚಿಸಿದೆವು. ಹಾಗೂ ಅವಳನ್ನು ಮನೋವೈದ್ಯರಲ್ಲಿಗೆ ಕರೆದುಕೊಂಡು ಹೋಗಲು ಸೂಚಿಸಿದೆವು.



ಮನೋವೈದ್ಯರು ಶೀಲ ಹಾಗೂ ಮನೆಯವರೊಡನೆ ಸಮಾಲೋಚನೆ ನಡೆಸಿದರು. ಅವಳಿಗೆ ಸೂಕ್ತ ಔಷಧಿಗಳನ್ನು ನೀಡಿದರು. 2 ರಿಂದ 3 ಬಾರಿ ಅವಳೊಡನೆ ಸಮಾಲೋಚನೆ ನಡೆಸಿದರು. ಶಾಲೆಯ ಶಿಕ್ಷಕರು, ಪೋಷಕರು ಹಾಗೂ ವೈದ್ಯರ ನೆರವಿನಿಂದ ಇಂದು ಶೀಲ ಮೊದಲಿನಂತಾಗಿದ್ದಾಳೆ. ಹೆಚ್ಚು ಓದಿ ಉನ್ನತ ಹುದ್ದೆಗೆ ಹೋಗಬೇಕೆಂದು ಆಶಿಸುತ್ತಾಳೆ. ಪ್ರೌಢಶಾಲೆಯಲ್ಲಿ ಇಂಥ ಅನೇಕ ಘಟನೆಗಳು ನಡೆಯುತ್ತಿರುತ್ತವೆ. ಶಿಕ್ಷಕರು, ಮಕ್ಕಳನ್ನು ಗಮನಿಸಿ, ಅವರೊಡನೆ ಸಮಾಲೋಚಿಸಿ ಮಾರ್ಗದರ್ಶನ ನೀಡಿದಾಗ ಮಾತ್ರ ಮಕ್ಕಳು ಅಧ್ಯಯನದಲ್ಲಿ ಆಸಕ್ತಿ ಉಳಿಸಿಕೊಳ್ಳುತ್ತಾರೆ. ಶಿಕ್ಷಕರು ಕೇವಲ ಪಾಠ ಮಾಡುವ ಯಂತ್ರಗಳಲ್ಲ. ಪ್ರತಿ ಮಗುವಿನ ಕಲಿಕೆ, ಕಲಿಕೆಯಲ್ಲಿನ ಭಿನ್ನತೆ, ಮಕ್ಕಳ ಮನೋಭಾವನೆ ಎಲ್ಲವನ್ನೂ ಅರ್ಥಮಾಡಿಕೊಂಡು, ಶಾಲೆಯಲ್ಲಿನ ಪ್ರತಿ ನಿಮಿಷ ವಿದ್ಯಾರ್ಥಿಯ ಏಳಿಗೆಗೆ ಶ್ರಮಿಸುತ್ತಿರಬೇಕಾಗುತ್ತದೆ.

–ಜೀವಿ. ಶಿಕ್ಷಕರು
ಬೆಂಗಳೂರು



# ಧಾರವಾಡ ಶಿಕ್ಷಣದ ಧಾರೆ



ಅಪರ ಆಯುಕ್ತರ ಕಛೇರಿ, ಧಾರವಾಡ

## ಜಿಲ್ಲೆಯ ಐತಿಹಾಸಿಕ ಧಾರೆ,

ಉತ್ತರ ಕರ್ನಾಟಕದ ಕೇಂಬ್ರಿಡ್ಜ್ ಎಂದೇ ಹೆಸರಾಗಿರುವ ಧಾರವಾಡ ಜಿಲ್ಲೆಯು ವಿಶೇಷವಾದ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. 5ನೇ ಶತಮಾನದ ನಂತರ ಬಂದು ಕನ್ನಡ ನಾಡನ್ನು ಆಳಿದ ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು, ರಾಷ್ಟ್ರಕೂಟರು, ವಿಜಯನಗರದ ಅರಸರು, ಆದಿಲ್‌ಶಾಹಿಗಳು, ಮೈಸೂರು ಒಡೆ–ಯರು, ಪುಣೆಯ ಪೇಶ್ವೆಗಳ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿದೆ. ಪೇಶ್ವೆಯವರ ಆಡಳಿತಕ್ಕೆ ಒಳಪಟ್ಟಿದ್ದರಿಂದ ಮರಾಠಿ ಭಾಷೆಯ ಪ್ರಭಾವ ಹೆಚ್ಚಾಗಿದೆ. 19ನೇ ಶತಮಾನದ ಬ್ರಿಟಿಷ್ ಆಡಳಿತದಲ್ಲಿ ಧಾರವಾಡವು ವಿಭಾಗೀಯ ಕಚೇರಿಯನ್ನು ಹೊಂದಿತ್ತು. ಕರ್ನಾಟಕ ಏಕೀಕರಣಕ್ಕೆ ನಾಂದಿ ಹಾಡಿ ಆ ಚಳುವಳಿಯನ್ನು ಒಂದು ತಾರ್ಕಿಕ ಹಂತಕ್ಕೆ ಕೊಂಡೊಯ್ಯುವುದರ ಮೂಲಕ ಮೈಸೂರು ರಾಜ್ಯವನ್ನು ಕರ್ನಾಟಕ ಮಾಡಿದ ಕೀರ್ತಿಗೆ ಪಾತ್ರವಾಗಿದೆ ಧಾರವಾಡ ಜಿಲ್ಲೆ. ಹೋರಾಟದ ಜೊತೆಗೇ ಕಟ್ಟಿದ ಸಿವಿಲ್ ನ್ಯಾಯಾಲಯಕ್ಕೆ ಹೈಕೋರ್ಟ್ ಸಂಚಾರಿ ಪೀಠದ ಬಡ್ತಿ. ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹಾಗೂ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ ಸೇರಿದಂತೆ ಹಲವು ಸಂಘ–ಸಂಸ್ಥೆಗಳು ಸಹ ಇಂದು ಐವತ್ತರ ಹೊಸ್ತಿಲಿಗೆ ಬಂದು ನಿಂತಿರುವುದರಿಂದ ಅವೆಲ್ಲ ತಮ್ಮ ಸುವರ್ಣ ಸಂಭ್ರಮವನ್ನು ರಾಜ್ಯದ ಸಂಭ್ರಮ ಎನ್ನುವಂತೆ ಬೀಗುತ್ತಿವೆ.



ಮಾಹಿತಿ .ಹೆಚ್.ಎನ್.ನಾಗೂರ
ಶಿಕ್ಷಣಾಧಿಕಾರಿಗಳು,
ಉಪನಿರ್ದೇಶಕರ ಕಛೇರಿ ಬಾಗಲಕೋಟೆ

ಇಡೀ ದೇಶವೇ ಬೆಕ್ಕಸ ಬೆರಗಾಗುವ ರೀತಿಯಲ್ಲಿ ಮೂರು 'ಜ್ಞಾನಪೀಠ ಪ್ರಶಸ್ತಿ'ಗಳನ್ನು ಬಾಚಿಕೊಂಡಿರುವ ಧಾರವಾಡ ನಿಜವಾದ ಜ್ಞಾನದ ಗಣಿ ಎನಿಸಿದೆ. ಕರ್ನಾಟಕಕ್ಕೆ ಲಭಿಸಿರುವ 7 ಜ್ಞಾನಪೀಠ ಪ್ರಶಸ್ತಿಗಳಲ್ಲಿ ಇಲ್ಲಿನ ದ.ರಾ. ಬೇಂದ್ರೆ, ವಿ.ಕೃ. ಗೋಕಾಕ ಹಾಗೂ ಗಿರೀಶ್ ಕಾರ್ನಾಡ್ ಅವರು 3 ಪ್ರಶಸ್ತಿಗಳನ್ನು ಮುಡಿಗೆ ಏರಿಸಿಕೊಂಡಿದ್ದಾರೆ.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ವಿದುಷಿ ಡಾ. ಗಂಗೂಬಾಯಿ ಹಾನಗಲ್ ಅವರಿಗೆ ಪದ್ಮವಿಭೂಷಣ, ಪಂ. ಭೀಮಸೇನ್ ಜೋಷಿ ಅವರಿಗೆ ಕರ್ನಾಟಕ ರತ್ನ, ಚನ್ನವೀರ ಕಣವಿ ಅವರಿಗೆ ಪಂಪ ಹಾಗೂ ನಾಡೋಜ ಹಾಗೂ ಪತ್ರಕರ್ತ ಪಾಟೀಲ್ ಪುಟ್ಟಪ್ಪರವರಿಗೆ ನಾಡೋಜ ಪ್ರಶಸ್ತಿಗಳ ಗೌರವ ಸಂದಿರುವ ಜಿಲ್ಲೆ ಧಾರವಾಡ.

ಕೇವಲ 30 ವರ್ಷಗಳ ಹಿಂದೆ ಸಾಮಾನ್ಯ ವಿದ್ಯಾರ್ಥಿನಿಯಾಗಿದ್ದ ಡಾ॥ ಸುಧಾಮೂರ್ತಿ ಇಂದು ಜಗತ್ತಿಗೆ ಮಾದರಿಯಾಗಿರುವ 'ಇನ್ಫೋಸಿಸ್' ಒಡತಿ. ಹಳ್ಳಿಯ ವಕೀಲ ಸೋಮಪ್ಪ ಬೊಮ್ಮಾಯಿ ಈ ರಾಜ್ಯ ಆಳಿದವರು. ಬೀದಿ ನಾಟಕದ ಹುಡುಗ ಯಶವಂತ ಸರದೇಶಪಾಂಡೆ ಗಿನ್ನಿಸ್‌ಗೆ 'ಆಲ್ ದಿ ಬೆಸ್ಟ್' ಹೇಳುತ್ತಿದ್ದಾರೆ. ಠಾಕೂರ್ ಸಿಂಗ್ ಅವರ ಧಾರವಾಡದ ಪೇಡೆಯ ಪರಿಮಳ ವಿಶ್ವವ್ಯಾಪಿ ಪಸರಿಸುತ್ತಿದೆ.

## ಜಿಲ್ಲೆಯ ಭೌಗೋಳಿಕ ಧಾರೆ

1997 ನವ್ವೆಂಬರ್‌ನಲ್ಲಿ ಗದಗ ಮತ್ತು ಹಾವೇರಿ ಹೊಸ ಜಿಲ್ಲೆಗಳು ಸೃಷ್ಟಿಯಾಗುವುದಕ್ಕಿಂತಲೂ ಮುಂಚೆ ಧಾರವಾಡ ಒಂದು ಅಖಂಡ ಜಿಲ್ಲೆಯಾಗಿ ಒಟ್ಟು 17 ಕಂದಾಯ ತಾಲ್ಲೂಕುಗಳನ್ನು ಹೊಂದಿತ್ತು. ಹೊಸ ಜಿಲ್ಲೆಗಳಿಗೆ ಹಂಚಿಹೋದ ನಂತರ ಧಾರವಾಡ ಮೂಲ ಜಿಲ್ಲೆಯಲ್ಲೀಗ 5 ಕಂದಾಯ ತಾಲ್ಲೂಕುಗಳಿವೆ. ಅವು ನವಲಗುಂದ, ಹುಬ್ಬಳ್ಳಿ, ಧಾರವಾಡ ಕಲಘಟಗಿ, ಕುಂದಗೋಳ ಜಿಲ್ಲೆ. 127 ಗ್ರಾಮ ಪಂಚಾಯತಿಗಳನ್ನು, 466 ಜನವಸತಿ ಪ್ರದೇಶಗಳನ್ನು, 1570 ಗ್ರಾ.ಪಂ. ಸದಸ್ಯರನ್ನು, 66 ತಾಪಂ ಸದಸ್ಯರನ್ನು, 18 ಜಿಪಂ ಸದಸ್ಯರನ್ನು, 07 ಎಂ.ಎಲ್.ಎ.ಗಳನ್ನು 01 ಸಂಸತ್ ಸದಸ್ಯರನ್ನು ಹೊಂದಿದೆ. ರಾಜ್ಯದ ಭೂಪಟದಲ್ಲಿ ಧಾರವಾಡ ಜಿಲ್ಲೆಯು ಉತ್ತರಾರ್ಧದ ಪಶ್ಚಿಮ ಭಾಗದಲ್ಲಿದೆ. ಜಿಲ್ಲೆಯು 4263 ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ಜಿಲ್ಲೆಯ ಉತ್ತರ ದಿಕ್ಕಿಗೆ ಬೆಳಗಾಂ ಜಿಲ್ಲೆ, ಪೂರ್ವಕ್ಕೆ ಗದಗ ಜಿಲ್ಲೆ, ದಕ್ಷಿಣಕ್ಕೆ ಹಾವೇರಿ ಜಿಲ್ಲೆ ಹಾಗೂ ಪಶ್ಚಿಮಕ್ಕೆ ಉತ್ತರ ಕನ್ನಡ ಜಿಲ್ಲೆಗಳ ಗಡಿಭಾಗಗಳನ್ನು ಹೊಂದಿದೆ. 2001ರ ಜನಗಣತಿ ಪ್ರಕಾರ ಜಿಲ್ಲೆಯ ಒಟ್ಟಾರೆ ಜನಸಂಖ್ಯೆ ಗಂಡು : 823415 ಹೆಣ್ಣು : 780379 ಒಟ್ಟು 1603794 ಇರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಗಂಡು 371309, ಹೆಣ್ಣು 350759, ಒಟ್ಟು 722068 ಇದ್ದು ನಗರ ಪ್ರದೇಶದಲ್ಲಿ ಗಂಡು 452706, ಹೆಣ್ಣು 429620, ಒಟ್ಟು 882326 ಇರುವುದು ದಾಖಲಾಗಿದೆ. ಸಮುದ್ರ ಮಟ್ಟಕ್ಕಿಂತ ಅಂದಾಜು 800 ಮೀ ಮೇಲ್ಮಟ್ಟದಲ್ಲಿದೆ. ಜಿಲ್ಲೆಯನ್ನು ನೈಸರ್ಗಿಕವಾಗಿ ಮಲೆನಾಡು, ಉಪಮಲೆನಾಡು ಹಾಗೂ ಬಯಲು ಪ್ರದೇಶ ಎಂದು ಮೂರು ವಿಭಾಗಗಳನ್ನಾಗಿ ವಿಂಗಡಿಸಿದೆ. ಸರಾಸರಿ ಉತ್ತಮ ರೀತಿಯ ಮಳೆ ಬೀಳುತ್ತದೆ. ಕಲಘಟಗಿ ಹಾಗೂ ಅಳ್ಣಾವರ ಪ್ರದೇಶಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಮಳೆ ಬೀಳುತ್ತದೆ. ಜಿಲ್ಲೆಯು

156 ಕಿ.ಮೀ. ರಾಷ್ಟ್ರೀಯ ಹೆದ್ದಾರಿ, 163 ಟೆಲಿಗ್ರಾಫ್ ಮತ್ತು 73 ಟೆಲಿಫೋನ್ ಎಕ್ಸಚೇಂಜ್‌ಗಳನ್ನು ಹೊಂದಿದೆ. ಇದಲ್ಲದೇ 26 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, 3 ಉಪ ಆರೋಗ್ಯ ಘಟಕಗಳನ್ನು 5 ಸರಕಾರಿ ಆಸ್ಪತ್ರೆಗಳನ್ನು, 27 ಖಾಸಗಿ ನರ್ಸಿಂಗ್ ಹೋಂ ಮತ್ತು ಆಸ್ಪತ್ರೆಗಳನ್ನು 6 ಕುಟುಂಬ ಕಲ್ಯಾಣ ಕೇಂದ್ರಗಳನ್ನು ಹಾಗೂ 185 ಉಪ ಕುಟುಂಬ ಕಲ್ಯಾಣ ಘಟಕಗಳನ್ನು ಮತ್ತು 806 ಪೂರ್ವ ಪ್ರಾಥಮಿಕ ಕೇಂದ್ರಗಳನ್ನು ಹೊಂದಿದೆ. ಜಿಲ್ಲೆಯ ಸಾಕ್ಷರತಾ ಪ್ರಮಾಣವು ರಾಷ್ಟ್ರ ಮತ್ತು ರಾಜ್ಯದ ಸರಾಸರಿಗಿಂತ ಉತ್ತಮವಾಗಿದೆ. 2001 ರ ಜನಗಣತಿಯ ಪ್ರಕಾರ ಜಿಲ್ಲಾ ಸಾಕ್ಷರತೆ ಪ್ರಮಾಣ ಪುರುಷರು ಶೇ. 81.04, ಸ್ತ್ರೀಯರು 62.20 ಒಟ್ಟು ಶೇ. 71.62 ಇದೆ. ರಾಜ್ಯದ ಸಾಕ್ಷರತೆ ಪ್ರಮಾಣ ಪುರುಷರು ಶೇ. 79.29, ಸ್ತ್ರೀಯರು 57.45 ಒಟ್ಟು ಶೇ. 68.37 ಇದೆ ರಾಷ್ಟ್ರದ ಸಾಕ್ಷರತೆ ಪುರುಷರು ಶೇ. 75.85, ಸ್ತ್ರೀಯರು 54.46 ಒಟ್ಟು ಶೇ. 65.15 ಇರುವುದು.

**ಜಿಲ್ಲೆಯ ಶೈಕ್ಷಣಿಕ ಧಾರೆ :**

ಕಲಿಕೆ, ಕಾವ್ಯ ರಚನೆಗೆ ಸಾಂಸ್ಕೃತಿಕ ಅಮೋಘ ಪರಂಪರೆಯನ್ನು ಹೊಂದಿದ ಧಾರವಾಡ ಜಿಲ್ಲೆಯು ಶೈಕ್ಷಣಿಕವಾಗಿ ತನ್ನ ವಿಶಿಷ್ಠ ಸ್ಥಾನ ಗಳಿಸಿದೆ. ವಿಶೇಷ ಶೈಕ್ಷಣಿಕ ಹಿನ್ನೆಲೆ ಇರುವ ಧಾರವಾಡದ ಮುರುಘಾಮಠ, ಹುಬ್ಬಳ್ಳಿಯ ಸಿದ್ಧಾರೂಢ ಮಠ, ಮೂರುಸಾವಿರಮಠ ಮತ್ತು ಅಮ್ಮಿನಭಾವಿ ಹಿರೇಮಠಗಳು ಹಿಂದೂ ಧರ್ಮದ ಪ್ರಮುಖ ಜಿಲ್ಲಾ ಸ್ಥಳಗಳಾಗಿ ಶಿಕ್ಷಣ ಪ್ರಸಾರಕ್ಕೆ ನೆಲೆನಿಂತ ಮಠಗಳು. ಹೋಲಿ ಕ್ರೈಸ್ತ ಚರ್ಚ್ ಸಹ ಆರಂಭಗೊಂಡು 150 ವರ್ಷಗಳ ಶೈಕ್ಷಣಿಕ ಪ್ರಸಾರದ ವರ್ಷವನ್ನಾಚರಿಸಿದೆ. ಸರ್ ಡೆಪ್ಯೂಟಿ ಚೆನ್ನಬಸಪ್ಪನವರು 150 ವರ್ಷಕ್ಕೂ ಹಿಂದೆ-ಯೇ ಸರ್ಕಾರಿ ಶಿಕ್ಷಕರ ತರಬೇತಿ ಮಹಾವಿದ್ಯಾಲಯ ಪ್ರಾರಂಭ ಮಾಡಿದ್ದಲ್ಲದೆ ಕನ್ನಡ ಶಾಲೆಗಳನ್ನು ಸ್ಥಾಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಹುಬ್ಬಳ್ಳಿ ಹಾಗೂ ಧಾರವಾಡದ ಮಹಾನಗರ ಪಾಲಿಕೆ ಪ್ರದೇಶದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಶಿಕ್ಷಣ ನೀಡುವ ಕಾರ್ಯವು ಉತ್ತಮ ರೀತಿಯಿಂದ ಬಹು ವರ್ಷಗಳಿಂದ ನಡೆದು ಬಂದಿದೆ.

**ಜಿಲ್ಲೆಯಲ್ಲಿ ಸ್ಥಾಪಿತವಾದ ಪ್ರಮುಖ ಶಿಕ್ಷಣ ಸಂಸ್ಥೆಗಳು ಮತ್ತು ಸ್ಥಾಪನೆಯಾದ ವರ್ಷ**

1) ಸಂಸ್ಕೃತ ಪಾಠಶಾಲೆ ಸ್ಥಾಪನೆ 1887 2) ಕರ್ನಾಟಕ ಕಾಲೇಜು ಸ್ಥಾಪನೆ 1917ರಲ್ಲಿ 3) ಕರ್ನಾಟಕ ವಿಶ್ವವಿದ್ಯಾನಿಲಯ 1949 4) ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ 1947 ರಲ್ಲಿ ಸ್ಥಾಪನೆ 5) ಅಖಿಲ ಭಾರತ ಬಾನುಲಿ ಕೇಂದ್ರ 1952 6) ದೂರದರ್ಶನ ಹೆಚ್‌ಪಿಟಿ ಸ್ಥಾಪನೆ 1994 7) ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ 8) ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆ ಧಾರವಾಡ 9) ಅಂಜುಮನ್ ಇಸ್ಲಾಂ, ಧಾರವಾಡ-1952 10) ಟೀಚರ್ಸ್ ಕಾಲೇಜ್ ಫಾರ್ ವುಮನ್ 1895 11) ಕೆಎಲ್‌ಇ ಸೊಸೈಟಿಯ ವಿವಿಧ ಶಿಕ್ಷಣ ಸಂಸ್ಥೆಗಳು ಧಾರವಾಡ ಮತ್ತು ಹುಬ್ಬಳ್ಳಿ 12) ಕಿಟ್ಟೆಲ್ ಕಾಲೇಜ್ ಧಾರವಾಡ 14) ದೈಹಿಕ ಶಿಕ್ಷಣ ಸಂಸ್ಥೆ ಮಲ್ಲಸರ್ಜ್ಜನ ವ್ಯಾಯಾಮ ಶಾಲೆ 1956 15) ಎಸ್.ಡಿ.ಎಂ. ಮೆಡಿಕಲ್, ಡೆಂಟಲ್ ಎಂಜಿನಿಯರಿಂಗ್ ಕಾಲೇಜ್ ಧಾರವಾಡ 16) ಮೆಂಟಲ್ ಹಾಸ್ಪಿಟಲ್ ಧಾರವಾಡ 17) ಶ್ರೀ ಹಾಲಬಾವಿಯವರಿಂದ ಕಲಾ ಶಾಲೆಯ ಸ್ಥಾಪನೆ 1935 ಇದು ಕರ್ನಾಟಕದ ಮೊದಲ ಚಿತ್ರಕಲಾ ಶಾಲೆ.

| **ವಿದ್ಯಾಸಂಸ್ಥೆಗಳು** | **ಸಂಖ್ಯೆ** |
|---|---|
| ಪ್ರೌಢಶಾಲೆಗಳು | 250 |
| ಪದವಿ ಪೂರ್ವ ಕಾಲೇಜುಗಳು | 40 |
| ಪದವಿ ಕಾಲೇಜುಗಳು | 40 |
| ತಾಂತ್ರಿಕ ಕಾಲೇಜು | 8 |
| ಇಂಜಿನಿಯರಿಂಗ್ ಕಾಲೇಜು | 3 |
| ಮೆಡಿಕಲ್ ಕಾಲೇಜ್ (ಭಾರತೀಯ ವೈದ್ಯ ಪದ್ಧತಿಯೂ ಸೇರಿದಂತೆ) | 10 |
| ದಂತ ಕಾಲೇಜು | 1 |
| ಗ್ರಂಥಾಲಯ | 57 |
| ಟಿಸಿಹೆಚ್ ಕಾಲೇಜು | 54 |
| ಬಿ.ಎಡ್./ಎಂ.ಎಡ್ ಕಾಲೇಜು | 10 |
| ಸಿಪಿಎಡ್ ಕಾಲೇಜುಗಳು | 5 |
| ಎಂಪಿಎಡ್ ಕಾಲೇಜುಗಳು | 1 |
| **ಸರ್ಕಾರಿ ಹಾಸ್ಟೆಲ್‌ಗಳು :** | |
| ಮೆಟ್ರಿಕ್ ಪೂರ್ವ ಎಸಿ/ಎಸ್‌ಟಿ ಹಾಸ್ಟೆಲ್‌ಗಳು | 15 |
| ಮೆಟ್ರಿಕ್ ನಂತರದ ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ಗಳು | 5 |
| ಮೆಟ್ರಿಕ್‌ಪೂರ್ವ ಅನುದಾನಿತ ಹಾಸ್ಟೆಲ್ | 4 |
| ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ | 1 |
| **ಇತರ ಹಿಂದುಳಿದ ಸಮುದಾಯದ ಹಾಸ್ಟೆಲ್‌ಗಳು :** | |
| ಮೆಟ್ರಿಕ್ ಪೂರ್ವ | 23 |
| ಮೆಟ್ರಿಕ್ ನಂತರದ | 6 |
| ಅನುದಾನಿತ ಮೆಟ್ರಿಕ್ ಪೂರ್ವ | 7 |

ಪುಟ 19ಕ್ಕೆ............



ಉಪನಿರ್ದೇಶಕರ ಕಚೇರಿ, ಧಾರವಾಡ

## ನಮ್ಮ ಶಾಲೆಗಳು

# ಹೀಗೊಂದು ವಿಶಿಷ್ಟ ಗಣರಾಜ್ಯೋತ್ಸವ



ಹಾವೇರಿ ಜಿಲ್ಲೆಯ ಹಾನಗಲ್ಲ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹುಣಶೆಟ್ಟಿಕೊಪ್ಪ ಕಳೆದ ಎರಡು ದಶಕಗಳಿಂದ ಜನವರಿ 26ರ ಪ್ರಜಾರಾಜ್ಯೋತ್ಸವವನ್ನು ಧಾರ್ಮಿಕ ಉತ್ಸವದ ರೀತಿಯಲ್ಲಿ ಆಚರಿಸುತ್ತಾ ಬಂದಿದೆ. ಇದಕ್ಕೆ ಕಾರಣ ಇಪ್ಪತ್ತು ವರ್ಷಗಳ ಹಿಂದೆ ಹಾನಗಲ್ಲ ವಿರಕ್ತಮಠದ ಹಾಗೂ ಹುಬ್ಬಳ್ಳಿ ಮೂರು ಸಾವಿರ ಮಠದ ಪೂಜ್ಯ ಶ್ರೀಗಳಾದ ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳು ಈ ಪುಟ್ಟ ಗ್ರಾಮಕ್ಕೆ ಮಠದ ಭಿಕ್ಷೆಗೆಂದು ಆಗಮಿಸಿದ್ದರು. ಶಾಲಾ ಧ್ವಜಾರೋಹಣ ಮಾಡಲು ಗ್ರಾಮಸ್ಥರಲ್ಲಿ ಜಗಳ ಪ್ರಾರಂಭವಾಗಿ ತಟಸ್ಥಗೊಂಡ ಸಂದರ್ಭದಲ್ಲಿ ಪೂಜ್ಯಶ್ರೀಗಳವರು ಮಧ್ಯಸ್ಥಿಕೆ ವಹಿಸಿ ಅಂದಿನ ಧ್ವಜಾರೋಹಣವನ್ನು ಸ್ವಾಮೀಜಿಯವರೇ ನೆರವೇರಿಸಿದರು. ಅಂದಿನಿಂದ ಇಂದಿನವರೆಗೂ ಧ್ವಜಾರೋಹಣ ಕಾರ್ಯವನ್ನು ಸ್ವಾಮೀಜಿಯವರೇ ನೆರವೇರಿಸುತ್ತಾ ಬಂದಿರುತ್ತಾರೆ.

704 ಜನಸಂಖ್ಯೆ ಹೊಂದಿ 135 ಕುಟುಂಬಗಳನ್ನು ಹೊಂದಿರುವ ಈ ಪುಟ್ಟ ಗ್ರಾಮದಲ್ಲಿ ಪ್ರಜಾರಾಜ್ಯೋತ್ಸವದ ಹಿಂದಿನ ದಿನವೇ ಎಲ್ಲ ಜಾತಿ, ಮತದ ಬಾಂಧವರೆಲ್ಲರೂ ಕೂಡಿ ಗ್ರಾಮದ ಸ್ವಚ್ಛತೆ, ತಳಿರು ತೋರಣ ಕಟ್ಟುವುದು, ಗ್ರಾಮದ ಎಲ್ಲ ಮನೆಗಳ ಅಂಗಳದಲ್ಲಿ ಸುಂದರವಾಗಿ ರಂಗೋಲಿ ಹಾಕಿ ನವವಧುವಿನಂತೆ ಸಿಂಗರಿಸುವ ಕೆಲಸದಲ್ಲಿ ತೊಡಗಿತ್ತಾರೆ. ಜಾತ್ರಾ ಮಹೋತ್ಸವಗಳಲ್ಲಿ ಸಿಹಿ ಅಡುಗೆ ಮಾಡುವಂತೆ ಎಲ್ಲರ ಮನೆಯಲ್ಲಿ ಸಿಹಿಯೂಟ, ಹೊಸ ಉಡುಗೆ ತೊಟ್ಟು ಸ್ವಾಮೀಜಿಯವರನ್ನು ಸಕಲ ವಾದ್ಯ ಭಜನೆ ಡೊಳ್ಳುಕುಣಿತಗಳ ಮೂಲಕ ಬೆಳಿಗ್ಗೆ 7–00 ಘಂಟೆಗೆ ಬರಮಾಡಿಕೊಂಡು ಗ್ರಾಮದ ಅಂಗನವಾಡಿ ಕೇಂದ್ರ, ಯುವಕ ಸಂಘದ ಧ್ವಜಾರೋಹಣ ಕಾರ್ಯ ಮುಗಿಸಿ ಆನಂತರ ಶಾಲಾ ಧ್ವಜಾರೋಹಣವನ್ನು ಕೈಗೊಂಡು ಶೃಂಗಾರಗೊಂಡ ವೇದಿಕೆಯನ್ನು ಅಲಂಕರಿಸುತ್ತಾರೆ. ಆನಂತರ ಸಭಾ ಕಾರ್ಯಕ್ರಮ, ಭಾಷಣ, ವೇಷಭೂಷಣ ಸ್ಪರ್ಧೆ, ರಂಗೋಲಿ ಸ್ಪರ್ಧೆ ನಡೆಯುತ್ತದೆ. ಪ್ರಜಾರಾಜ್ಯೋತ್ಸವದ ದಿನದಂದು ಕುಟುಂಬಯೋಜನೆ ಅಳವಡಿಸಿದ ದಂಪತಿಗಳನ್ನು ಸನ್ಮಾನಿಸುವುದು ವಿಶೇಷವಾಗಿದೆ. ಪ್ರಜಾರಾಜ್ಯೋತ್ಸವದ ಅಂಗವಾಗಿ ಗ್ರಾಮದ ಎಲ್ಲ ಮಹಿಳೆಯರು ಮತ್ತು ಯುವಕ, ಯುವತಿಯರಿಗಾಗಿ ಮನರಂಜನಾ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ ನೀಡಲಾಗುತ್ತಿದೆ. ಅಷ್ಟೇ ಅಲ್ಲ ವಿದ್ಯಾರ್ಥಿಗಳಿಗಾಗಿ ಮಗ್ಗಿ ಸ್ಪರ್ಧೆ, ರಸಪ್ರಶ್ನೆ, ರಂಗೋಲಿಸ್ಪರ್ಧೆ ಏರ್ಪಡಿಸಿ ಸ್ವಾಮೀಜಿಯವರಿಂದ ಬಹುಮಾನ ನೀಡಲಾಗುತ್ತಿದೆ ಸಾಯಂಕಾಲ 7 ರಿಂದ 12–00 ಗಂಟೆಯವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ.

ಈ ವಿಶಿಷ್ಟ ರೀತಿಯ ಪ್ರಜೆಗಳ ಉತ್ಸವಕ್ಕೆ ತಗಲುವ ವೆಚ್ಚ ಅಂದಾಜು ಹತ್ತರಿಂದ ಹದಿನೈದು ಸಾವಿರ. ಈ ಹಣವನ್ನು ಸ್ಥಳೀಯ ಸಂಘ ಸಂಸ್ಥೆ, ಗ್ರಾಮಸ್ಥರು ದೇಣಿಗೆ ರೂಪದಲ್ಲಿ ಸಂಗ್ರಹಿಸಿ ಉತ್ಸಾಹದಿಂದ ಈ ದಿನಾಚರಣೆ ಮಾಡುತ್ತಾರೆ.

ಕಳೆದ ಮೂರು ವರ್ಷಗಳಿಂದ ಹೊಸ ರೂಪ ನೀಡಿ ನಾಡಿನಾದ್ಯಂತ ಅಷ್ಟೇ ಅಲ್ಲ ದೇಶಕ್ಕೆ ಪರಿಚಯ ಮಾಡಿ ಕೊಡುವಲ್ಲಿ ಅಶೋಕ, ಹನುಮಾಪುರ, ಮುಖ್ಯ ಶಿಕ್ಷಕರ ಪಾತ್ರ ಹಿರಿದಾಗಿದೆ. ಜೊತೆಗೆ ಸಹ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರ ಸಹಕಾರ, ಎಸ್.ಡಿ.ಎಂ.ಸಿ.ಯರ ನೆರವಿನೊಂದಿಗೆ ಶಾಲೆಯಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತಾರೆ.

ಶಾಲೆಯಲ್ಲಿ ಎಲ್ಲ ಮೂಲಭೂತ ಸೌಕರ್ಯಗಳಿವೆ. ಶಾಲೆಗೆ 10 ಗುಂಟೆ ಭೂಮಿಯನ್ನು ದಾನವಾಗಿ ಪಡೆದು ನೊಂದಾಯಿಸಿಕೊಳ್ಳಲಾಗಿದೆ. ಶಾಲಾ ಬಯಲಿನಲ್ಲಿ 20 ತೆಂಗಿನ ಗಿಡಗಳನ್ನು ನೆಡಲಾಗಿದೆ. ಸುಸಜ್ಜಿತ ವೇದಿಕೆ ನಿರ್ಮಿಸಲಾಗಿದೆ. ಅಡುಗೆ ಕೇಂದ್ರಕ್ಕೆ ಬೇಕಾಗುವ ತರಕಾರಿ ಸೊಪ್ಪು ಬೆಳೆಯಲಾಗುತ್ತಿದೆ. ಹೀಗೆ ಶಾಲೆ ಸಮುದಾಯದ ಸಹಕಾರದಿಂದ ಸರ್ವತೋಮುಖವಾಗಿ ಅಭಿವೃದ್ಧಿಯಾಗುತ್ತಿದೆ.

– **ಮುಖ್ಯೋಪಾಧ್ಯಾಯರು**
ಸ.ಹಿ.ಕನ್ನಡ ಪ್ರಾ. ಶಾಲೆ,
ಹುಣಶೆಟ್ಟಿಕೊಪ್ಪ ಹಾನಗಲ್ಲ ತಾ॥

# ನಮ್ಮ ಶಾಲೆಗಳು

## ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನಲ್ಲೊಂದು ಅತ್ಯುತ್ತಮ ಶಾಲೆ



ನಿಲಕುಂದ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಶಾಲೆ ಎಂದರೆ ಪಂಚಪ್ರಾಣ. ಮನೆಗಿಂತಲೂ ಶಾಲೆಯಲ್ಲೇ ಇರಲು ಇಚ್ಚಿಸುವ ಈ ಮಕ್ಕಳು ಬೆಳಿಗ್ಗೆ 7 ಗಂಟೆಗೆ ಶಾಲೆಗೆ ಬಂದರೆ ಮನೆಗೆ ಹಿಂದಿರುಗುವುದು ಸಂಜೆ 7ಕ್ಕೇ.

ದಿನಚರಿ : ಬೆಳಿಗ್ಗೆ 7ಕ್ಕೆ ಬಂದು ಶಾಲಾ ಕೈತೋಟದಲ್ಲಿ ಗಿಡಗಳಿಗೆ ನೀರೆರೆದು, ತಾವು ಸಾಕಿರುವ ಪ್ರಾಣಿ ಪಕ್ಷಿಗಳಿಗೆ ಮೇವುಣಿಸಿ ಅಲ್ಲೇ ಕುಳಿತು ಸ್ವಲ್ಪ ಹೊತ್ತು ಅಭ್ಯಾಸ ಮಾಡುತ್ತಾರೆ. 9 ಗಂಟೆಗೆ ಮನೆಗೆ ತೆರಳಿ ಬೆಳಗಿನ ಸ್ನಾನ ಮುಗಿಸಿ ಲಘು ಉಪಹಾರ ತಿಂದು ಶಾಲೆಗೆ 9–30 ಗಂಟೆಗೆ ಹಾಜರ್. ಪರಿಸರ ಪಾಠ ಇವರಿಗೆ ಇಲ್ಲೇ ಸಿಕ್ಕಿದೆ. ಸರದಿ ಪ್ರಕಾರ 10 ಗಂಟೆಗೆ ತಾವೇ ಶಾಲೆ ಸ್ವಚ್ಛಗೊಳಿಸುತ್ತಾರೆ. 10.30 ರಿಂದ ಮಧ್ಯಾಹ್ನ 1–30ರವರೆಗೆ ತರಗತಿಗಳಲ್ಲಿ ಪಾಠ ಕಲಿಕೆಯ ನಂತರ ಶುಚಿಯಾದ ಊಟಮಾಡಿ ಪುನಃ ಸಂಜೆ 5ರವರೆಗೆ ಆಟಪಾಠಗಳಲ್ಲಿ ಪಾಲ್ಗೊಂಡು ನಂತರ ಎಲ್ಲರೂ ಕೈತೋಟದ ಕೆಲಸ ಮಾಡಿ ಸಂಜೆ 7ಕ್ಕೆ ಮನೆಗೆ ತೆರಳುವ ಪರಿ ನೋಡಲು ನಿಜಕ್ಕೂ ಅಚ್ಚರಿಯೇ ಸರಿ.

ಹಸಿರು ಗಿಡಗಳ ಪೊದೆಯೇ ಶಾಲೆಗೆ ಕಾಂಪೌಂಡ್. ಶಾಲಾವರಣದಲ್ಲಿ ಕೃಷಿ ಪಾಠ ಹೇಳುವ ಬಾಳೆ, ಅಡಿಕೆ, ತೆಂಗು, ಕಾಫಿ, ಏಲಕ್ಕಿ ಔಷಧಿಗಿಡಗಳು, ತರಕಾರಿ, ಹೂ ಹಣ್ಣಿನ ಗಿಡಗಳನ್ನು ನೋಡಿದರೆ ಮಕ್ಕಳ ಜೊತೆಗೆ ಶಿಕ್ಷಕರ ಆಸಕ್ತಿಯೂ ವ್ಯಕ್ತವಾಗುತ್ತದೆ. ಜೇನುಗೂಡುಗಳನ್ನು ಜೇನು ಪೆಟ್ಟಿಗೆಗಳಲ್ಲಿ ಸಾಕಿ ಅದರ ಸವಿಯನ್ನೂ ಉಂಡು ನಲಿಯುತ್ತಿರುವ ಈ ಮುದ್ದು ಪುಟಾಣಿಗಳು ಓದಿನಲ್ಲೂ ಜಾಣರೇ. ಎಲ್ಲರೂ ಓದಿ ಬರೆಯಲು ಕಲಿತಿದ್ದಾರೆ. ಮಗ್ಗಿಯನ್ನು ಚೆನ್ನಾಗಿ ಹೇಳುತ್ತಾರೆ. ರಜೆಯೇ ಇಲ್ಲದ ಶಾಲೆ ಭಾನುವಾರದಂದೂ ಇಲ್ಲಿ ತರಗತಿ ನಡೆಯುತ್ತಿದೆ. ಬೇಸಿಗೆ ರಜೆಯಲ್ಲೂ ಮಕ್ಕಳು ಶಾಲೆಯಲ್ಲೇ ಇರುತ್ತಾರೆ. ಶಾಲಾ ಬೀಗದ ಕೀ ಮಕ್ಕಳ ಬಳಿಯೇ ಇದೆ. ಕಳ್ಳತನ ಇಲ್ಲಿ ಸಾಧ್ಯವೇ ಇಲ್ಲ ಅಂತಾರೆ ಕಾರಣ ಊರಿನ ಎಲ್ಲರೂ ಶಾಲೆಯನ್ನು ತಮ್ಮದೆಂದೇ ಭಾವಿಸಿ ನೋಡಿಕೊಂಡಿದ್ದಾರೆ ಸಮುದಾಯದ ಸಹಭಾಗಿತ್ವದಲ್ಲಿ ಈ ಶಾಲೆ ನಡೆಯುತ್ತಿದೆ.

ಈ ಮಕ್ಕಳು ಕ್ರೀಡೆಯಲ್ಲೂ ಮುಂದಿದ್ದಾರೆ. ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ್ದಾರೆ.

ಇಲ್ಲಿನ ಶಿಕ್ಷಕ ಸತ್ಯನಾರಾಯಣ್ ಅವರಿಗೆ "ಶಿಕ್ಷಣ ತಿಲಕ" ಎಂಬ ಬಿರುದು ನೀಡಿ ಗೌರವಿಸಲಾಗಿದೆ. ವಿಷ್ಣು ಸೇನಾ ಸಮಿತಿಯವರು ಈ ಬಿರುದು ನೀಡಿದ್ದಾರೆ. ಶಾಲೆಯಲ್ಲಿರುವ 32 ಮಂದಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯೇ ಈ ಶಿಕ್ಷಕರ ಪರಮಗುರಿ ಎನ್ನುತ್ತಾರೆ ಮುಖ್ಯ ಶಿಕ್ಷಕರು.

ಶಾಲಾ ಸ್ವಚ್ಛತೆ, ಆರೋಗ್ಯಕರ ಅನ್ನದಾಸೋಹ, ಉಚಿತ ಸಮವಸ್ತ್ರದ ಶುಭ್ರತೆ, ಪಾಠ ಪ್ರವಚನಗಳ ಅಭ್ಯಾಸಕ್ಕಾಗಿ ಉಚಿತ ಪಠ್ಯ ಪುಸ್ತಕ, ಲೇಖನ ಸಾಮಗ್ರಿ, ಆಗಿಂದಾಗ್ಗೆ ಆರೋಗ್ಯ ತಪಾಸಣೆ ಎಲ್ಲವೂ ಸಮರ್ಪಕವಾಗಿ ನಡೆಯುತ್ತಿರುವ ಈ ಶಾಲೆಯಲ್ಲಿ ಮಕ್ಕಳೆಲ್ಲರೂ ಸರ್ಕಾರಕ್ಕೆ ಶರಣೆಂದು ಗುರುಗಳಿಗೆ ವಂದಿಸಿ ನಮಸ್ಕರಿಸುವಾಗ ಸಾ. ಶಿಕ್ಷಣ ಇಲಾಖೆಗೆ ಧನ್ಯೋಸ್ಮಿ ಎಂದು ನಮಿಸಿ ಗೌರವ ಸಲ್ಲಿಸುವಂತಾಗುತ್ತದೆ.

– ಗೀತಾ ಕೆ.ಜಿ.

ಹಿ. ಸ. ನಿ, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು–2



ಹಸಿರಿನಿಂದ ಕಂಗೊಳಿಸುತ್ತಿರುವ ಶಾಲಾ ವನ

.............ಪುಟ 16ರಿಂದ



ಜಿಲ್ಲೆಯಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ (ಜಿಲ್ಲಾ ಕ್ರೋಢೀಕರಣ ಮಾತ್ರ)

| ಕ್ರ.ಸಂ. | ಬ್ಲಾಕ್ | ವಿಭಾಗ | ಸರ್ಕಾರಿ | ಸಮಾಜ ಕಲ್ಯಾಣ | ಅನುದಾನಿತ | ಅನುದಾನರಹಿತ | ಇತರೆ | ಒಟ್ಟು |
|---|---|---|---|---|---|---|---|---|
| ಒಟ್ಟು | | ಪ್ರಾ.ಶಾ. | 276 | 3 | 10 | 96 | 2 | 387 |
| | | ಪ್ರಾ.ಶಾ+ಹಿಪ್ರಾ.ಶಾ. | 491 | | 43 | 77 | 3 | 614 |
| | | ಪ್ರಾಶಾ+ಹಿಪ್ರಾಶಾ+ಪ್ರೌ.ಶಾ./ಪ.ಪೂ | | | 3 | 23 | 2 | 28 |
| | | ಹಿ.ಪ್ರಾ.ಶಾ. | | | 6 | 8 | 1 | 15 |
| | | ಪ್ರಾ.ಶಾ.+ಪ್ರೌ.ಶಾ./ಪ.ಪೂ | 1 | 2 | 14 | 7 | 3 | 27 |
| | | ಒಟ್ಟು | 768 | 5 | 76 | 211 | 11 | 1071 |

ಮೂಲ ; EMIS ವರದಿಗಳು 2007–08

ಜಿಲ್ಲೆಯಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿರುವ ಶಿಕ್ಷಕರ ವಿವರ

| ತಾಲ್ಲೂಕಿನ ಹೆಸರು | ಒಟ್ಟು ಶಾಲೆಗಳು | ಪ್ರಧಾನ ಸೂಚ್ಯಂಕಗಳು | | | | ಉಪಾಧ್ಯಾಯರು | | | ತರಗತಿ ಕೊಠಡಿಗಳು | ಒಟ್ಟು ವಿಭಾಗಗಳು | | |
|---|---|---|---|---|---|---|---|---|---|---|---|---|
| | | ಪಿಟಿಆರ್ | ಎಸ್‌ಸಿಆರ್ | ಒಂದು ವಿಭಾಗಕ್ಕೆ | | ಗಂಡು | ಹೆಣ್ಣು | ಒಟ್ಟು | | ಪ್ರಾಥಮಿಕ ತರಗತಿ | ಹಿರಿಯ ಪ್ರಾಥಮಿಕ ತರಗತಿ | ಒಟ್ಟು |
| | | | | ವಿದ್ಯಾರ್ಥಿಗಳು | ಉಪಾಧ್ಯಾಯರು | | | | | | | |
| **ಎಲ್ಲಾ ವ್ಯವಸ್ಥೆಗಳ ಒಟ್ಟು** | | | | | | | | | | | | |
| ಧಾರವಾಡ | 203 | 33.60 | 29.16 | 32.02 | 0.95 | 418 | 763 | 1181 | 1365 | 947 | 296 | 1243 |
| ಹುಬ್ಬಳ್ಳಿ | 148 | 34.10 | 32.43 | 36.34 | 1.07 | 290 | 663 | 953 | 1,004 | 692 | 204 | 896 |
| ಹೆಚ್‌ಡಿಎಂಸಿ | 346 | 34.60 | 39.10 | 58.16 | 1.68 | 902 | 2502 | 3404 | 3029 | 1450 | 586 | 2036 |
| ಕಲಘಟಗಿ | 132 | 35.60 | 32.17 | 27.99 | 0.79 | 351 | 302 | 653 | 730 | 628 | 211 | 839 |
| ಕುಂದಗೋಳ | 114 | 32.20 | 25.67 | 31.05 | 0.97 | 463 | 241 | 704 | 882 | 549 | 180 | 729 |
| ನವಲಗುಂದ | 128 | 28.50 | 26.44 | 30.81 | 1.08 | 556 | 353 | 909 | 979 | 621 | 219 | 840 |
| ಒಟ್ಟು | 1071 | 33.08 | 30.83 | 36.06 | 1.09 | 2980 | 4824 | 7804 | 7989 | 4887 | 1696 | 6583 |

ಒಟ್ಟಾರೆ ದಾಖಲಾತಿ ಅನುಪಾತ( GER)

| ತರಗತಿ | ಜಿಲ್ಲೆ | ಒಟ್ಟಾರೆ | | | ಪ. ಜಾತಿ. | | | ಪ. ಪಂಗಡ | | | ಮುಸ್ಲಿಂ | | |
|---|---|---|---|---|---|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1–5 | ಧಾರವಾಡ | 133.22 | 134.01 | 133.60 | 138.06 | 140.80 | 139.17 | 130.88 | 137.15 | 133.53 | 135.90 | 141.49 | 138.55 |
| 6–8 | ಧಾರವಾಡ | 117.89 | 116.33 | 117.12 | 134.96 | 123.63 | 129.57 | 126.82 | 128.58 | 127.62 | 99.99 | 103.35 | 101.51 |
| 1–8 | ಧಾರವಾಡ | 111.15 | 110.89 | 111.01 | 119.03 | 116.22 | 117.64 | 112.45 | 115.45 | 113.72 | 106.41 | 109.92 | 108.04 |

2. ನಿವ್ವಳ ದಾಖಲಾತಿ ಅನುಪಾತ ( NER)

| ತರಗತಿ | ಜಿಲ್ಲೆ | ಒಟ್ಟಾರೆ | | | ಪ. ಜಾತಿ. | | | ಪ. ಪಂಗಡ | | | ಮುಸ್ಲಿಂ | | |
|---|---|---|---|---|---|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1–5 | ಧಾರವಾಡ | 94.56 | 95.82 | 95.16 | 97.08 | 100.59 | 98.56 | 93.53 | 98.06 | 95.50 | 96.82 | 101.96 | 99.26 |
| 6–8 | ಧಾರವಾಡ | 71.21 | 70.66 | 70.93 | 80.46 | 74.18 | 77.47 | 76.71 | 78.62 | 77.62 | 60.99 | 63.53 | 62.15 |
| 1–8 | ಧಾರವಾಡ | 74.75 | 75.09 | 74.91 | 79.22 | 78.49 | 78.84 | 76.09 | 78.41 | 77.11 | 72.17 | 75.35 | 73.66 |

4) 2007 ರ ಮಾರ್ಚ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 100 ರಷ್ಟು ಸಾಧನೆ ಮಾಡಿದ ಶಾಲೆಗಳು

| ಅ.ನಂ. | ಶಾಲೆಯ ಹೆಸರು |
|---|---|
| 1 | ಕಾನ್ವೆಂಟ್ ಪ್ರೌಢ ಶಾಲೆ, ಹುಬ್ಬಳ್ಳಿ– ಕೇಶವಪುರ, ಹುಬ್ಬಳ್ಳಿನಗರ ವಲಯ |
| 2 | ಶ್ರೀ ಶಾಂತಿನಾಥ ಹಿಂದಿ ಪ್ರೌಢ ಶಾಲೆ, ಘಂಟಿಗೇರಿ, ಕೆ.ಇ.ಬಿ. ಎದುರು, ಹುಬ್ಬಳ್ಳಿ ನಗರ ವಲಯ |
| 3 | ಆರ್.ಇ.ಎಲ್.ಎಸ್. ವಿಶ್ವಭಾರತಿ ಬಾಲಿಕ ಪ್ರೌಢಶಾಲೆ ವಿದ್ಯಾನಗರ, ಹುಬ್ಬಳ್ಳಿ ನಗರ, ವಲಯ |
| 4 | ಕರ್ನಾಟಕ ಪೋಲಿಸ್ ಚಿಲ್ಡ್ರನ್ಸ್ ರೆಸಿಡೆನ್ಷಿಯಲ್ ಪೋಲಿಸ್ ಹೆಡ್ ಕ್ವಾಟರ್ಸ್ ಪ್ರೌಢಶಾಲೆ, ಹುಬ್ಬಳ್ಳಿ ನಗರ ವಲಯ |
| 5 | ಶ್ರೀ ರಂಭಾಪುರಿ ಜಗದ್ಗುರು ಎಸ್. ಎ. ಪ್ರೌಢಶಾಲೆ,ಎಸ್.ಜೆ.ಆರ್.ಡಿ. ತಿರುಮಲಕೊಪ್ಪ, ಹುಬ್ಬಳ್ಳಿ ನಗರ ವಲಯ |
| 6 | ಶ್ರೀಮತಿ ನಿರ್ಮಲಕ್ಕ ಕೆ. ಟಕ್ಕರ್ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ, ಶಾಂತಿ ಕಾಲೋನಿ (ಉತ್ತರ) ಹುಬ್ಬಳ್ಳಿ ನಗರ |
| 7 | ಚಿನ್ಮಯ ವಿದ್ಯಾಲಯ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ, ವಿವೇಕಾನಂದ ಕಾಲೋನಿ ಹುಬ್ಬಳ್ಳಿನಗರ ವಲಯ |
| 8 | ಸೇಂಟ್ ಅಂತೋಣಿ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ, ಶಿರೂರ ಪಾರ್ಕ್ ಹುಬ್ಬಳ್ಳಿ ನಗರ ವಲಯ |
| 9 | ಶ್ರೀ ಸಿದ್ಧಾರೂಢ ಸ್ವಾಮಿ ಅಂಧ ಮಕ್ಕಳ ಸನಿವಾಸ ಪ್ರೌಢಶಾಲೆ, ಹಳೇ ಹುಬ್ಬಳ್ಳಿ ನಗರ ವಲಯ |
| 10 | ಪರಿವರ್ತನ ಗುರುಕುಲ ಪ್ರೌಢಶಾಲೆ, ಗಾಂಧೀನಗರ ಹುಬ್ಬಳ್ಳಿನಗರ ವಲಯ |
| 11 | ಡಿ.ವಿ.ಬಿ. ಇಂಗ್ಲಿಷ್ ಮಾಧ್ಯಮ ಗುರುಕುಲ ಸನಿವಾಸ ಪ್ರೌಢಶಾಲೆ, ಥಾರಿಹಾಳ ರಸ್ತೆ, ಹುಬ್ಬಳ್ಳಿನಗರ ವಲಯ |
| 12 | ಜಿ.ತಿ. ತಾಂತ್ರಿಕ ಪ್ರೌಢಶಾಲೆ, ವಿದ್ಯಾನಗರ ಹುಬ್ಬಳ್ಳಿ ನಗರ ವಲಯ, ಧಾರವಾಡ ಜಿಲ್ಲೆ |
| 13 | ಮೊರಾರ್ಜಿ ದೇಸಾಯಿ ಹಿಂದುಳಿದ ಸನಿವಾಸ ಪ್ರೌಢ ಶಾಲೆ, ಹುಬ್ಬಳ್ಳಿ ಧಾರವಾಡ ಜಿಲ್ಲೆ |
| 14 | ಅಳ್ಣಾವರ ಎಜುಕೇಷನ್ ಸೊಸೈಟಿ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ, ಅಳ್ಣಾವರ, ಧಾರವಾಡ ತಾಲ್ಲೂಕು |
| 15 | ಬಿ.ವೈ.ಬಿ. ಕ್ಯಾಡಡ್ ಪ್ರೌಢಶಾಲೆ, ಜಾವೂರು, ನವಲಗುಂದ ತಾಲ್ಲೂಕು, ಧಾರವಾಡ ಜಿಲ್ಲೆ |
| 16 | ಶ್ರೀ ಬೂದನಗುಡ್ಡ ಬಸವೇಶ್ವರ ಪ್ರೌಢಶಾಲೆ, ದುಮ್ಮವಾಡ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ |
| 17 | ಸರ್ಕಾರಿ ಪ್ರೌಢಶಾಲೆ, ಬರಡ್ವಾಡ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ |
| 18 | ಶ್ರೀ ಗುರುದೇವ ಪ್ರೌಢಶಾಲೆ, ಸಂಶಿ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ |
| 19 | ಶ್ರೀ ಗುರುದೇವ ಪ್ರೌಢಶಾಲೆ, ಸ್ವರ್ಣಗಿರಿ ಥಬಕಡ, ಹೊನ್ನಹಳ್ಳಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ |

ಧಾರವಾಡ ಜಿಲ್ಲೆಯ 2007ರ ಮಾರ್ಚ್ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಒಟ್ಟು 247 ಪ್ರೌಢ ಶಾಲೆಗಳ 75 ಪರೀಕ್ಷಾ ಕೇಂದ್ರಗಳಲ್ಲಿ ಗಂಡು 12698, ಹೆಣ್ಣು 11208 ಒಟ್ಟು 23906 ಮಕ್ಕಳಲ್ಲಿ ಉತ್ತೀರ್ಣ ಆದವರು ಗಂಡು 9035, ಹೆಣ್ಣು 8906, ಒಟ್ಟು 17941ಕ್ಕೆ ಶೇ. ಉತ್ತೀರ್ಣತೆ 70.05 ಪಡೆದಿದೆ. 2008ರ ಮಾರ್ಚ್ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಒಟ್ಟು 261 ಪ್ರೌಢ ಶಾಲೆಗಳ 24050 ಮಕ್ಕಳು 77 ಕೇಂದ್ರಗಳಲ್ಲಿ ಪರೀಕ್ಷೆಯನ್ನು ಬರೆಯಲಿದ್ದಾರೆ ಉತ್ತಮ ಸಾಧನೆಯ ನಿರೀಕ್ಷೆಯನ್ನು ಮಾಡಲಾಗಿದೆ.

**5) ಜಿಲ್ಲೆಯ ಮರೆಯಲಾಗದ ಮಹನೀಯರು**

ವರಕವಿ ದ.ರಾ.ಬೇಂದ್ರೆ, ವಿ.ಕೃ. ಗೋಕಾಕ, ಗಿರೀಶ್ ಕಾರ್ನಾಡ ರಂ.ಶ್ರೀ. ಮುಗಳಿ, ಶಂ.ಭಾ. ಜೋಶಿ, ಚೆನ್ನವೀರ ಕಣವಿ, ಪಾಟೀಲ ಪುಟ್ಟಪ್ಪ, ಬೆಟಗೇರಿ ಕೃಷ್ಣಶರ್ಮ, ಶೇ.ಗೋ. ಕುಲಕರ್ಣಿ, ಮುಂತಾದ ಕವಿಗಳು ಹಾಗೂ ಹಿಂದೂಸ್ತಾನಿ ಸಂಗೀತಗಾರರಾದ ಕುಮಾರ ಗಂಧರ್ವ, ಶ್ರೀಮತಿ ಗಂಗೂಬಾಯಿ ಹಾನಗಲ್, ಮಲ್ಲಿಕಾರ್ಜುನ ಮನ್ಸೂರ್, ಪಂಡಿತ ಭೀಮಸೇನ ಜೋಷಿ, ಬಸವರಾಜ ರಾಜಗುರು ಮತ್ತು ಸಂಗೀತಾ ಕಟ್ಟಿ ಕಲಾದರಾದ ಹಾಲ್‌ಬಾವಿ, ಮಿಣಜಗಿ, ಚಲನಚಿತ್ರ ನಟ ಸುರೇಶ್ ಹೆಬ್ಲೀಕರ್ ಮುಂತಾದವರು ಈ ಜಿಲ್ಲೆಗೆ ಹೆಸರು ತಂದಿದ್ದಾರೆ

**6) ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ :**

ಶಿಕ್ಷಕರ ಸಾಮರ್ಥ್ಯ ಬಲವರ್ಧನೆ, ಶಿಕ್ಷಕರ ನೇಮಕಾತಿಗಳು, ಮಕ್ಕಳನ್ನು ಶಾಲೆಗೆ ಕರೆತರುವುದು, ಶಿಕ್ಷಕರಿಗೆ, ಜನಪ್ರತಿನಿಧಿಗಳಿಗೆ ತರಬೇತಿಗಳು, ಜನಜಾಗೃತಿ ಕಾರ್ಯಕ್ರಮಗಳು, ಸರಕಾರಿ, ಅನುದಾನಿತ ಶಾಲೆಗಳಿಗೆ ಮತ್ತು ಶಿಕ್ಷಕರಿಗೆ ಅನುದಾನ ನೀಡಿ ಉತ್ತೇಜಿಸುವುದು. ಮಕ್ಕಳು ಶಾಲೆಗೆ ನಿಗದಿತವಾಗಿ ಹಾಜರಾಗಲು ಉಚಿತ ಪ್ರೋತ್ಸಾಹದಾಯಕ ಕಾರ್ಯಕ್ರಮಗಳಿವೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆ ಮಾಡಲಾಗುತ್ತಿದೆ. ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಗುರುತಿಸಿ ವೈದ್ಯಕೀಯ ತಪಾಸಣೆ ನಡೆಸಿ ಅವರಿಗೆ ಸಾಮಗ್ರಿಗಳನ್ನು ನೀಡುವುದು, ಗೃಹಾಧಾರಿತ ಶಿಕ್ಷಣ ನೀಡುವುದು ಹೆಣ್ಣುಮಕ್ಕಳ ಸಲುವಾಗಿಯೇ ವಿಶೇಷವಾಗಿ ಎನ್.ಪಿ.ಜಿ.ಎಸ್. ಯೋಜನೆಯನ್ನು ಜಾರಿಗೆ ತಂದು ಮಹಿಳಾ ಸಬಲೀಕರಣ ಮಾಡುವ ಮಹತ್ವವಾದ ಕಾರ್ಯಕ್ರಮವೊಂದಿದೆ. ರಾಜ್ಯ ಹಾಗೂ ರಾಷ್ಟ್ರದ ಮಹಿಳಾ ಸಾಕ್ಷರತಾ ಪ್ರಮಾಣಕ್ಕಿಂತ ಕಡಿಮೆ ಶೇ. ಸಾಕ್ಷರತೆಯನ್ನು ಹೊಂದಿದ ತಾಲ್ಲೂಕುಗಳನ್ನು ಗುರುತಿಸಿ ಅಂತಹ ತಾಲ್ಲೂಕಿನಲ್ಲಿ ಒಂದು ಕೆ.ಜಿ.ಬಿ.ವ್ಹಿ. ಶಾಲೆಯನ್ನು ತೆರೆದಿದ್ದಾರೆ. ಶಾಲೆಯು ಆಕರ್ಷಣೀಯವಾಗಿರಲೆಂದು ಪರಿಸರ ವಾಹಿನಿ ತೋಟ, ಮಕ್ಕಳ ವನ ಸಿ.ಎಫ್.ಇ. ನಲ್ಲಿ ಜಾರು ಬಂಡೆ, ನಿರ್ಮಿಸಲಾಗುತ್ತಿದೆ. ಹೊಸ ಶಾಲೆಗಳ್ನು ಪ್ರಾರಂಭಿಸುವುದು, ಉನ್ನತೀಕರಿಸುವುದು ಅವುಗಳಿಗೆ ಬೇಕಾಗುವ ಶಿಕ್ಷಕರ ನೇಮಕಾತಿ ಮಾಡುವುದು. ಶಾಲೆಗೆ ಅಗತ್ಯ ಇರವು ಎಲ್ಲ ಹಂತದ ಸಿವಿಲ್ ಕಾಮಗಾರಿಗಳನ್ನು ಪೂರೈಸಿದೆ.

ಒಟ್ಟಾರೆ. ಧಾರವಾಡ ಜಿಲ್ಲೆಯು ತನ್ನ ಐತಿಹಾಸಿಕ ಪರಂಪರೆಯಂತೆ ಶೈಕ್ಷಣಿಕ ಹಿರಿಮೆಯನ್ನು ಎಲ್ಲ ಹಂತಗಳಲ್ಲಿ ಪರಿಶೀಲನೆ ಮಾಡಲಾಗಿ ಶೈಕ್ಷಣಿಕವಾಗಿ, ಸಿವಿಲ್ ಕಾಮಗಾರಿಗಳ ಪ್ರಗತಿಯು ಉತ್ತಮ ಸ್ಥಿತಿಯಲ್ಲಿದ್ದು. ಪ್ರಗತಿ ಹಂತದಲ್ಲಿರುವ ಜಿಲ್ಲೆಯಾಗಿದೆ.



**ಮುಧೋಳ :** ಮುಧೋಳ ತಾಲ್ಲೂಕಿನ ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಢವಳೇಶ್ವರ, ಶಾಲೆಯಲ್ಲಿ "ದರ್ಶನ ಪ್ರದರ್ಶನ" ಕಾರ್ಯಕ್ರಮ ಹಮ್ಮಿಕೊಂಡಿದ್ದು, ಮಕ್ಕಳು ತಯಾರಿಸಿದ ಕಲಿಕೋಪಕರಣಗಳು, ಹಾಗೂ ವಸ್ತುಗಳನ್ನು ಶಾಲೆಯ ಎಸ್.ಡಿ.ಎಂ.ಸಿ. ಹಾಗೂ ಗ್ರಾಮಸ್ಥರ ಮುಂದೆ ಶಾಲೆಯ ಮುಂಭಾಗದಲ್ಲಿ ಪ್ರದರ್ಶಿಸಲಾಯಿತು. ಗ್ರಾಮಸ್ಥರು ನೋಡಿ ಸಂತೋಷಪಟ್ಟರು.

ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಮಲ್ಲಮ್ಮನಗರ ಮುಧೋಳ ಶಾಲೆಯಲ್ಲಿಯೂ ಸಹ ಸದರಿ ಕಾರ್ಯಕ್ರಮ ನಡೆಯಿತು. ಸಿ.ಆರ್.ಪಿಯವರಾದ ಬಿ.ಎಸ್. ಕೋರಬೊ, ಹಾಗೂ ಎಸ್.ಡಿ.ಎಂ.ಸಿ. ಅಧ್ಯಕ್ಷರು, ಪೋಷಕರು, ಶಿಕ್ಷಕರು ಮತ್ತು ಮಕ್ಕಳು ವೀಕ್ಷಿಸಿದರು.

**– ಬಿ.ಎಸ್. ಕೋರಬೊ**
ಸಮೂಹ ಸಂಪನ್ಮೂಲ ವ್ಯಕ್ತಿ, ಉರ್ದು ಸಿ.ಆರ್.ಸಿ. ಕೇಂದ್ರ

**ಬಾಗಲಕೋಟೆ :** ಮುಧೋಳ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 31.1.2008ರಂದು ವಿಶೇಷ ಸಮುದಾಯತ್ತ ಶಾಲಾ ಕಾರ್ಯಕ್ರಮ ನಡೆಯಿತು. ಮಾರ್ಗದರ್ಶಕರು, ಎಸ್.ಡಿ.ಎಂ.ಸಿ. ಅಧ್ಯಕ್ಷರು, ಪಾಲಕರು, ಪೋಷಕರು, ಜನಪ್ರತಿನಿಧಿಗಳು, ಪಾಲ್ಗೊಂಡಿದ್ದರು. ಮಕ್ಕಳಿಂದ ಮನರಂಜನಾ ಕಾರ್ಯಕ್ರಮ ಜರುಗಿತು.

**– ರಾಜಶೇಖರ ಗು. ಮುತ್ತಿನಮಠ**
ಮುಖ್ಯ ಗುರುಗಳು ಸ.ಹಿ.ಪ್ರಾ. ಶಾ. ಹೆಬ್ಬಾಳ





**ಹುಬ್ಬಳ್ಳಿ :** ಸರಕಾರಿ ಸಂಯುಕ್ತ ಪ್ರೌಢಶಾಲೆ, ಪೆಂಡಾರಗಲ್ಲಿ ಹುಬ್ಬಳ್ಳಿ ವಲಯದಲ್ಲಿ ವಿಶೇಷ ಅಗತ್ಯತೆಯುಳ್ಳ ಮಕ್ಕಳ, ಪಾಲಕ, ಪೋಷಕರ, ಪ್ರಧಾನ ಗುರುಗಳ ಸಭೆ ಮತ್ತು ಜನಜಾಗೃತಿ ಶಿಬಿರ ನಡೆಯಿತು.

ಈ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಪೆಂಡಾರಗಲ್ಲಿಯ ಕ್ಲಸ್ಟರಿನ ಸಹಾಯಕ ಶಿಕ್ಷಣಾಧಿಕಾರಿಗಳಾದ ಲ.ವಿ.ಎಸ್. ಜಾಕಿಮಠರವರು ಅಲಂಕರಿಸಿಕೊಂಡಿದ್ದರು. ಅವರು ಈ ಸಭೆಯನ್ನು ಉದ್ದೇಶಿಸಿ ಈ ಅಂಗವಿಕಲ ಮಕ್ಕಳ ಬಗ್ಗೆ ಅನುಕಂಪ ವ್ಯಕ್ತಪಡಿಸಿದರೆ ಸಾಲದು. ಉತ್ತಮ ಮಾರ್ಗದರ್ಶನದೊಂದಿಗೆ ಸರಕಾರದಿಂದ ಸಿಗುವ ಎಲ್ಲ ಸೌಲಭ್ಯಗಳನ್ನು ಅವರಿಗೆ ದೊರಕಿಸಲು ನಾವು – ನೀವೆಲ್ಲರೂ ಸೇರಿ ಶ್ರಮಿಸೋಣ ಎಂದು ಹೇಳಿದರು.

ಸಂಯೋಜಕರಾದ ಶ್ರೀ ಜಿ. ಆರ್. ರಂಗರೇಜರವರು ಆಗಮಿಸಿದ್ದರು. ಇವರು ಸಭೆಯನ್ನು ಉದ್ದೇಶಿಸಿ ಇಂತಹ ಮಕ್ಕಳಿಗೆ ನಮ್ಮ ಇಲಾಖೆಯಿಂದ ಸಿಗುವ ಸೌಲಭ್ಯಗಳು ಮತ್ತು ಗೃಹ ಆಧಾರಿತ ಶಿಕ್ಷಣದ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

**– ಎಂ.ಜಿ. ಜಾಡಗೌಡರ,** ಹುಬ್ಬಳ್ಳಿ ಶಹರ



ಬಿಜಾಪುರ : ಮನುಷ್ಯನ ಶಿಸ್ತುಬದ್ಧ ಜೀವನಕ್ಕೆ ಶಿಕ್ಷಣ ಅಗತ್ಯ ಎಂದು ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಸಂಗೀತಾದಿನ್ನಿ ಹೇಳಿದರು. ಅವರು ಬಿಜಾಪುರ ತಾಲ್ಲೂಕಿನ ಆಹೇರಿ ಗ್ರಾಮದಲ್ಲಿ ರಾಷ್ಟ್ರೀಯ ಕ್ರೀಡಾಸಂಘ ಹಾಗೂ ಬಸವೇಶ್ವರ ಕರ್ಮವೀರ ಕಲಾ ಸಾಹಿತ್ಯ ಸಂಸ್ಕೃತಿ ವೇದಿಕೆಯ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ದಿನಾಂಕ 29.1.2008 ರಂದು ಸ್ವಾಮಿ ವಿವೇಕಾನಂದರ 145ನೇ ಜಯಂತಿ ಅಂಗವಾಗಿ ಏರ್ಪಡಿಸಿದ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಮಕ್ಕಳು ಆತ್ಮಸ್ಥೈರ್ಯ, ಹೆಚ್ಚಿಸಿಕೊಳ್ಳಬೇಕು ಗ್ರಾಮೀಣ ಬಡ ಮಕ್ಕಳಿಗೆ ಚಿಕ್ಕಂದಿನಿಂದಲೇ ಉತ್ತಮ ಶಿಕ್ಷಣ ಮತ್ತು ಆರೋಗ್ಯ ನೀಡಬೇಕೆಂಬ ಹೆಬ್ಬಯಕೆಯಿಂದ ಗ್ರಾಮೀಣ ಶೈಕ್ಷಣಿಕ ಅಭಿವೃದ್ಧಿಗೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ರೂಪಿಸಿದೆ. ಅವುಗಳನ್ನು ಸಕಾಲದಲ್ಲಿ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಶೇಕಡಾ 80% ರಷ್ಟು ಫಲಿತಾಂಶ ಮಾಡಿದ ಜಿಲ್ಲೆಯ ಎಲ್ಲಾ ತಾಲ್ಲೂಕಿನ 55 ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಪುರಸ್ಕರಿಸಲಾಯಿತು.

**– ಸಂಗೀತಾ ದಿನ್ನಿ**

ಅಧ್ಯಕ್ಷರು, ರಾಷ್ಟ್ರೀಯ ಕ್ರೀಡಾ ಸಂಘ, ಆಹೇರಿ ತಾ॥ ಬಿಜಾಪುರ ಜಿಲ್ಲೆ

---

# ಪ್ರಕಟಣೆ

## ಪ್ರೊ ಸಿ.ಎನ್.ಆರ್. ರಾವ್ ಶಿಕ್ಷಣ ಪ್ರತಿಷ್ಠಾನ ಬೆಂಗಳೂರು

**'ಉತ್ತಮ ವಿಜ್ಞಾನ ಶಿಕ್ಷಕ ಪ್ರಶಸ್ತಿ''**ಗಾಗಿ ಪ್ರೊ. ಸಿ.ಎನ್.ಆರ್.ರಾವ್ ಪ್ರತಿಷ್ಠಾನ, ಬೆಂಗಳೂರು ಇವರು ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಶಿಕ್ಷಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಪ್ರಶಸ್ತಿಯು ಪ್ರಶಸ್ತಿಪತ್ರ ಮತ್ತು ಗೌರವಧನವನ್ನು ಒಳಗೊಂಡಿರುತ್ತದೆ. ಶಿಕ್ಷಕರ ಹೆಸರುಗಳನ್ನು ಪ್ರಾಂಶುಪಾಲರು ಮುಖ್ಯೋಪಾಧ್ಯಾಯರು/ ಮುಖ್ಯೋಪಾಧ್ಯಾಯಿನಿ/ ಕಾಲೇಜು/ಶಾಲೆ ಇವರ ಮುಖಾಂತರ ಶಿಕ್ಷಕರಿಗೆ ಸಂಬಂಧಪಟ್ಟ ವಿವರಗಳೊಂದಿಗೆ

ಆಡಳಿತಾಧಿಕಾರಿಗಳು,

ಜವಹರಲಾಲ್ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್, ಜಕ್ಕೂರು, ಬೆಂಗಳೂರು–64 ಇವರಿಗೆ ಮಾರ್ಚ್ 31, 2008ರ ಒಳಗೆ ತಲುಪುವಂತೆ ಕಳುಹಿಸುವುದು.

**– ಸಂ.**

## ಕರ್ನಾಟಕ ಸರ್ಕಾರ

ಸಂಖ್ಯೆ : ಇಡಿ 227 ಇಟಿಆರ್ 2007 ಕರ್ನಾಟಕ ಸರ್ಕಾರದ ಸಚಿವಾಲಯ,

ಬಹುಮಹಡಿಗಳ ಕಟ್ಟಡ,
ಬೆಂಗಳೂರು,
ದಿನಾಂಕ : 25.2.2008

## ಸುತ್ತೋಲೆ

**ವಿಷಯ : ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಸಹ ಶಿಕ್ಷಕರು ಮುಖ್ಯೋಪಾಧ್ಯಾಯರು ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆ ಬಗ್ಗೆ**

ಉಲ್ಲೇಖ:
1) ದಿನಾಂಕ 1.9.2007ರ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 1 ಶಾಸನ 2007 (ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007)
2) ದಿ. 15. 10. 2007ರ ಅಧಿನಿಯಮ ಸಂಖ್ಯೆ ಇಡಿ 173 ಇಟಿಆರ್ 2002 (ಕರ್ನಾಟಕ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು, 2007)
3) ದಿ. 31.10.2007ರ ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 173 ಇಟಿಆರ್ 2007

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಸಹ ಶಿಕ್ಷಕರು, ಮುಖ್ಯೋಪಾಧ್ಯಾಯರು ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆಗೆ ಸಂಬಂಧಿಸಿದಂತೆ ಉಲ್ಲೇಖ (1) ಮತ್ತು (2) ಅನುಕ್ರಮವಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007 ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007 ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು, 2007ನ್ನು ಹೊರಡಿಸಿರುವುದು ಸರಿಯಷ್ಟೆ. ಸದರಿ ನಿಯಮಗಳ ಪ್ರಕಾರ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಸಹ ಶಿಕ್ಷಕರು, ಮುಖ್ಯೋಪಾಧ್ಯಾಯರು ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮುಖಾಂತರ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮಾತ್ರ ಮಾಡತಕ್ಕದ್ದು, ಮೇಲ್ಕಂಡ ಅಧಿನಿಯಮ ಮತ್ತು ನಿಯಮಗಳಲ್ಲಿನ ಅಂಶಗಳನ್ನು ಇನ್ನೂ ಹೆಚ್ಚು ಸ್ಪಷ್ಟೀಕರಿಸುವದಕ್ಕೋಸ್ಕರ ಉಲ್ಲೇಖ (3)ರ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದರಿ ಅಧಿನಿಯಮ/ನಿಯಮಗಳಲ್ಲಿನ ಅಂಶಗಳಿಗೆ ಯಾವುದೇ ವಿನಾಯಿತಿ ನೀಡುವ ಬಗ್ಗೆ ಅಥವಾ ವಿಶೇಷ ಪ್ರಕರಣಗಳನ್ನು ಪರಿಗಣಿಸುವ ಬಗ್ಗೆ ನಿಯಮಗಳಲ್ಲಿ ಅವಕಾಶವನ್ನು ಕಲ್ಪಿಸಿರುವುದಿಲ್ಲ. ಹೀಗಾಗಿ ಈ ಅಧಿನಿಯಮ/ನಿಯಮಗಳನ್ನು ಮೀರಿ ವರ್ಗಾವಣೆ ಮಾಡಲು ಸಾಧ್ಯವಿರುವುದಿಲ್ಲ.

2. ಸದರಿ ಕಾಯ್ದೆ/ನಿಯಮಗಳ ವಿನಾಯಿತಿಗೆ ಯಾವುದೇ ರೀತಿಯ ಅವಕಾಶವಿರುವುದಿಲ್ಲ.

ಹಣವನ್ನು ಖರ್ಚುಮಾಡಿ ಬೆಂಗಳೂರಿಗೆ ಬಂದು ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ಮನವಿ ಸಲ್ಲಿಸುತ್ತಿರುವುದು ಕಂಡು ಬಂದಿದೆ. ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ.

3. ಶಾಲಾ ಶಿಕ್ಷಕರುಗಳ ವರ್ಗಾವಣೆ ಬಗ್ಗೆ ಜಾರಿಗೆ ಬಂದಿರುವ ಅಧಿನಿಯಮ/ನಿಯಮಗಳಲ್ಲಿರುವ ಅಂಶಗಳನ್ನು ಸ್ಪಷ್ಟವಾಗಿ ಅರ್ಥವಾಗುವಂತೆ ಶಿಕ್ಷಕರುಗಳಿಗೆ ಸರಿಯಾಗಿ ತಿಳಿಸಿ, ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕಾದುದು ಕ್ಷೇತ್ರ ಹಾಗೂ ಜಿಲ್ಲಾ ವಲಯದಲ್ಲಿನ ಅಧಿಕಾರಿಗಳ ಆದ್ಯ ಕರ್ತವ್ಯ ಆದರೆ, ಮೇಲೆ ಹೇಳಿದಂತೆ ಶಿಕ್ಷಕರುಗಳಿಗೆ ತಪ್ಪು ಮಾರ್ಗದರ್ಶನ ನೀಡಿ, ಅವರನ್ನು ದಾರಿ ತಪ್ಪಿಸುತ್ತಿರುವುದು ಖಂಡನೀಯ ವಿಷಯ. ಆದುದರಿಂದ, ಕ್ಷೇತ್ರ ಹಾಗೂ ಜಿಲ್ಲಾ ವಲಯದಲ್ಲಿನ ಅಧಿಕಾರಿಗಳು ಶಿಕ್ಷಕರುಗಳಿಗೆ ವರ್ಗಾವಣೆಗೆ ಸಂಬಂಧಿಸಿದಂತೆ ಮುಖ್ಯ ಶಿಕ್ಷಕರುಗಳ ಸಭೆಯಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

4. ಈ ರೀತಿಯ ತಪ್ಪು ಮಾರ್ಗದರ್ಶನ ನೀಡಿರುವುದು ಕಂಡುಬಂದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಸಿದೆ.

**(ಬಿ.ಹೆಚ್. ಪಡಸಲಗಿ)**
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಕರ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ : ಇಡಿ 225 ಪಿಬಿಎಸ್ 2007

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ : 16.01.2008

## ಸುತ್ತೋಲೆ

**ವಿಷಯ : ಪ್ರತಿ ಗ್ರಾಮದಲ್ಲಿ "ನಮ್ಮೂರ ಶಿಕ್ಷಣ ಸಮಿತಿ" ರಚಿಸುವ ಬಗ್ಗೆ**

ಮೂಲಭೂತ ಸೌಕರ್ಯ ಹೊಂದುವ ಹಾಗೂ ಗುಣಾತ್ಮಕ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವ ಹಿನ್ನೆಲೆಯಲ್ಲಿ ಸಮಾನ ಗುರಿ ಮತ್ತು ಪರಿಕಲ್ಪನೆಯನ್ನು ಇಟ್ಟುಕೊಂಡು ಕಾರ್ಯನಿರ್ವಹಿಸುತ್ತಿರುವ **ಬಾಲವಿಕಾಸ ಸಮಿತಿ, ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿ ಹಾಗೂ ಗ್ರಾಮ ಸಾಕ್ಷರತಾ ಸಮಿತಿಗಳ** ಮಧ್ಯೆ ಸಂಯೋಜನೆ ಮತ್ತು ಸಮನ್ವಯತೆಯ ಅವಶ್ಯಕತೆಯನ್ನು ಮನಗಂಡು ಸಮಗ್ರ ಶಿಕ್ಷಣಕ್ಕೊಂದು ಸಮನ್ವಯ ಸಮಿತಿಯನ್ನು ಕೆಳಗಿನಂತೆ ರಚಿಸಲು ತೀರ್ಮಾನಿಸಲಾಗಿದೆ. ಈ ಸಮಿತಿಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

ಸಮಿತಿಯ ಹೆಸರು : ಈ ಸಮಿತಿಯ "ನಮ್ಮೂರ ಶಿಕ್ಷಣ ಸಮಿತಿ" ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಶಾಲಾ ಪೂರ್ವ ಶಿಕ್ಷಣ (3–5 ವರ್ಷದ ಮಕ್ಕಳಿಗೆ), ಶಾಲಾ ಶಿಕ್ಷಣ (6–14 ವರ್ಷದ ಮಕ್ಕಳಿಗೆ) ಹಾಗೂ ವಯಸ್ಕರ ಶಿಕ್ಷಣ (15 ವರ್ಷದ ಮೇಲ್ಪಟ್ಟು) ಚಟುವಟಿಕೆಗಳ ಸಂಯೋಜನೆ ಸಮನ್ವಯತೆ ಹಾಗೂ ಒಗ್ಗೂಡಿಸುವ ಉದ್ದೇಶವನ್ನು ಹೊಂದಿರುತ್ತದೆ.

**ಸ್ವರೂಪ / ವ್ಯಾಪ್ತಿ :**

1) ಈ ಸಮಿತಿಯಲ್ಲಿ ಗರಿಷ್ಠ 17 ಮಂದಿ ಸದಸ್ಯರಿರುತ್ತಾರೆ. 2) ಚಟುವಟಿಕೆ ಗ್ರಾಮಕ್ಕೆ / ಜನ ವಸತಿಗೆ ಮಾತ್ರ ಸೀಮಿತ ಈ ಸಮಿತಿಯ ಸದಸ್ಯರುಗಳೆಂದರೆ.

1) ಅ) **ಪದನಿಮಿತ್ತ ಸದಸ್ಯರು:**

2) 1 ರಿಂದ 3 ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಕಾರ್ಯದರ್ಶಿ, 4, 5. ಬಾಲವಿಕಾಸ ಸಮಿತಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು, 6. ಅಂಗನವಾಡಿ ಕಾರ್ಯಕರ್ತೆ, 7. ಆರೋಗ್ಯ ಕಾರ್ಯಕರ್ತೆ, 8. ಮುಂದುವರಿಕೆ ಕಲಿಕಾ ಕೇಂದ್ರದ ಪ್ರೇರಕರು, 9. ಆ ಗ್ರಾಮದ ಗ್ರಾಮ ಪಂಚಾಯಿತಿಯ ಸದಸ್ಯರುಗಳು

3) ಆ) **ನಾಮನಿರ್ದೇಶಿತ ಸದಸ್ಯರು:**

1) ಗ್ರಾಮದಲ್ಲಿನ – ಯುವಕ, ಯುವತಿ ಮಂಡಳಿ ಹಾಗೂ ಎಸ್.ಹೆಚ್.ಜಿ. (Self Help Group) ಯಿಂದ ಒಬ್ಬೊಬ್ಬರು ಪದಾಧಿಕಾರಿ– ಒಟ್ಟು ಮೂರು ಜನ, 2) ಹಳ್ಳಿಯಲ್ಲಿ ವಾಸವಾಗಿರುವ ಒಬ್ಬ ಶಿಕ್ಷಣ ತಜ್ಞ ಅಥವಾ ಹಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎನ್.ಜಿ.ಓ/ಎನ್.ಪಿ.ಓಗಳ ಪೈಕಿ ಒಬ್ಬರು ಪ್ರತಿನಿಧಿ – ಒಬ್ಬರು., 3) ಆ ಗ್ರಾಮದ ಮುಖಂಡರು, ದಾನಿಗಳು, ಶಿಕ್ಷಣ ಪ್ರೇಮಿ ಅಥವಾ ಸಮಾಜ ಕಾರ್ಯಕರ್ತರು (ಒಟ್ಟು ಇಬ್ಬರು ಸದಸ್ಯರು)

**ಅಧ್ಯಕ್ಷರು :** ಆ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿದ್ದರೆ ಅವರೇ ಅಧ್ಯಕ್ಷರಾಗಿರುತ್ತಾರೆ. ಅಧ್ಯಕ್ಷರಿಲ್ಲದೇ ಉಪಾಧ್ಯಕ್ಷರಿದ್ದರೆ ಅವರೇ ಅಧ್ಯಕ್ಷರಾಗುತ್ತಾರೆ. ಇವರಿಬ್ಬರೂ ಇಲ್ಲದಿದ್ದರೆ ಸದಸ್ಯರ ಪೈಕಿ ಒಬ್ಬರನ್ನು (ಎಲ್ಲಾ ಸದಸ್ಯರುಗಳ ಒಪ್ಪಿಗೆ ಪಡೆದು) ಅಧ್ಯಕ್ಷರನ್ನಾಗಿ ಮಾಡಬಹುದು. ಇಲ್ಲವೆ ಸದಸ್ಯರು ಒಮ್ಮತದಿಂದ ಆಯ್ಕೆಮಾಡಿದ ಒಬ್ಬ ಗ್ರಾಮ ಪಂಚಾಯಿತಿ ಸದಸ್ಯರು ಅಧ್ಯಕ್ಷರಾಗಿರುತ್ತಾರೆ.

**ಸದಸ್ಯ ಕಾರ್ಯದರ್ಶಿ :** ಗ್ರಾಮದ ಪ್ರೌಢಶಾಲೆಯ ಅದಿಲ್ಲದಿದ್ದಲ್ಲಿ ಹಿರಿಯ ಪ್ರಾಥಮಿಕ ಶಾಲೆಯ, ಅದಿಲ್ಲದಿದ್ದಲ್ಲಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು.

ಅವಧಿ : ರಚನೆಯ ದಿನಾಂಕದಿಂದ ಮೂರು ವರ್ಷ

ರಚನೆ ಮಾಡುವ ವಿಧಾನ : ಗ್ರಾಮದ ಪ್ರೌಢ ಶಾಲೆಯ ಅದಿಲ್ಲದಿದ್ದಲ್ಲಿ ಹಿರಿಯ ಪ್ರಾಥಮಿಕ ಶಾಲೆಯ ಅದಿಲ್ಲದಿದ್ದಲ್ಲಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು, ಉದ್ದೇಶಿತ ಸಮಿತಿಯ ಪದನಿಮಿತ್ತ ಸದಸ್ಯರ ಸಭೆಯನ್ನು 7 ದಿನಗಳ ನೋಟೀಸು ನೀಡಿ ಕರೆಯುವುದು. ಸದರಿ ಸಭೆಯಲ್ಲಿ

1) ಸಮಿತಿಯನ್ನು ರಚಿಸಲು, 2) ಗ್ರಾಮ ಪಂಚಾಯಿತಿಯ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷರನ್ನು ಗುರುತಿಸಲು, 3) ನಾಮನಿರ್ದೇಶಿತ ಸದಸ್ಯರನ್ನು ಆರಿಸಲು ತೀರ್ಮಾನ ಮಾಡುವುದು.

**ಸಭೆ ನಡೆಸುವ ಬಗ್ಗೆ :** ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಕಲಿಯುವುದು. ಅಗತ್ಯವಿದ್ದಾಗ ವಿಶೇಷ ಸಭೆ ಕರೆಯಬಹುದು.

**ಸಭೆ ನಡೆಸಲು ಇರಬೇಕಾದ ಸದಸ್ಯರ ಸಂಖ್ಯೆ (ಕೋರಂ)**

ಒಟ್ಟು ಸದಸ್ಯರ 1/2 ಬಾಗ

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು :**

1) ಬಾಲ ವಿಕಾಸ ಸಮಿತಿಯ ಉಸ್ತುವಾರಿ ವ್ಯಾಪ್ತಿಗೆ ಬರುವ ಶಾಲಾ ಪೂರ್ವ ಶಿಕ್ಷಣಕ್ಕೆ ಸಂಬಂಧಪಟ್ಟ 3–5 ವರ್ಷದ ಮಕ್ಕಳ

ಸಮೀಕ್ಷೆ ಆಗಿ ಎಲ್ಲರೂ ದಾಖಲಾತಿ/ ಹಾಜರಾಗುತ್ತಿದ್ದಾರೆಯೇ ? ಮತ್ತು ಈ ಮಕ್ಕಳಿಗೆ ಸರ್ಕಾರ ಒದಗಿಸಿದ ಸೌಲಭ್ಯಗಳು ಹಾಗೂ ನಿಗದಿಪಡಿಸಿದ ಚಟುವಟಿಕೆಗಳು ನಿರೀಕ್ಷಿತ ಮಟ್ಟದಲ್ಲಿ ಅನುಷ್ಠಾನಗೊಳ್ಳುತ್ತಿವೆಯೇ ?

2) ಅಂಗನವಾಡಿ ಕೇಂದ್ರ ನಡೆಸಲು ಸ್ವಂತ ಕಟ್ಟಡವಿದೆಯೇ ? ಇದ್ದರೆ, ಮೂಲಭೂತ ಸೌಕರ್ಯಗಳು ಲಭ್ಯವಿದೆಯೇ ?

3) ಗ್ರಾಮ ಪಂಚಾಯಿತಿಯು ಅಂಗನವಾಡಿ ಕೇಂದ್ರಕ್ಕೆ ನೀಡಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿದೆಯೇ ?

4) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ವ್ಯಾಪ್ತಿಗೆ (ಎಸ್.ಡಿ.ಎಂ.ಸಿ) ಬರುವ ಶಾಲಾ ಶಿಕ್ಷಣದ ಸೌಲಭ್ಯವನ್ನು ಪಡೆಯಬೇಕಾದ 6–14 ವರ್ಷದ ಮಕ್ಕಳ ಗಣತಿ ಆಗಿದೆಯೇ ? ಗಣತಿ ಅಂಕಿ ಅಂಶದಂತೆ ಎಲ್ಲಾ ಮಕ್ಕಳು ದಾಖಲಾಗಿದ್ದಾರೆಯೇ ? ಹಾಗೂ ಹಾಜರಾಗಿ ಉದ್ದೇಶಿತ ಶೈಕ್ಷಣಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ಗುಣಾತ್ಮಕವಾಗಿ ಪ್ರಗತಿ ಹೊಂದುತ್ತಿದ್ದಾರೆಯೇ ?

5) 6–14 ವರ್ಷದ ಮಕ್ಕಳಿಗೆ ಸರ್ಕಾರದಿಂದ ಮತ್ತು ಗ್ರಾಮ ಪಂಚಾಯಿತಿಯಿಂದ ಸಿಗಬೇಕಾದ ಎಲ್ಲಾ ಸೌಲಭ್ಯಗಳು ಸಕಾಲದಲ್ಲಿ ಸಿಗುತ್ತಿವೆಯೇ? ಮತ್ತು ಸದ್ಬಳಕೆಯಾಗುತ್ತಿದೆಯೇ ?

6) ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ 15 ವರ್ಷದ ಮೇಲ್ಪಟ್ಟ ವಯಸ್ಸಿನ ಅನಕ್ಷರಸ್ಥರಿಗೆ ಮುಂದುವರಿಕೆ ಶಿಕ್ಷಣ ಕೇಂದ್ರದ ಮೂಲಕ ಸಿಗಬೇಕಾದ ಕಲಿಕಾ ಬೋಧನೆ ಸೌಲಭ್ಯಗಳು ಸೇರಿದಂತೆ ಎಲ್ಲಾ ಸೌಕರ್ಯಗಳಾದ ಕಟ್ಟಡ, ವಿದ್ಯುಚ್ಛಕ್ತಿ, ಕುಡಿಯುವ ನೀರು ಮುಂತಾದವು ಗ್ರಾಮ ಪಂಚಾಯಿತಿಯಿಂದ ಒದಗಿಸಲಾಗಿದೆಯೇ ?

7) ಅಂಗನವಾಡಿ ಹಾಗೂ ಶಾಲೆಯಲ್ಲಿ ಮಕ್ಕಳ ಆರೋಗ್ಯ, ತಪಾಸಣೆ ಪ್ರತಿ ವರ್ಷ ನಡೆದಿದೆಯೇ ?

ಜವಾಬ್ದಾರಿ ಮತ್ತು ಕರ್ತವ್ಯಗಳು :

1) ಮೂರು ಇಲಾಖೆಗಳ ಶಾಲಾ ಪೂರ್ವ, ಶಾಲಾ ಮತ್ತು ಸಾಕ್ಷರತಾ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಉಸ್ತುವಾರಿ

2) ಸಮಿತಿಯ ಸಭೆಯು ಕಾಲಕಾಲಕ್ಕೆ ಸರಿಯಾಗಿ ನಡೆಸುವಂತೆ ಸದಸ್ಯರೆಲ್ಲರೂ ಸಹಕರಿಸುವುದು.

3) ಸಮಿತಿಯು ಸಭೆಗಳಲ್ಲಿ ತೆಗೆದುಕೊಂಡ ತೀರ್ಮಾನಗಳ ಮೇಲಿನ ಕ್ರಮಗಳನ್ನು ಅನುಸರಣೆ ಮಾಡುವುದು.

4) ಗ್ರಾಮ ಪಂಚಾಯಿತಿಯ ಸಭೆಯಲ್ಲಿ ಶೈಕ್ಷಣಿಕ ವಿಚಾರಗಳನ್ನು ಕಾರ್ಯಸೂಚಿಯಲ್ಲಿ ಸೇರಿಸುವಂತೆ ಒತ್ತಡ ತರುವುದು.

5) ಗ್ರಾಮ ಪಂಚಾಯಿತಿಯ ಸ್ಥಾಯಿ ಉಪ ಸಮಿತಿಗಳಾದ ನಾಗರೀಕ ಸೌಕರ್ಯ ಸಮಿತಿಯ ಜೊತೆ ನಿರಂತರ ಸಂಪರ್ಕ ಇಟ್ಟುಕೊಂಡು ಸಹಾಯ ಪಡೆಯುವುದು.

6) ಸುತ್ತೋಲೆ ಸಂಖ್ಯೆ : ಸಿ11/ಡಿಎಂಇ/ಕೆಎಸ್‌ಎಲ್‌ಎಂಎ/ಸಿಆರ್–28/2004–05, ದಿನಾಂಕ 24.12.2004 ರಂತೆ ವಯಸ್ಕರ ಶಿಕ್ಷಣಕ್ಕೆ ಗ್ರಾಮ ಪಂಚಾಯಿತಿಗಳಲ್ಲಿ ಮೀಸಲು ಇಟ್ಟಿರುವ ಅನುದಾನ ರೂ. 25,000/– ಸಕಾಲದಲ್ಲಿ ಮುಂದುವರಿಕೆ ಶಿಕ್ಷಣ ಕೇಂದ್ರಗಳಿಗೆ ಬಿಡುಗಡೆಯಾಗುವಂತೆ ಮಾಡಿ ಕೇಂದ್ರಗಳು ಸಕ್ರಿಯವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವುದು.

7) ಸರ್ಕಾರದ/ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್/ಗ್ರಾಮ ಪಂಚಾಯಿತಿಗಳಿಂದ ವಿವಿಧ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯಲು ಆಯ್ಕೆಯಾದ ಫಲಾನುಭವಿಗಳು ಅನಕ್ಷರಸ್ಥರಾಗಿದ್ದರೆ ಅವರುಗಳನ್ನು ಪ್ರೇರೇಪಿಸಿ ಹತ್ತಿರದ ಮುಂದುವರಿಕೆ ಶಿಕ್ಷಣ ಕೇಂದ್ರ/ಶೀಘ್ರ ಕಲಿಕಾ ಶಿಬಿರಗಳಿಗೆ ಹಾಜರಾಗಿ ಅಕ್ಷರಸ್ಥರಾದ ಮೇಲೆ ಮಾತ್ರ ಸರ್ಕಾರಿ ಸೌಲಭ್ಯಗಳನ್ನು ಪಡೆಯುವಂತೆ ಪ್ರೇರೇಪಿಸುವುದು.

8) ಬಾಲ ವಿಕಾಸ ಯೋಜನೆಯ ಚಟುವಟಿಕೆಗಳನ್ನು ಆರೋಗ್ಯ ಇಲಾಖೆಯ "ಆಶಾ" ಯೋಜನೆಯೊಂದಿಗೆ ಒಗ್ಗೂಡಿಸುವುದು.

9) ಸದಸ್ಯರು ಸಭೆಗೆ ತಪ್ಪದೇ ಹಾಜರಾಗಿ ಚರ್ಚೆಯಲ್ಲಿ ಪಾಲ್ಗೊಂಡು ಸಲಹೆ ಸೂಚನೆಗಳನ್ನು ಕೊಟ್ಟು ಉತ್ತಮ ತೀರ್ಮಾನಗಳನ್ನು ಕೈಗೊಂಡು ಅನುಷ್ಠಾನಗೊಳಿಸುವುದು.

10) ಶೈಕ್ಷಣಿಕ ಚಟುವಟಿಕೆಗಳಿಗೆ ಬೇಕಾದ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು.

11) ಗ್ರಾಮದಲ್ಲಿರುವ ಗ್ರಾಮೀಣ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವುದರ ಮೂಲಕ ಊರಿನ ಶಾಲೆಯನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡುವುದು.

12) ಗ್ರಾಮದಲ್ಲಿರುವ ಎಲ್ಲಾ ಸರ್ಕಾರಿ ಸವಲತ್ತುಗಳನ್ನು ಪಾಲನೆ ಪೋಷಣೆ ಮಾಡಿ "ನಮ್ಮೂರು" ಎಂಬ ಅಭಿಮಾನ ಮೂಡಿಸಬೇಕು.

ಸರ್ಕಾರದ ಕಾರ್ಯದರ್ಶಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ಕಲ್ಯಾಣ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು

ಸರ್ಕಾರದ ಕಾರ್ಯದರ್ಶಿಗಳು
(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ),
ಶಿಕ್ಷಣ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು

**ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ,**
**ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು–560 001**

**ಸಂಖ್ಯೆ : ಸಶಿಅ/ಒಒಎಸ್‌ಸಿ/ಚಿ.ಅಂ/ಸುತ್ತೋಲೆ/2007–08** **ದಿನಾಂಕ : 26–02–2008**

**ಸುತ್ತೋಲೆ**

**ವಿಷಯ : 2008–09ನೇ ಸಾಲಿನ ಚಿಣ್ಣರ ಅಂಗಳ ಕಾರ್ಯಕ್ರಮವನ್ನು ನಡೆಸುವ ಬಗ್ಗೆ**

ಉಲ್ಲೇಖ : 1. ಕಾರ್ಯಕಾರಿ ಸಮಿತಿ ಸಭೆ ನಡವಳಿ ಐಟಂ 7ರ ನಿರ್ಣಯ ದಿ : 18.01.08 ರಂತೆ

**ದಿನಾಂಕ 18.01.2008ರಂದು ನಡೆದ ಇ.ಸಿ. ಸಭೆಯಲ್ಲಿ ಸೂಚಿಸಿದಂತೆ ಈ ಬಾರಿಯ ಬೇಸಿಗೆಯ ಚಿಣ್ಣರ ಅಂಗಳ ಕೇವಲ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಮಾತ್ರವಲ್ಲದೆ ನಿಧಾನ ಕಲಿಕೆಯವರನ್ನೂ ಒಳಗೊಂಡಿದೆ. ಕ್ಲಸ್ಟರಿಗೆ ಒಂದು ಇಂತಹ ವಸತಿ ಸಹಿತ ಚಿಣ್ಣರ ಅಂಗಳ ಕೇಂದ್ರವನ್ನು ತೆರೆಯಬೇಕಾಗಿದೆ. ವಸತಿಯುತ ಕೇಂದ್ರಗಳಲ್ಲಿ ಚೈತ್ರದ ಚಿಗುರು/ಬೇಸಿಗೆಯ ಶಿಬಿರಗಳಲ್ಲಿ ನಡೆಯುವ ಚಟುವಟಿಕೆಗಳನ್ನು ಅಳವಡಿಸಬೇಕಾಗಿದೆ. ಈ ಹಿನ್ನೆಲೆ ಆಧರಿಸಿ ಚಿಣ್ಣರ ಅಂಗಳ ಅಭ್ಯಾಸ ಪುಸ್ತಕ, ಚಿಣ್ಣರ ಅಂಗಳ ಬೋಧಕರ ಕೈಪಿಡಿಯನ್ನು ಪರಿಷ್ಕರಿಸಲಾಗಿದೆ.**

ಚಿಣ್ಣರ ಅಂಗಳ ಕೇಂದ್ರಗಳನ್ನು ಪ್ರಾರಂಭಿಸಲು ಪೂರ್ವ ಸಿದ್ಧತೆಗಾಗಿ ಕೆಳಗಿನ ಸೂಚನೆಗಳನ್ನು ನೀಡಿದೆ. ಚಿಣ್ಣರ ಅಂಗಳ ಕಾರ್ಯಕ್ರಮಗಳನ್ನು 16.04.2008 ರಿಂದ 15.06.2008 ರವರೆಗೆ 60 ದಿನಗಳ ಕಾಲ ನಿರಂತರವಾಗಿ ನಡೆಸಬೇಕು. ಅನಿವಾರ್ಯ ಕಾರಣಗಳಿಂದ ಚಿಣ್ಣರ ಅಂಗಳ ತರಗತಿಗಳು ನಿಗದಿತ ದಿನಾಂಕಗಳಂದು ಪ್ರಾರಂಭವಾಗದಿದ್ದಲ್ಲಿ ಆ ಮಟ್ಟಿಗೆ ಚಿಣ್ಣರ ಅಂಗಳ ಅವಧಿಯ ಅಂತ್ಯವು ಮುಂದೂಡಲ್ಪಡುತ್ತದೆ.

2008–09ನೇ ಸಾಲಿನ ಚಿಣ್ಣರ ಅಂಗಳವು ವಸತಿಯುತ ಮತ್ತು ವಸತಿರಹಿತವಾಗಿರುತ್ತದೆ. 2008ರ ಮಕ್ಕಳ ಗಣತಿಯ ಪಟ್ಟಿಯಂತೆ ಶಾಲೆಯಿಂದ ಹೊರಗುಳಿದ ಮಕ್ಕಳು ಮತ್ತು ಶಾಲೆಗೆ ಹೋಗುತ್ತಿದ್ದು ಕಲಿಕೆಯಲ್ಲಿ ಹಿಂದುಳಿದ ನಿಧಾನ ಕಲಿಕೆ ಮಕ್ಕಳನ್ನು ಈ ಸಾಲಿನ ಬೇಸಿಗೆ ಚಿಣ್ಣರ ಅಂಗಳದಲ್ಲಿ ಸೇರಿಸಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ಪ್ರತಿ ಕ್ಲಸ್ಟರ್‌ಗೆ ಕನಿಷ್ಠ ಒಂದು ಚಿಣ್ಣರ ಅಂಗಳ ಕೇಂದ್ರವನ್ನು (ವಸತಿ ಸಹಿತ/ರಹಿತ) ಕಡ್ಡಾಯವಾಗಿ ತೆರೆಯುವುದು.ಕನಿಷ್ಠ 25 ಮಕ್ಕಳು ಕ್ಲಸ್ಟರ್ ಕೇಂದ್ರದ ಚಿಣ್ಣರ ಅಂಗಳದಲ್ಲಿ ಇರುವಂತೆ ವ್ಯವಸ್ಥೆ ಮಾಡುವುದು. ಈ ಮಕ್ಕಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳು ಮತ್ತು ನಿಧಾನ ಕಲಿಕೆಯವರು ಇರುತ್ತಾರೆ. ಅಥವಾ ನಿಧಾನ ಕಲಿಕೆಯವರಿಗಾಗಿಯೇ ಕ್ಲಸ್ಟರಿಗೆ ಒಂದು ವಸತಿಯುತ ಕೇಂದ್ರವನ್ನು ನಡೆಸಬಹುದು.

ಈ ಸಾಲಿನ ಚಿಣ್ಣರ ಅಂಗಳ ಸಾಹಿತ್ಯ ಪರಿಷ್ಕರಿಸಲಾಗಿದ್ದು ಪರಿಷ್ಕೃತ ಸಾಹಿತ್ಯದಲ್ಲಿ ಚೈತ್ರದ ಚಿಗುರು ಬೇಸಿಗೆಯ ಶಿಬಿರಗಳಲ್ಲಿ ನಡೆಯುವ ಚಟುವಟಿಕೆಗಳನ್ನು ಕಲಿಕಾಂಶಗಳ ಜೊತೆ ಅಳವಡಿಸಲಾಗಿದೆ. ವಸತಿಯುತ ಕೇಂದ್ರಗಳಲ್ಲಿ ಈ ಸಾಹಿತ್ಯದಲ್ಲಿರುವಂತೆ ಪೂರ್ಣ ಪ್ರಮಾಣದ ಅನುಷ್ಠಾನ ಆಗಬೇಕೆಂದು ಬಯಸಿದೆ.

ವಸತಿ ರಹಿತ ಕೇಂದ್ರಗಳಲ್ಲಿ ಕಲಿಕಾಂಶಗಳ ಕಡೆ ಹೆಚ್ಚು ಗಮನ ನೀಡಬೇಕಾಗುತ್ತದೆ. ಸಹಪಠ್ಯ ಚಟುವಟಿಕೆಗಳನ್ನು ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ನಿರ್ಧರಿಸಿ ಅನುಷ್ಠಾನಗೊಳಿಸುವುದು.

**ಕೇಂದ್ರದ ಆಯ್ಕೆ :**

1. ಶಾಲೆಯಿಂದ ಹೊರಗುಳಿದ ಕನಿಷ್ಠ 10 ಮಕ್ಕಳು ಇರುವ ಕಡೆ ಚಿಣ್ಣರ ಅಂಗಳ ಕೇಂದ್ರಗಳನ್ನು ಪ್ರಾರಂಭಿಸುವುದು. ಈ ಕೇಂದ್ರಗಳಲ್ಲಿ ಓಓಎಸ್‌ಸಿಗಳ ಜೊತೆಗೆ ಕಲಿಕೆಯಲ್ಲಿ ತೀರಾ ಹಿಂದುಳಿದ ಮಕ್ಕಳನ್ನು ಸೇರಿಸಿಕೊಂಡು ಗರಿಷ್ಠ 25 ಮಕ್ಕಳಿಗೆ 1 ಕೇಂದ್ರ ತೆರೆಯುವುದು.
2. ಚಿಣ್ಣರ ಅಂಗಳ ಕೇಂದ್ರಗಳನ್ನು ಸಿ.ಆರ್.ಸಿ. ಹಂತದಲ್ಲಿ ಕಡ್ಡಾಯವಾಗಿಯೂ ಮತ್ತು ಅಗತ್ಯವಿರುವ ಇತರ ಕಡೆಗಳಲ್ಲಿಯೂ ತೆರೆಯುವುದು.
3. ವಸತಿಯುತ ಕೇಂದ್ರಗಳಿಗೆ ಬೇರೆ ಕಡೆಯಿಂದ ಮಕ್ಕಳನ್ನು ತರಬಹುದು.
4. ವಸತಿಯುತ ಚಿಣ್ಣರ ಅಂಗಳ ಕೇಂದ್ರಗಳನ್ನು ಸಾಧ್ಯವಾದಷ್ಟು ವಿದ್ಯಾರ್ಥಿನಿಲಯಗಳಲ್ಲಿ ನಡೆಸುವುದು ಅಥವಾ ಮೂಲಭೂತ ಸೌಕರ್ಯ ಇರುವ ಇತರ ಕಡೆಗಳಲ್ಲಿಯೂ ತೆರೆಯಬಹುದು.
5. ವಸತಿಯುತ ಕೇಂದ್ರದಲ್ಲಿ 25 ಮಕ್ಕಳಿಗಿಂತ ಹೆಚ್ಚು ಮಕ್ಕಳು ಇರಬಾರದು. ಮಕ್ಕಳ ಸಂಖ್ಯೆ 30 ಮೀರಿದರೆ ಎರಡು ಕೇಂದ್ರಗಳನ್ನು ತೆರೆಯಬಹುದು. ವಸತಿರಹಿತ ಕೇಂದ್ರಗಳಲ್ಲಿ ಕನಿಷ್ಠ ಮಿತಿ 17, ಗರಿಷ್ಠ 22, 22 ಮೀರಿದರೆ ಬೇರೆ ಕೇಂದ್ರ ತೆರೆಯಿರಿ.
6. ಶಾಲೆಯಿಂದ ಹೊರಗೆ ಉಳಿದ ಮಕ್ಕಳು ಎಲ್ಲಿ ಸಾಂದ್ರವಾಗಿ ಇರುವರೋ ಅಂತಹ ಕಡೆ ಕೇಂದ್ರಗಳನ್ನು ತೆರೆಯಬೇಕು.

**CAEO ಮತ್ತು CRP ಯವರ ಜವಾಬ್ದಾರಿ**

1. ಕೇಂದ್ರಗಳ ಆಯ್ಕೆ, ಪ್ರಾರಂಭ ಮಾರ್ಗದರ್ಶನ, ಸಕಾಲಿಕ ವರದಿ ಸಂಗ್ರಹ, ಕ್ರೋಢೀಕರಣ ಮತ್ತು ಬ್ಲಾಕ್ ಹಂತಕ್ಕೆ ನಿಯತಕಾಲಿಕ ವರದಿ ಸಲ್ಲಿಸಲು ಕ್ಲಸ್ಟರ್ ಮಟ್ಟದ ಸಹಾಯಕ ಶಿಕ್ಷಣ ಅಧಿಕಾರಿಗಳು ಹಾಗೂ ಸಿ.ಆರ್.ಪಿ.ಗಳು ಜವಾಬ್ದಾರರಾಗಿರುತ್ತಾರೆ.
2. ಸಿ.ಆರ್.ಸಿ. ಕೇಂದ್ರ ಸ್ಥಾನದಲ್ಲಿ ಕೇಂದ್ರವನ್ನು ತಮ್ಮ ನೇರ ಮಾರ್ಗದರ್ಶನದಲ್ಲಿಯೂ – ಉಳಿದ ಕಡೆ ನಡೆಯುವ ಕೇಂದ್ರಗಳನ್ನು ಉಸ್ತುವಾರಿ ಮಾಡಿ ನಡೆಸಲು ಜವಾಬ್ದಾರರಾಗಿರುತ್ತಾರೆ.
3. ಸಂಬಂಧಿಸಿದ ಶಾಲೆಯ ಮುಖ್ಯಸ್ಥರು ಕೇಂದ್ರಕ್ಕೆ ಬೇಕಾಗುವ ತಮ್ಮಲ್ಲಿರುವ ಎಲ್ಲಾ ಸೌಲಭ್ಯಗಳನ್ನು ನೀಡಲು ಜವಾಬ್ದಾರರಾಗಿರುತ್ತಾರೆ ಮತ್ತು ಆಗಾಗ್ಗೆ ಸಂದರ್ಶನ ಕೂಡ ಮಾಡುತ್ತಾರೆ.

**ಶಿಕ್ಷಕರ/ಸ್ವಯಂ ಸೇವಕರ ನೇಮಕ :**

1. ಚಿಣ್ಣರ ಅಂಗಳ ಕೇಂದ್ರಗಳಿಗೆ ಉತ್ತಮ ಅನುಭವವುಳ್ಳ ಆಸಕ್ತ ಶಿಕ್ಷಕರನ್ನು ಮಾತ್ರವೇ ನಿಯೋಜಿಸಿಕೊಳ್ಳಬಹುದು. ಅಂತಹ ಕಾರ್ಯ ನಿರ್ವಹಿಸುವ ಶಿಕ್ಷಕರಿಗೆ ನಿಯಮಾನುಸಾರ ಗಳಿಕೆ ರಜೆ ಸೌಲಭ್ಯ ನೀಡುವುದು. ಶಿಕ್ಷಕರ ಭಾಗವಹಿಸುವಿಕೆ ಐಚ್ಛಿಕ. ಆದರೆ ಮುಖ್ಯಶಿಕ್ಷಕರು ಕೇಂದ್ರ ನಡೆಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ನಿವೃತ್ತ ಪ್ರಾಥಮಿಕ ಶಿಕ್ಷಕರನ್ನು ಸ್ವಯಂ ಸೇವಕರನ್ನಾಗಿ ತೆಗೆದುಕೊಳ್ಳಬಹುದು.

2. ಸ್ವಯಂ ಸೇವಕರು T.C.H/DEd/B.Ed., ವಿದ್ಯಾರ್ಹತೆ ಹೊಂದಿದವರಾಗಿರಬೇಕು. (ಕಡ್ಡಾಯ)

3. ಸ್ವಯಂ ಸೇವಕರನ್ನು ಸಂಘಸಂಸ್ಥೆಗಳ ಮೂಲಕ (ಎನ್.ಜಿ.ಓ) ಈ ಹಿಂದೆ ನೀಡಿರುವ ಸೂಚನೆಗಳಂತೆ ನೇಮಿಸಿಕೊಳ್ಳಬೇಕು.

4. ಒಂದು ಕೇಂದ್ರದಲ್ಲಿ ಒಬ್ಬರು ಶಿಕ್ಷಕರು ಮತ್ತು ಒಬ್ಬ ಸ್ವಯಂ ಸೇವಕರನ್ನು ನೇಮಿಸಿಕೊಳ್ಳಬೇಕು. ಶಿಕ್ಷಕರು ಇಲ್ಲದಿದ್ದರೆ ಸ್ವ–ಯಂ ಸೇವಕರೇ ಸಂಪೂರ್ಣವಾಗಿ ಬೋಧನೆಯನ್ನು ಮಾಡುತ್ತಾರೆ. ಒಬ್ಬ ಅಡುಗೆ ಸಹಾಯಕರನ್ನು ವಸತಿಯುತ ಕೇಂದ್ರಗಳಿಗೆ ಮಾತ್ರ ನೇಮಿಸಿಕೊಳ್ಳಬಹುದು.

**ತರಬೇತಿ :**

1. 6 ಜನರ ಜಿಲ್ಲಾ ತಂಡಕ್ಕೆ (ಡಯಟ್ ನೋಡಲ್ ಅಧಿಕಾರಿ; ಭಾಷೆ, ಗಣಿತ, ಇಂಗ್ಲಿಷ್, ಪರಿಸರ ಅಧ್ಯಯನ, ಸಹ ಪಠ್ಯ ಚಟುವಟಿಕೆಗೆ ಒಟ್ಟು 6 ಮಂದಿ) ಕೇಂದ್ರ ಕಛೇರಿ ತರಬೇತಿಯನ್ನು ಆಯೋಜಿಸುತ್ತದೆ. ದಿ: 16.03.2008ರೊಳಗೆ ಅರ್ಹರ ಪಟ್ಟಿ ಕಳುಹಿಸಿ.

2. ಇದೇ ರೀತಿ ಬ್ಲಾಕ್ ತಂಡಕ್ಕೆ ದಿ: 08.04.2008ರೊಳಗೆ ಡಯಟ್ ಸಂಸ್ಥೆ ತರಬೇತಿಯನ್ನು ಆಯೋಜಿಸುವುದು.

3. ಆಯ್ಕೆಯಾದ ಶಿಕ್ಷಕರಿಗೆ ಮತ್ತು ಸ್ವಯಂಸೇವಕರಿಗೆ ಡಯಟ್‌ನ ಸಹಯೋಗದಲ್ಲಿ 5 ದಿನಗಳ ಸನಿವಾಸ ತರಬೇತಿಯನ್ನು ಚಿಣ್ಣರ ಅಂಗಳ ಪ್ರಾರಂಭವಾಗುವ ಮುಂಚೆ ಬ್ಲಾಕ್ ತಂಡವು ನಡೆಸಬೇಕು.

4. ಒಂದೇ ಬ್ಲಾಕ್‌ನಲ್ಲಿ ಕನಿಷ್ಠ 25 ಜನ ಶಿಬಿರಾರ್ಥಿಗಳು ಲಭ್ಯವಿಲ್ಲದಿದ್ದರೆ ಹತ್ತಿರದ ಬ್ಲಾಕ್‌ಗಳ ಜೊತೆ ಸಂಯೋಜಿಸಿ ತರಬೇತಿ ನೀಡಬೇಕು.

5. ತರಬೇತಿಯ ಪೂರ್ಣ ಜವಾಬ್ದಾರಿ ಆಯಾ ಜಿಲ್ಲೆಯ ಡಯಟ್‌ಗಳದ್ದಾಗಿರುತ್ತದೆ.

6. ಘಟಕ ವೆಚ್ಚ ಒಬ್ಬರಿಗೆ 1 ದಿನಕ್ಕೆ ರೂ. 100 ರಂತೆ ಎಸ್.ಎಸ್.ಎ. ಆಡಳಿತಾತ್ಮಕ ವೆಚ್ಚದಿಂದ ಭರಿಸಲು ಆದೇಶಿಸಿದೆ. ಈ ಹಣದಿಂದ ಶಿಬಿರಾರ್ಥಿಯ, ಆರ್.ಪಿ.ಗಳ ಊಟ; ಪ್ರಯಾಣ ವೆಚ್ಚ; ಸಾದಿಲ್ವಾರು ವೆಚ್ಚವನ್ನು ಭರಿಸಬಹುದು. ಹಣಕಾಸಿನ ಹಂಚಿಕೆಯನ್ನು ತಮ್ಮ ಹಂತದಲ್ಲಿ ಮಾಡಿಕೊಳ್ಳಬಹುದು.

**ಹಣಕಾಸು :**

1. ಸಂಬಂಧಿಸಿದ ಡಿಡಿಪಿಐರವರು ಈ ಕುರಿತಂತೆ ಕ್ಲುಪ್ತ ಅವಧಿಯಲ್ಲಿ ಡಯಟ್ ಸಂಸ್ಥೆಗೆ ಹಣಬಿಡುಗಡೆಗೆ ಕ್ರಮ ತೆಗೆದುಕೊಳ್ಳುವುದು.

2. ಸಿ.ಆರ್.ಸಿ. ಕೇಂದ್ರಸ್ಥಾನದ ವಸತಿಯುತ ಕೇಂದ್ರಗಳಿಗೆ ಅಗತ್ಯವಾದ ಅನುದಾನವನ್ನು ಸಿ.ಎ.ಇ.ಓ. ಖಾತೆಗೆ ಕೂಡಲೇ ಜಮಾಮಾಡಿ.

3 ಕ್ಲಸ್ಟರ್ ಕೇಂದ್ರವನ್ನು ಹೊರತುಪಡಿಸಿ ನಡೆಯುವ ಚಿಣ್ಣರ ಅಂಗಳ ಕೇಂದ್ರದ ಹಣವನ್ನು ಮುಖ್ಯ ಶಿಕ್ಷಕರ ಖಾತೆಗೆ ಹಣ ಜಮಾವಣೆ ಮಾಡಿ ಕೇಂದ್ರ ನಡೆಯಲು ವ್ಯವಸ್ಥೆಗೊಳಿಸಬೇಕು.

4. ಶಾಲೆಯ ಮುಖ್ಯ ಶಿಕ್ಷಕರು ಕೇಂದ್ರ ನಿರ್ವಹಣೆಗೆ ಬೇಕಾದ ಅಗತ್ಯ ಸಾಮಗ್ರಿಗಳನ್ನು ಕೇಂದ್ರಗಳಿಗೆ ಒದಗಿಸಲು ತಿಳಿಸುವುದು. ಖರ್ಚು ಮಾಡಿದ ವಿವರಗಳಿಗೆ ನಿಯಮಾನುಸಾರ ಲೆಕ್ಕ ಪತ್ರ ನಿರ್ವಹಿಸುವ ಹೊಣೆ ಸಿ.ಎ.ಇ.ಓ/ಸಿ.ಆರ್.ಪಿ. ಅಥವಾ ಮುಖ್ಯ ಶಿಕ್ಷಕರದ್ದಾಗಿರುತ್ತದೆ ಹಾಗೂ ಕೇಂದ್ರಗಳು ಸಮರ್ಪಕವಾಗಿ ನಡೆಯುವಂತೆ ಉಸ್ತುವಾರಿಯನ್ನು ಕೇಂದ್ರದಲ್ಲಿದ್ದುಕೊಂಡು ಮುಖ್ಯ ಶಿಕ್ಷಕರು ಕ್ರಮಬದ್ಧವಾಗಿ ನಿರ್ವಹಿಸಬೇಕು. ಈ ಕೇಂದ್ರದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸಿದ ಶಿಕ್ಷಕರು/ಮುಖ್ಯ ಶಿಕ್ಷಕರಿಗೆ ಕೆ.ಸಿ.ಎಸ್.ಆರ್. ನಿಯಮ 113ರ ಉಪ ನಿಯಮ 3 (ಎ) ಪ್ರಕಾರ ಗಳಿಕೆ ರಜೆ ಸೌಲಭ್ಯವನ್ನು ನೀಡುವುದು.

**2008–09ರ ಚಿಣ್ಣರ ಅಂಗಳ ಕಾರ್ಯಕ್ರಮದ ವೇಳಾಪಟ್ಟಿ**

| | |
|---|---|
| ಚಿಣ್ಣರ ಅಂಗಳ ಕೇಂದ್ರಗಳ ಪ್ರಾರಂಭ | 16.04.08 |
| ಪ್ರಾರಂಭಿಕ ಹಂತ | 24.04.08 ವರೆಗೆ |
| ಪೂರ್ವಭಾವಿ ಪರೀಕ್ಷೆ | 25.04.08 |
| ಮಧ್ಯಂತರ ಮೌಲ್ಯಮಾಪನ | 25.05.08 |
| ಅಂತಿಮ ಮೌಲ್ಯಮಾಪನ | 14.06.08 |
| ಸಾಂಸ್ಕೃತಿಕ ಕಾರ್ಯಕ್ರಮ | 15.06.08 |
| ಚಿಣ್ಣರ ಅಂಗಳ ಮಕ್ಕಳನ್ನು ಶಾಲೆಗೆ ಸೇರಿಸುವುದು | 16.06.08 |

**ಘಟಕ ವೆಚ್ಚ ಮರು ಹಂಚಿಕೆ**

ಘಟಕ ವೆಚ್ಚದ ಮರು ಹಂಚಿಕೆ (ಪ್ರತಿ ಮಗುವಿನ ಘಟಕ ವೆಚ್ಚ 2 ತಿಂಗಳ ಅವಧಿಗೆ)

| ವಿವರ | ವಸತಿ ರಹಿತ ಚಿಣ್ಣರ ಅಂಗಳ ಪ್ರತಿ ಮಗುವಿಗೆ–500 | ವಸತಿಸಹಿತ ಚಿಣ್ಣರ ಅಂಗಳ |
|---|---|---|
| ಸ್ವಯಂ ಸೇವಕರ ಗೌರವಧನ | 80 | 160 |
| ಉಪಹಾರ/ಊಟ | 300 | 1000 |
| ಲೇಖನ ಸಾಮಗ್ರಿ | 60 | 60 |
| ಕಲಿಕೆ ಬೋಧನೆ ಸಾಮಗ್ರಿ | 60 | 60 |
| ಸಹಾಯಕ | – | 80 |
| ದೈನಂದಿನ ವಸ್ತುಗಳು | – | 60 |
| ಸಾದಿಲ್ವಾರು | – | 40 |
| ಬೇಸಿಗೆ ಶಿಬಿರ ಸಾಂಸ್ಕೃತಿಕ ಕಾರ್ಯಕ್ರಮ | – | 206 |
| | 500 | 1666 |

**ವಿಶೇಷ ಸೂಚನೆ :** ಸ್ವಯಂ ಸೇವಕರ / ಸಹಾಯಕರ ಗೌರವಧನವನ್ನು ಮಕ್ಕಳ ಸಂಖ್ಯೆಗೆ ಅಂದರೆ ಗರಿಷ್ಠ 25 ಮಕ್ಕಳಿಗೆ ಮಿತಿಗೊಳಿಸಿ ನೀಡುವುದು. ವಸತಿರಹಿತ ಕೇಂದ್ರಗಳ ಸ್ವಯಂ ಸೇವಕರ ಗೌರವಧನವನ್ನು ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ರೂ 60ರಂತೆ ಗರಿಷ್ಠ ತಿಂಗಳಿಗೆ ರೂ 1000.00 ನೀಡುವುದು ಈ ಮರುಹಂಚಿಕೆಯಂತೆ ಹೆಚ್ಚುವರಿಯಾಗಿ ಖರ್ಚಾಗಲಿರುವ ರೂ20ನ್ನು(ಪ್ರತಿ ಮಗು/ಪ್ರತಿ ತಿಂಗಳಿಗೆ) ಜಿಲ್ಲೆಯ ಆಡಳಿತಾತ್ಮಕ ವೆಚ್ಚದಿಂದ ಭರಿಸುವುದು.

**ಉಸ್ತುವಾರಿ :**

2008ರ ಚಿಣ್ಣರ ಅಂಗಳ ಮಾರ್ಗದರ್ಶಿ ಕೈಪಿಡಿಯಲ್ಲಿರುವಂತೆ ಉಸ್ತುವಾರಿಯನ್ನು ನಿರ್ವಹಿಸುವುದು.

**ವಿಶೇಷ ಸೂಚನೆ :**

ಕೆ.ಜಿ.ಬಿ.ವಿ. ಬ್ಲಾಕ್‌ಗಳಲ್ಲಿ ಕೆ.ಜಿ.ಬಿ.ವಿ. ಶಾಲೆಗಳಿಗೆ ಸೇರಬಹುದಾದ ಶಾಲೆಬಿಟ್ಟ ವಿದ್ಯಾರ್ಥಿನಿಯರನ್ನು ಗುರುತಿಸಿ ಅವರಿಗೆ ಕಡ್ಡಾಯವಾಗಿ ಚಿಣ್ಣರ ಅಂಗಳ ಕೇಂದ್ರಗಳನ್ನು ನಡೆಸುವುದು. ಎಸ್.ಸಿ/ಎಸ್.ಟಿ. ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿನಿಯರಿಗೆ ಆದ್ಯತೆ ನೀಡುವುದು.

**ಸಮುದಾಯದ ಭಾಗವಹಿಸುವಿಕೆ ಹಾಗೂ ನೆರವು :**

2008ರ ಮಕ್ಕಳ ಗಣತಿಯಂತೆ ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿಯನ್ನು ಶಾಲೆಗಳಲ್ಲಿ ಗ್ರಾಮ ಪಂಚಾಯಿತಿ ಫಲಕಗಳಲ್ಲಿ ಪ್ರಕಟಿಸಿ ಶಾಲೆಗೆ ಕರೆತರುವಲ್ಲಿ ಸಮುದಾಯದ ಪೋಷಕರು, ಮುಖಂಡರು, ಜನಪ್ರತಿನಿಧಿಗಳನ್ನು ಸಂಪರ್ಕಿಸಿ ಚಿಣ್ಣರ ಅಂಗಳ ಕೇಂದ್ರಗಳಿಗೆ ಪರ್ಯಾಯ ಶಾಲೆ ಹಾಗೂ ಮುಖ್ಯ ವಾಹಿನಿಗೆ ತರುವಲ್ಲಿ ನೆರವು ಪಡೆಯುವುದು.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಚಿಣ್ಣರ ಅಂಗಳ ಕೇಂದ್ರಕ್ಕೆ ಬರುವಂತೆ ಹಾಗೂ ನಂತರ ಶಾಲೆಗೆ ದಾಖಲಿಸಿ ನಿರಂತರವಾಗಿ ಹಾಜರಾಗುವಂತೆ ನಿಗಾವಹಿಸಲು ಸಮುದಾಯದ ಸಹಕಾರ ಪಡೆಯುವುದು.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸುವ ಮತ್ತು ನಿರಂತರವಾಗಿ ಶಾಲೆಗೆ ಹಾಜರಾಗುವಂತೆ ಮಾಡಲು ಈ ಮಕ್ಕಳನ್ನು ದತ್ತು ತೆಗೆದುಕೊಳ್ಳುವಂತೆ ಕೋರಿ ಸಮುದಾಯದ ನೆರವು ಪಡೆಯುವುದು.

ದಿನಾಂಕ 16.06.08 ರಂದು ಮಕ್ಕಳನ್ನು ಮುಖ್ಯವಾಹಿನಿಗೆ ದಾಖಲು ಮಾಡಿ ನಿರಂತರವಾಗಿ ಹಾಜರಾಗುವಂತೆ ಮಾಡುವಲ್ಲಿ ಸಮುದಾಯದ ಸಹಕಾರ ಪಡೆಯುವುದು.

ಚಿಣ್ಣರ ಅಂಗಳದಲ್ಲಿ ದಾಖಲಾದ ಬಡ ಮಕ್ಕಳಿಗೆ ಹೆಚ್ಚಿನ ಅಗತ್ಯ ನೆರವು ನೀಡಲು ಸಮುದಾಯದ ಸ್ಥಳೀಯ ಸರ್ಕಾರ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ನೆರವು ಪಡೆಯುವುದು. ಈ ಬಾರಿಯ ಚಿಣ್ಣರ ಅಂಗಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ದಟ್ಟವಾಗಿ ಬರುತ್ತದೆ. ಕಾರ್ಯಕ್ರಮ ಲವಲವಿಕೆಯಿಂದ ಕೂಡಿರಬೇಕೆಂಬುದು ಆಶಯ, ಸ್ಥಳೀಯ ಸಹಕಾರ/ಅವರ ಪ್ರತಿಭೆಗಳನ್ನು ಬಳಸಿ ಮಕ್ಕಳಿಗೆ ತರಬೇತಿಗೊಳಿಸುವ/ಪ್ರದರ್ಶಿಸುವ ಕೆಲಸವನ್ನು ಸಮುದಾಯದ ನೆರವಿನೊಂದಿಗೆ ಮಾಡುವುದು.

**ಮಾಹಿತಿ ರವಾನೆ ಮತ್ತು ದಾಖಲೀಕರಣ :**

ಜಿಲ್ಲೆಯಲ್ಲಿ ನಡೆಯುವ ಚಿಣ್ಣರ ಅಂಗಳ ಕೇಂದ್ರಗಳ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ದಾಖಲೀಕರಣವನ್ನು ಡಿವೈಪಿಸಿ ಮತ್ತು ಬಿಆರ್‌ಸಿಯವರು ಮಾಡುವುದು. ಇದಕ್ಕಾಗಿ ಪ್ರತಿ ಜಿಲ್ಲೆಗೆ ರೂ. 200 ನ್ನು ಜಿಲ್ಲೆಯ ನಿರ್ವಹಣಾ ವೆಚ್ಚದಿಂದ ಭರಿಸಬಹುದು.

ದಾಖಲೀಕರಣದ ಪುಟಗಳ ಸಂಖ್ಯೆ 15 ರಿಂದ 20 ಪುಟಗಳಿರಲಿ. ಕೇಂದ್ರದ ಹೆಸರು, ಮಕ್ಕಳ ಸಂಖ್ಯೆ (ಜಾತಿವಾರು, ತರಗತಿವಾರು, ಲಿಂಗವಾರು) ಅಧ್ಯಾಪಕರ/ಸ್ವಯಂ ಸೇವಕರು, ಭೇಟಿ ನೀಡಿದ ಅಧಿಕಾರಿಗಳು ಭೇಟಿಗಳ ಸಂಖ್ಯೆ, ಸಂದರ್ಶಕರ ಮುಖ್ಯ ಅಭಿಪ್ರಾಯಸಾರ, ಮಕ್ಕಳ ಕಲಿಕೆಯ ಮಟ್ಟ, ಸಮುದಾಯದ ಸಹಕಾರ, ನೆರವು, ಚಿಣ್ಣರ ಅಂಗಳ ನಡೆದಿರುವ ಪ್ರತಿಕ್ರಿಯೆ ಕುರಿತ ಮಕ್ಕಳ/ಅಧ್ಯಾಪಕರ/ಪೋಷಕರ ಅಭಿಪ್ರಾಯ ಕುರಿತ ಮಾಹಿತಿ, ಗುರುತಿಸಿದ ವಿಶೇಷತೆ ಇತ್ಯಾದಿ ಸಂಗತಿಗಳನ್ನು ಆಧರಿಸಿ ಸೂಕ್ತ ಫೋಟೋಗಳೊಂದಿಗೆ (ಅನಗತ್ಯವಾದವು ಬೇಡ) ವರದಿಯನ್ನು ತಯಾರಿಸಿ 30 ಜೂನ್ 2008ರೊಳಗೆ ರಾಜ್ಯ ಕಛೇರಿಗೆ ಸಲ್ಲಿಸುವುದು.

16.06.2008 ರಂದು ಮಕ್ಕಳನ್ನು ಮುಖ್ಯವಾಹಿನಿಗೆ ದಾಖಲೆ ಮಾಡಲು; ಪ್ರವೇಶ ದಾಖಲೆಯಲ್ಲಿ ಹೆಸರಿಲ್ಲದಿರುವ ಮಕ್ಕಳನ್ನು ಶಾಲೆಗೆ ದಾಖಲಿಸಿ ಚಿಣ್ಣರ ಅಂಗಳದಿಂದ ಬಂದ ಮಕ್ಕಳು ನಿರಂತರವಾಗಿ ಶಾಲೆಗೆ ಬರುತ್ತಿರುವ ಬಗ್ಗೆ ನಿಗಾವಹಿಸುವುದು ಹಾಗೂ ಅಧ್ಯಾಪಕರು/ಎಸ್.ಡಿ.ಎಂ.ಸಿ. ಸದಸ್ಯರು ಗ್ರಾಮ ಪಂಚಾಯಿತಿ ಸದಸ್ಯರು. ಈ ಮಕ್ಕಳನ್ನು ದತ್ತು ತೆಗೆದುಕೊಳ್ಳುವಂತೆ ಪ್ರೇರೇಪಿಸುವುದು.

**ಕಾರ್ಯಕ್ರಮದ ಸ್ಥೂಲ ವೇಳಾಪಟ್ಟಿ**

| | | |
|---|---|---|
| 1 | ಚಿಣ್ಣರ ಅಂಗಳ ನಡೆಯುವ ಸ್ಥಳ ಗುರುತಿಸುವಿಕೆ | 15.03.2008 |
| 2 | ಒಒಎಸ್‌ಸಿ ಮಕ್ಕಳ ಮತ್ತು ನಿಧಾನ ಕಲಿಕೆಯವರನ್ನು ಗುರುತಿಸುವುದು | 15.03.2008 |
| 3 | ಆಸಕ್ತ ಅಧ್ಯಾಪಕರ ಪಟ್ಟಿ ತಯಾರಿಕೆ | 15.03.2008 |
| 4 | ಸ್ವಯಂ ಸೇವಕರ/ಸಹಾಯಕರ ಪಟ್ಟಿ ತಯಾರಿಕೆ | 15.03.2008 |
| 5 | ಜಿಲ್ಲಾ ಆರ್.ಪಿ.ಗಳ ಆಯ್ಕೆ/ಸಲ್ಲಿಕೆ | 16.03.2008 |
| 6 | ಜಿಲ್ಲಾ ಆರ್.ಪಿ. ತರಬೇತಿ | 20.03.2008 |
| 7 | ಜಿಲ್ಲಾ ಕೇಂದ್ರಗಳಿಗೆ ಚಿಣ್ಣರ ಅಂಗಳ ಸಾಹಿತ್ಯದ ಸರಬರಾಜು | 31.03.2008ರೊಳಗೆ |
| 8 | ಚಿಣ್ಣರ ಅಂಗಳ ಸಾಹಿತ್ಯ ಜಿಲ್ಲೆಯಿಂದ ತಾಲ್ಲೂಕು/ಚಿ.ಅಂ. ಕೇಂದ್ರಗಳಿಗೆ ವಿತರಣೆ | 02.04.2008ರೊಳಗೆ |
| 9 | ತಾಲ್ಲೂಕು ಆರ್.ಪಿ. ತರಬೇತಿ | 08.04.2008ರೊಳಗೆ |
| 10 | ಕೇಂದ್ರ ಕಛೇರಿಗೆ ಚಿ.ಅಂ.ಕೇಂದ್ರಗಳ ಮಾಹಿತಿ ರವಾನೆ | 10.04.2008 ರೊಳಗೆ |
| 11 | ಶಿಕ್ಷಕರ/ಸ್ವಯಂಸೇವಕರ ತರಬೇತಿ | 14.04.2008 ರೊಳಗೆ |
| 12 | ಚಿಣ್ಣರ ಅಂಗಳ ಪ್ರಾರಂಭ | 16.04.2008 ರೊಳಗೆ |
| 13 | ಆರಂಭಿಕ ಪರೀಕ್ಷೆ | 25.04.2008 |
| 14 | ಮಧ್ಯಂತರ ಮೌಲ್ಯಮಾಪನ | 25.05.2008 |
| 15 | ಅಂತಿಮ ಮೌಲ್ಯ ಮಾಪನ | 14.06.2008 |
| 16 | ಸಾಂಸ್ಕೃತಿಕ ಕಾರ್ಯಕ್ರಮ | 15.06.08 |
| 17 | ಶಾಲೆಗೆ ಸೇರ್ಪಡೆ | 16.06.2008 |

**ಮಾಹಿತಿ ರವಾನೆ**

ಬೋಧಕರ ಕೈಪಿಡಿಯಲ್ಲಿ ನೀಡಿರುವ ನಮೂನೆಗಳನ್ನು ಸೂಚಿಸಿರುವ ದಿನಾಂಕಗಳೊಳಗೆ ಸಂಬಂಧಿಸಿದ ಕಛೇರಿಗೆ ಕಳುಹಿಸುವುದು. ಚಿಣ್ಣರ ಅಂಗಳ ಕೇಂದ್ರ ನಡೆಯುವ ಸ್ಥಳ–ಮಕ್ಕಳ ಸಂಖ್ಯೆ, ಸ್ವಯಂ ಸೇವಕರು/ಶಿಕ್ಷಕರ ಹೆಸರು ಇತ್ಯಾದಿ ಸಂಗತಿಗಳನ್ನು ದಿ : 10.04.2008 ರೊಳಗೆ ಡಿವೈಪಿಸಿ ಯವರು ಕೇಂದ್ರ ಕಛೇರಿಗೆ ಕಳುಹಿಸುವುದು ಹಾಗೂ ಮೇಲಿನಂತೆ ನಡೆದಿರುವ ವಿವರವನ್ನು 30.06.2008 ರೊಳಗೆ ಕೇಂದ್ರ ಕಛೇರಿಗೆ ಕಳುಹಿಸುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ರಾಜ್ಯ ಯೋಜನಾ ನಿರ್ದೇಶಕರು,
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು

---

## ಕರ್ನಾಟಕ ಸರ್ಕಾರ

2006 ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು,

ಸಂಖ್ಯೆ : ಇಡಿ161 ಎಸ್‌ಇಪಿ    ದಿನಾಂಕ :29.12.2007

## ಸುತ್ತೋಲೆ

**ವಿಷಯ : ದಿನಾಂಕ 25.10.2007ರ ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 161 ಎಸ್‌ಇಪಿ 2006ರನ್ವಯ ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ವಿಧಾನವನ್ನು ಮಾರ್ಪಡಿಸಿ, ಸಂದರ್ಶನ ಇಲ್ಲದೇ ನಿಗದಿತ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ನೇರ ನೇಮಕಾತಿ ಮಾಡಲು ಉಪಬಂಧ ಕಲ್ಪಿಸಿರುವ ಬಗ್ಗೆ.**

ಉಲ್ಲೇಖ: (1) ದಿನಾಂಕ 25.10.2007ರ ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 161 ಎಸ್‌ಇಪಿ 2006.

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ದಿನಾಂಕ : 25–10–2007ರ ಅಧಿಸೂಚನೆ ಅನ್ವಯ (ಪ್ರತಿ ಲಗತ್ತಿಸಿದೆ) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಹಾಗೂ ನಿಬಂಧನೆಗಳು ನಿಯಮಗಳು, 1999ಕ್ಕೆ ತಿದ್ದುಪಡಿ ಮಾಡಿ, ಅದರ ಅನುಬಂಧ–1ನ್ನು ರದ್ದುಪಡಿಸಿ, ಹೊಸ ಅನುಬಂಧ–1ನ್ನು ನಿಗದಿಪಡಿಸಲಾಗಿದೆ. ಆ ಅನುಬಂಧದನ್ವಯ, ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ವಿಧಾನವನ್ನು ನಿಗದಿಪಡಿಸಲಾಗಿದೆ. ಅದರ ಮುಖ್ಯಾಂಶವೇನೆಂದರೆ, “ಈ ಹಿಂದೆ ಜಾರಿಯಲ್ಲಿದ್ದ ಅನುಬಂಧ–1ರ ಪ್ರಕಾರ ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಹುದ್ದೆಗಳಿಗೆ ಸಂದರ್ಶನ ಮತ್ತು ನಿಗದಿತ ಅರ್ಹತಾ ಪರೀಕ್ಷೆಯಲ್ಲಿ

ಗಳಿಸಿದ ಅಂಕಗಳ ಅಧಾರದ ಮೇಲೆ ನೇರ ನೇಮಕಾತಿ ಮಾಡಲು ಆಸ್ಪದವಿತ್ತು. ಅದನ್ನು ಬದಲಾಯಿಸಿ, ಈಗ ಸಂದರ್ಶನದ ಅಂಶವನ್ನು ತೆಗೆದು ಹಾಕಿ ನಿಗದಿತ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮಾತ್ರ ನೇರ ನೇಮಕಾತಿ ಮಾಡಲು ಆಸ್ಪದ ಕಲ್ಪಿಸಲಾಗಿದೆ".

2. ಮೇಲೆ ಉಲ್ಲೇಖಿಸಿದ, ಸಂದರ್ಶನ ಇಲ್ಲದೇ ಕೇವಲ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ನೇರ ನೇಮಕಾತಿ ಮಾಡಲು ಆಸ್ಪದ ಕಲ್ಪಿಸುವ ಉಪಬಂಧ, ದಿನಾಂಕ 28.10.2007ರಿಂದ ಜಾರಿಗೆ ಬಂದಿದೆ. ಆ ದಿನಾಂಕದ ನಂತರ ಯಾವುದೇ ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹುದ್ದೆಗಳನ್ನು ತುಂಬಲು ಸಂಬಂಧಿಸಿದ ಖಾಸಗಿ ಶಿಕ್ಷಣ ಸಂಸ್ಥೆ ಸಂದರ್ಶನ ನಡೆಸಿದ್ದಲ್ಲಿ ಅದು ಊರ್ಜಿತವಾಗುವುದಿಲ್ಲ. ಅಂತಹ ಪ್ರಕರಣಗಳಲ್ಲಿ ಹೊಸದಾಗಿ ಆಯ್ಕೆ ಪ್ರಕ್ರಿಯೆಯನ್ನು ದಿನಾಂಕ 25.10.2007ರ ಅಧಿಸೂಚನೆಯನ್ವಯ, ನಡೆಸಲಾಗುತ್ತದೆ ಎಂದು ಈ ಮೂಲಕ ಸ್ಪಷ್ಟೀಕರಿಸಿದೆ.

3. ಉಲ್ಲೇಖದ ದಿನಾಂಕ 25.10.2007ರ ಅಧಿಸೂಚನೆಯಲ್ಲಿ ಒಳಗೊಂಡ ತಿದ್ದುಪಡಿಯನ್ನು ಅವರವರ ವ್ಯಾಪ್ತಿಯಲ್ಲಿ ಬರುವ ಸಂಬಂಧಿಸಿದ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಗಮನಕ್ಕೆ ತರಲು ಆಯುಕ್ತರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಧಾರವಾಡ/ಗುಲ್ಬರ್ಗಾ, ಇವರು ಅಗತ್ಯ ಕ್ರಮ ತೆಗೆದುಕೊಳ್ಳಲು ಈ ಮೂಲಕ ಸೂಚಿಸಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬಲು ನೇರ ನೇಮಕಾತಿ ಮಾಡುವ ಸಂದರ್ಭದಲ್ಲಿ ದಿನಾಂಕ : 25.10.2007 ರಿಂದ ಜಾರಿಗೆ ಬರುವಂತೆ ಸಂದರ್ಶನ ಅಂಶವಿಲ್ಲದೆ ನಿಗದಿತ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ, ಆಯ್ಕೆ ಮಾಡತಕ್ಕದೆಂಬ ಅಂಶವನ್ನು ಸಂಬಂಧಿಸಿದ ಎಲ್ಲಾ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಗಮನಕ್ಕೆ ತರಬೇಕೆಂದು ಸೂಚಿಸಿದೆ.

**ಸ್ವರ್ಣಲತಾ ಎಂ. ಭಂಡಾರೆ**
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರೌಢಶಿಕ್ಷಣ), ಶಿಕ್ಷಣ ಇಲಾಖೆ

## ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–1**

ಸಂಖ್ಯೆ: ಸ.ಶಿ.ಅ./ಪ.ಬೋ/ರಸೀದಿ/2007–07 ದಿನಾಂಕ : 27.02.2008

## ಸುತ್ತೋಲೆ

**ವಿಷಯ : ಸಮುದಾಯದತ್ತ ಶಾಲಾ ಕಾರ್ಯಕ್ರಮದಂದು ಪರಿಹಾರ ಬೋಧನೆಗೆ ಒಳಪಟ್ಟ ಮಕ್ಕಳಿಗೆ "ಚಾವಡಿ ವಾಚನ" ಮಾಡಿಸುವ ಕುರಿತು.**

**ಉಲ್ಲೇಖ:** ದಿನಾಂಕ 18.01.2008 ರ ಇ.ಸಿ. ಸಭೆಯಲ್ಲಿ ಚರ್ಚಿಸಿದಂತೆ

ದಿನಾಂಕ 18.01.2008 ರಂದು ನಡೆದ ಕಾರ್ಯಕಾರಿ ಸಮಿತಿಯಲ್ಲಿ ಮಾನ್ಯ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣರವರು ಮಕ್ಕಳಿಂದ ಚಾವಡಿ ವಾಚನ ನಡೆಸುವ ಬಗ್ಗೆ ಸಲಹೆ ನೀಡಿರುತ್ತಾರೆ.

ಕಲಿಕಾ ಆಂದೋಲನ ಕಾರ್ಯಕ್ರಮವು ರಾಜ್ಯವ್ಯಾಪಿ ಎಲ್ಲಾ ಸರಕಾರಿ ಕಿರಿಯ / ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಾಲಾ ಶಿಕ್ಷಕರಿಂದಲೇ ಪ್ರತಿದಿನ ಶಾಲೆಯ ಅವಧಿಯ ಮುನ್ನ ಅಥವಾ ನಂತರ ನಡೆಯುತ್ತಿರುವ ವಿಶೇಷ ಬೋಧನಾ ಕಾರ್ಯಕ್ರಮ. ಈ ಕಾರ್ಯಕ್ರಮದ ಪ್ರಗತಿಯನ್ನು ಸಾರ್ವಜನಿಕರು ಮತ್ತು ಪಾಲಕರು ವೀಕ್ಷಿಸಲು ಅನುಕೂಲವಾಗುವಂತೆ 2007–08ನೇ ಸಾಲಿನಲ್ಲಿ ದಿನಾಂಕ 08.04.2008ರಂದು ನಡೆಯಲಿರುವ ಕೊನೆಯ ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ 'ಚಾವಡಿ ವಾಚನ' ಎನ್ನುವ ಹೆಸರಿನಲ್ಲಿ ಪರಿಹಾರ ಬೋಧನೆಗೆ ಗುರ್ತಿಸಲ್ಪಟ್ಟ ಮಕ್ಕಳಿಂದ ಕನ್ನಡ, ಇಂಗ್ಲಿಷ್ ಭಾಷೆಯನ್ನು ಗಟ್ಟಿಯಾಗಿ, ಸರಾಗವಾಗಿ ಓದಿಸುವ ವ್ಯವಸ್ಥೆಯನ್ನು ಮಾಡುವುದು. ಈ ಮೂಲಕ ಕಲಿಕಾ ಆಂದೋಲನದ ಪ್ರಗತಿಯನ್ನು ಸಾರ್ವಜನಿಕರ ಮುಂದೆ ಪ್ರದರ್ಶಿಸಲು ತಿಳಿಸಿದೆ.

ಸಮುದಾಯದತ್ತ ಶಾಲೆ ಕಾರ್ಯಕ್ರಮ ನಡೆಯುವ ದಿನದಂದು ಪರಿಹಾರ ಬೋಧನೆಗೆ ಒಳಪಟ್ಟ ಮಕ್ಕಳ ಪೋಷಕರನ್ನು ಕರೆಯಿಸಿ, ಚಾವಡಿ ವಾಚನಕ್ಕೆ ಪ್ರತ್ಯೇಕ ಅವಧಿಯನ್ನು ಸಮುದಾಯದತ್ತ ಕಾರ್ಯಕ್ರಮದಲ್ಲಿ ನೀಡಿ–ಈ ಮಕ್ಕಳ ಓದುವ; ಬರೆಯುವ ಕೌಶಲದಲ್ಲಿ ಆಗಿರುವ ಅಭಿವೃದ್ಧಿಯನ್ನು ಪೋಷಕರು ಗಮನಿಸುವಂತೆ ಮಾಡಲು ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳಲು ತಿಳಿಸಿದೆ. ಕೈಗೊಂಡ ಕ್ರಮದ ಬಗ್ಗೆ ಮತ್ತು ಕಾರ್ಯಾನುಷ್ಠಾನ ಮಾಡಿರುವುದರ ಬಗ್ಗೆ ವರದಿಯನ್ನು ಜಿಲ್ಲಾ ಉಪನಿರ್ದೇಶಕರು(ಆ) ರವರಿಗೆ ನೀಡುವುದು.

**ಸಹಿ/**
ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

# ಚಿತ್ರಸುದ್ದಿ



ಹಾವೇರಿಜಿಲ್ಲೆ, ಬ್ಯಾಡಗಿ ತಾ॥, ಬನ್ನಿಹಟ್ಟಿ ಸ.ಹಿ.ಪ್ರಾ.ಶಾಲೆಯಲ್ಲಿ **SSA** ಅಡಿಯಲ್ಲಿ **Work Education** ನಲ್ಲಿ ವಿದ್ಯಾರ್ಥಿಗಳಿಗೆ ಅಗರಬತ್ತಿ ತಯಾರಿಕೆ ಕುರಿತು ತರಬೇತಿ ಯನ್ನು ಎಸ್.ಡಿ.ಎಂ.ಸಿ. ಅಧ್ಯಕ್ಷ ಹೆಚ್. ಸಿ. ಬುಡ್ಡನಗೌಡ ಉದ್ಘಾಟಿಸಿದರೆ ಬಿ.ಎಲ್. ದ್ಯಾಮನಗೌಡ ಗ್ರಾ.ಪಂ. ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಗ್ರಾಪಂ. ಉಪಾಧ್ಯಕ್ಷರು, ಸದಸ್ಯರು, ಎಸ್.ಡಿ.ಎಂ.ಸಿ. ಸದಸ್ಯರು ಉಪಸ್ಥಿತರಿದ್ದರು.

– ವೈ.ಟಿ. ಹೆಬ್ಬಳ್ಳ
ಪ್ರಧಾನ ಗುರುಗಳು




ದಿನಾಂಕ 31.1.2008ರಂದು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಜಕ್ಕನಹಳ್ಳಿ, ಚಗಚಗೆರೆ ಕ್ಲಸ್ಟರ್, ಅರಸೀಕೆರೆ ತಾ॥ ಸಮುದಾಯದತ್ತ ಶಾಲಾ ಕಾರ್ಯಕ್ರಮ ಹಾಗೂ ದಾನಿಗಳ ಮೇಳ ಹಮ್ಮಿಕೊಳ್ಳಲಾಗಿತ್ತು ಸಭೆಯ ಅಧ್ಯಕ್ಷತೆಯನ್ನು ಶಾಲಾ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಜೆ.ಟಿ. ಕೃಷ್ಣೇಗೌಡರವರು ವಹಿಸಿದ್ದರು. ದಾನಿಗಳ ಮೇಳದಲ್ಲಿ ಊರಿನ ದಾನಿಗಳಿಂದ ಆರು ಅಡಿ ಎತ್ತರದ ಒಂದು ಗಾಡ್ರೇಜ್ ಬೀರು, ಕುಷನ್‌ಛೇರ್, ವಾಟರ್ ಫಿಲ್ಟರ್, ಸ್ಟ್ಯಾಂಡ್ ರ್‍ಯಾಕ್ಸ್, ಸ್ಟ್ಯಾಂಡ್ ವಾಲಿಬಾಲ್ ರಿಂಗ್ಸ್, ಸ್ಕೇಟಿಂಗ್ ರೋಪ್, ತಟ್ಟೆ ಸ್ಟ್ಯಾಂಡ್, 20 ಲೋಟಗಳು, ರುಬ್ಬುವ ಕಲ್ಲುಗುಂಡು, ಎಫ್. ಎಂ. ರೇಡಿಯೋ, ಫೋಟೋಗಳು, ಕುಕ್ಕರ್, ತಟ್ಟೆಗಳು ಪ್ಲಾಸ್ಟಿಕ್ ಛೇರ್ ಮತ್ತು ಸ್ಟೀಲ್ ಪಾತ್ರೆಗಳನ್ನು ಪಡೆಯಲಾಯಿತು.

– ಮುಖ್ಯೋಪಾಧ್ಯಾಯರು
ಸ.ಕಿ.ಪ್ರಾ.ಶಾ.



ದಿನಾಂಕ 31.1.2008 ರಂದು ಎಸ್.ಡಿ.ಎಂ.ಸಿ. ಹಾಗೂ ಸಮುದಾಯದ ಸಹಭಾಗಿತ್ವದಲ್ಲಿ ಶಾಲೆಯಲ್ಲಿ ವಿಶೇಷ ಸಮುದಾಯದತ್ತ ಶಾಲೆ ಕಾರ್ಯಕ್ರಮ ವಿಶಿಷ್ಟವಾಗಿ ನಡೆಯಿತು.ಕಾರ್ಯಕ್ರಮದ ಅಂಗವಾಗಿ "ತಾಯಂದಿರ ಭೇಟಿ" ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶಾಲೆಯಲ್ಲಿ ಮಕ್ಕಳು ಮತ್ತು ಶಿಕ್ಷಕರ ಪಾತ್ರ, ಮನೆಯಲ್ಲಿ ಮಕ್ಕಳು ಮತ್ತು ತಂದೆ–ತಾಯಿಯವರ ಪಾತ್ರದ ಬಗ್ಗೆ ಚರ್ಚಿಸಲಾಯಿತು. ಪ್ರಭಾರಿ ಕ್ಷೇತ್ರ ಸಮನ್ವಯಾಧಿಕಾರಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪೋಷಕರೊಡನೆ ಚರ್ಚಿಸಿದರು. ಶಾಲೆಗೆ ಸಮುದಾಯ ನೀಡಿರುವ ಕೊಡುಗೆಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಹಾಗೂ ಮಕ್ಕಳು ತಯಾರಿಸಿದ್ದ ಕಲಿಕಾ ಉಪಕರಣಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

– ಜಿ.ವಿ. ಗೋಕಾಕ್, ಮು.ಶಿ.



ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ / ಕ್ಷೇತ್ರ ಸಂಪನ್ಮೂಲ ಕೇಂದ್ರ ಅರಸೀಕೆರೆ ಇವರ ಸಹಕಾರದೊಂದಿಗೆ ಅಗ್ಗುಂದ ಹಾಗೂ ಬೆಳಗುಂದ ಕ್ಲಸ್ಟರ್‌ಗಳ ವತಿಯಿಂದ ದಿನಾಂಕ 30.01.2008ರಂದು ಬುಧವಾರ ಬೆಳಿಗ್ಗೆ 10.30ಕ್ಕೆ ಮಾಲೇಕಲ್ಲು ತಿರುಪತಿ ಚಂದ್ರಶೇಖರಭಾರತಿ ಸಭಾಂಗಣದಲ್ಲಿ ಶೈಕ್ಷಣಿಕ ಚಿಂತನಾ ಕಾರ್ಯಕ್ರಮ ಹಾಗೂ ಶೈಕ್ಷಣಿಕ ಸಂವಾದ ಕಾರ್ಯಕ್ರಮವನ್ನು ಹೆಚ್. ಎಸ್. ಚಂದ್ರಶೇಖರ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅರಸೀಕೆರೆ ಇವರ ಅಧ್ಯಕ್ಷತೆಯಲ್ಲಿ, ಶಿವೇಗೌಡ ಅಧ್ಯಕ್ಷರು ಜಿಲ್ಲಾ ಪ್ರಾಥಮಿಕ ಶಿಕ್ಷಕರ ಸಂಘ ಹಾಸನ ಇವರು ಉದ್ಘಾಟಿಸಿದರು. ಹಿರೇಮಗಳೂರು ಕಣ್ಣನ್‌ರವರು ಪ್ರಧಾನ ಭಾಷಣಕಾರರಾಗಿ ಭಾಗವಹಿಸಿದ್ದರು.ಪರಿಹಾರ ಬೋಧನೆ, ಕೆ.ಎಸ್.ಕ್ಯೂ. ಎ.ಓ. ಸಮುದಾಯದತ್ತ ಕಾರ್ಯಕ್ರಮದ ಬಗ್ಗೆ ಸಂವಾದ ಕಾರ್ಯಕ್ರಮವನ್ನು ಪ್ರಾಂಶುಪಾಲರಾದ ಕೃಷ್ಣಶೆಟ್ಟಿಯವರು ನಡೆಸಿಕೊಟ್ಟರು.

–ಕ್ಷೇತ್ರಶಿಕ್ಷಣಾಧಿಕಾರಿ, ಅರಸೀಕೆರೆ, ಹಾಸನ ಜಿಲ್ಲೆ.

ತಿಂಗಳ ಪದ

# ಮರಿ ಮೊಗ್ಗುಗಳೇ

ನಿರ್ಮಲ ಮನಸಿನ ಮರಿ ಮೊಗ್ಗುಗಳೇ
ನಿಶ್ಚಲ ಬಾನಿನ ಬಾನಾಡಿಗಳೇ
ಕಲಿಸಿರಿ ನಿಮ್ಮಯ ಕಲಿಕೆಗಳ
ತೊಳೆಯಿರಿ ನಮ್ಮಯ ಮನಸುಗಳ ॥

ಬಲು ಇಷ್ಟ ಮಕ್ಕಳೇ ನಿಮ್ಮಯ ಗುಣವು
ಕ್ಷಣದೊಳು ಜಗಳ ಮತ್ತದೇ ಸ್ನೇಹ
ನಾಚಲೇಬೇಕಿದೆ ನಿಮ್ಮಯ ಸ್ನೇಹಕೆ
ಜಾತಿ ಮತಗಳ ಭೇದವಿಲ್ಲದಕೆ ॥



ಕಲಿಯಲೇಬೇಕಿದೆ ನಿಮ್ಮಿಂದ
ಲಿಂಗಭೇದವಿರದ ಆ ಸಂಬಂಧ
ವ್ಯರ್ಥವೆನಿಸಿದೆ ನಮ್ಮಯ ಓದು
ಸಾರ್ಥಕವೆನಿಸಿದೆ ನಿಮ್ಮಯ ಬದುಕು ॥

ಕಿವುಡರಾಗಿರಿ ಕೆಟ್ಟಮಾತುಗಳಿಗೆ
ಕುರುಡರಾಗಿರಿ ಕೆಟ್ಟ ಚಿತ್ರಗಳಿಗೆ
ಮೂಕರಾಗದಿರಿ ಅನ್ಯಾಯಗಳಿಗೆ
ಅನ್ಯಾಯವೆಸಗದಿರಿ ಸಮಾಜಕೆ



ಕಲಿಯಿರಿ ಉತ್ತಮ ಕಲಿಕೆಗಳು
ನಿರ್ಮಲವಾಗಲು ಮನಸುಗಳು
ನಡೆಯಿರಿ ಉಜ್ವಲ ಭವಿಷ್ಯಕೆ
ನಾಳಿನ ನಾಡಿನ ಏಳಿಗೆಗೆ



– ಎಂ.ಹೆಚ್. ಹುಬ್ಬಳ್ಳಿ (ಜಮೀನ) ಸ.ಶಿ.
ಸ.ಕಿ.ಪ್ರಾ.ಶಾಲೆ ದ್ಯಾಮನಗೌಡ್ರತೋಟ
ಮುನವಳ್ಳಿ, ತಾ ಸವದತ್ತಿ, ಬೆಳಗಾವಿ ಜಿಲ್ಲೆ

www.schooleducation.kar.nic.in
Published by : commissioner for Public Instruction and State Project Director, Sarva Shikshana Abhiyana, Karnataka
Nrupatunga Road, Bengaluru-560 001. Ph : 080 - 2224 6976
Printed at : Abhimaani Publication Ltd., Dr. Rajkumar Road, Rajajinagar, Bengaluru - 560 010, Ph : 23123141